

ಸಂಪುಟ 21 ಸಂಚಿಕೆ 22 ಮೇ 24-30, 1999 ರೂ 3.00 ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಮಹಿಳೆಯರ ಕಣ್ಣೀರ ಕೋಡಿಗ ಹೊಣೆ ಯಾರು?



ಊಸುರುವಳ್ಳಿ ನಾಚಿಸುವ ಬಿಜೆಪಿಯ ಹೊಸರಂಗ

ದುರಾಡಳಿತದ ಗಬ್ಬುನಾತ ಮರೆಸಲು 'ಹುಟ್ಟು' ಚರ್ಚೆಯ ಊದುಬತ್ತಿ

ಸಾಮ್ರಾಜ್ಯಶಾಹಿ ಎದೆಯಲ್ಲಿ ನಡುಕ ತರುವ ಝಪಾಟಿಸ್ಟರು



ಒಂದೇ ಓಟು

ಒಂದು ಓಟಿನಿಂದ ಸೋತ ಬಿಜೆಪಿ ಸರ್ಕಾರಕ್ಕೆ ಕುಟುಂಬದ ಪ್ರತಿಯೊಬ್ಬರೂ ಒಂದೊಂದು ಓಟು ಕೊಡಿ . ಇದು ಹುಬ್ಬಳ್ಳಿಯಿಂದ ವಾಜಪೇಯಿಯವರ ಯಾಚನೆ. ಈ ಸಂದೇಶ ಹಳ್ಳಿ ಹಳ್ಳಿಗೆ, ಗಲ್ಲಿಗಲ್ಲಿಗೆ ಮನೆಮನೆಗೆ ಮುಟ್ಟಬೇಕು. ಇದು ಅವರ ಪಕ್ಷದ ಕಾರ್ಯಕರ್ತರಿಗೆ ಕರೆ.

ಒಂದೇ ಒಂದು ಓಟು ಕುಟುಂಬದಲ್ಲಿ ಸಂಪಾದಿಸುವ ಹಿರಿಯರಿಗೆ ಗಂಡನಾಗಲಿ, ಹೆಂಡತಿಯಾಗಲಿ ಅವರು ಕಾರ್ಮಿಕರಾಗಿದ್ದರೆ ಅವರು ದುಡಿಯುತ್ತಿರುವ ಸಾರ್ವಜನಿಕ ಉದ್ಯಮ ಮುಚ್ಚುವುದಕ್ಕೆ ಅಥವಾ ಇತರೆ ಅನೇಕ ಕೈಗಾರಿಕೆಗಳನ್ನು ನಾಶಮಾಡುವ ಆಮದು ನೀತಿ ತಂದು ಉಕ್ಕು, ಸಿಮೆಂಟ್, ಕಾಗದ, ಕಾರು, ವಾಹನಗಳು, ಬಿಡಿಭಾಗಗಳು ಇವುಗಳನ್ನು ಮುಕ್ತವಾಗಿ ಆಮದುಮಾಡುತ್ತಾ ಲಕ್ಷಗಟ್ಟಲೇ ಕಾರ್ಖಾನೆಗಳು ಮುಚ್ಚಿಕೊಳ್ಳುವಂತೆ ಮಾಡಿರುವುದಕ್ಕೆ ಒಂದೇ ಒಂದು ಓಟು.

ಸಾರ್ವಜನಿಕ ಉದ್ಯಮಗಳಲ್ಲಿ ಕಾರ್ಮಿಕರು ಹೆಚ್ಚು ವೇತನ, ಇತರ ಸೌಲಭ್ಯ ಪಡೆಯಲಾಗದಂತೆ ಅದ್ದಿ ದೂಡುತ್ತಿರುವುದಕ್ಕೆ, ಟೆಲಿಕಾಂ ನೌಕರರು, ಅಧ್ಯಾಪಕರು, ದೂರದರ್ಶನ, ಆಕಾಶವಾಣಿಗಳ ಸಹಾಯಕ ಸಿಬ್ಬಂದಿ ಇವರೆಲ್ಲರ ಬೇಡಿಕೆ ಮುಷ್ಕರಗಳನ್ನು ಅವಗಣನೆ ಮಾಡಿರುವುದಕ್ಕೆ ಖಾಯಂ ನೌಕರಿಗೆ ಬದಲಾಗಿ ಗುತ್ತಿಗೆ ನೌಕರಿಗಳನ್ನು ಅಭದ್ರತೆಯನ್ನು ಸೃಷ್ಟಿಸುತ್ತಿರುವುದಕ್ಕೆ ಒಂದೇ ಒಂದು ಓಟು. ಕಾರ್ಮಿಕರು ಸಂಘ ಕಟ್ಟಿಕೊಳ್ಳಲಾಗದಂತೆ, ಹೋರಾಟಮಾಡಲಾಗದಂತೆ, ಮನಸ್ಸಿಗೆ ಬೇಕಾದಂತೆ ಕಾರ್ಖಾನೆ ತೆಗೆಯಲು, ಮತ್ತು ಕಾರ್ಮಿಕರಿಗೆ ಯಾವುದೇ ರಕ್ಷಣೆ ನೀಡದೆ ಅವುಗಳನ್ನು ಮನಸ್ಸಿಗೆ ಬಂದಂತೆ ಮುಚ್ಚಲು ಅಧಿಕಾರ ನೀಡುವ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿಮಾಡಲು ಆಯೋಗವನ್ನು ನೇಮಿಸಿದ್ದಕ್ಕೆ ಒಂದೇ ಒಂದು ಓಟು.

ರೈತರ ಬೆಳೆಗಳ ಬೆಲೆಗಳು ಹುಚ್ಚಾಪಟ್ಟೆ ಏರುಪೇರಾಗುತ್ತಿರುವುದಕ್ಕೆ, ರಸಗೊಬ್ಬರಗಳ ಬೆಲೆಗಳನ್ನು ಏರಿಸಿದ್ದಕ್ಕೆ (ಪ್ರತಿಭಟನೆ ಇಲ್ಲದೆ ಇದ್ದರೆ 50% ಏರಿಕೆ) ದೇಶದ ಅನೇಕ ಕಡೆ ರಸಗೊಬ್ಬರ ಸಿಗದಂತೆ ಆದದ್ದಕ್ಕೆ ಔಷದಿಗಳ ಬೆಲೆಗಳು ಏರಿ, ಬೀಜ, ಔಷದಿ, ರಸಗೊಬ್ಬರಗಳು ಕಲಬೆರಕೆಯಾಗಿ ರೈತರು ಕೃಷಿ ಮಾಡಲಾಗದಂತಾಗಿರುವುದಕ್ಕೆ ಬ್ಯಾಂಕ್, ಸಹಕಾರಿ ಸಾಲ ಸಿಗದಂತಾಗಿ ದುಬಾರಿ ಬಡ್ಡಿಯ ಖಾಸಗಿ ಸಾಲ ಪಡೆದ ನೂರಾರು ರೈತರು ಆತ್ಮಹತ್ಯೆಮಾಡಿಕೊಂಡರೂ ಬಿಡದೆ ವಿದೇಶದಿಂದ ಆಮದು ಮಾಡಿಕೊಳ್ಳುತ್ತಿರುವುದಕ್ಕೆ ಒಟ್ಟಿನಲ್ಲಿ ರೈತರ ವಿನಾಶ ಮಾಡಿದ್ದಕ್ಕೆ ಒಂದೇ ಒಂದು ಓಟು.

ಅಕ್ಕಿ, ಬೇಳೆ, ಜೋಳ, ಗೋಧಿ, ಸಕ್ಕರೆ, ತರಕಾರಿ, ಈರುಳ್ಳಿ (ಉಳ್ಳಾಗಡ್ಡಿ), ಆಲೂಗಡ್ಡೆ (ಬಟಾಟೆ), ಎಣ್ಣೆ, ಔಷಧಿಗಳ ಬೆಲೆ ಆಕಾಶದೆತ್ತರಕ್ಕೆ ಏರಿ ಬಡತನ ಹೆಚ್ಚಾಗಿರುವುದಕ್ಕೆ ಬಡತನ ನಿರ್ಮೂಲನೆ ಬಗ್ಗೆ ಬಾಯಿತುಂಬಾಮಾತನಾಡಿರುವ ನಾಚಿಕೆಗೇಡಿತನಕ್ಕೆ ಒಂದೇ ಒಂದು ಓಟು.

ಸಂಪಾದಕೀಯ

ಲಕ್ಷಾಂತರ ಉದ್ಯೋಗಗಳನ್ನು ನಿರ್ಮಾಣಮಾಡುತ್ತಲೇ, ನಿರುದ್ಯೋಗ ನಿರ್ಮೂಲನೆಯ ಮಾತನಾಡುತ್ತಿರುವುದಕ್ಕೆ ಇಡೀ ಒಂದು ವರ್ಷದಲ್ಲಿ ಉದ್ಯೋಗ ನಿರ್ಮಾಣ ಮಾಡುವ ಒಂದೇ ಒಂದು ಯೋಜನೆಯನ್ನು ಆರಂಭ ಮಾಡದ್ದಕ್ಕಾಗಿ, ಅತ್ಯಂತ ಹುರುಪಿನಿಂದ ಬೆಂಬಲನೀಡಿದ ಕೋಟಿಗಟ್ಟಲೆ ಯುವಕ ಯುವತಿಯರಿಗೆ ವಂಚಿಸಿದ್ದಕ್ಕಾಗಿ ಈ ಯುವಜನರ ಒಂದೇ ಒಂದು ಓಟು. ನೆರೆಹೊರೆಯ ದೇಶಗಳೊಡನೆ ಸಂಬಂಧ ಸುಧಾರಿಸಿಕೊಂಡು ರಕ್ಷಣೆಯ ವೆಚ್ಚ ಕಡಿಮೆ ಮಾಡುವ ದಾರಿ ಹುಡುಕಿ ಆರ್ಥಿಕ ಅಭಿವೃದ್ಧಿಯ ಮಾರ್ಗ ಹುಡುಕದೆ ಅಣುಬಾಂಬ್ ಸ್ಫೋಟಿಸಿ ಇಡೀ ದೇಶವನ್ನೇ ಅಣುಬಾಂಬ್ ಧಾಳಿಯ ಅಪಾಯಕ್ಕೆ ಹತ್ತಾರು ಸಾವಿರ ಕೋಟಿ ರೂಗಳ ವೆಚ್ಚಕ್ಕೆ ಒಡ್ಡಿದ್ದಕ್ಕಾಗಿ ಒಂದೇ ಒಂದು ಓಟು.

ಭಜರಂಗದಳದ ಭಂಟರ ವಿಶ್ವ ಹಿಂದೂ ಪರಿಷತ್‌ನ ಸ್ವಾಮಿಗಳಿಗೆ ಕುಮ್ಮಕ್ಕು ನೀಡಿ ಕ್ರೈಸ್ತರ ಮೇಲೆ ಚರ್ಚುಗಳ ಮೇಲೆ ದಾಳಿ ನಡೆಸಿದ್ದಕ್ಕೆ, ಕೊಲೆ, ಮಾನಭಂಗಮಾಡಿ ಇಡೀ ದೇಶವೇ ತಲೆತಗ್ಗಿಸುವಂತೆ ಮಾಡಿದ್ದಕ್ಕೆ, ಈ ಘೋರ ಅಪರಾಧಗಳನ್ನು ಸಮರ್ಥಿಸಿದ್ದಕ್ಕೆ, ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ, ಪೂಜಾಸ್ಥಾನಗಳ ಮೇಲೆ ದಾಳಿಯನ್ನು ಮುಂದುವರೆಸಿರುವುದಕ್ಕೆ, ಬಾಬಾ ಬುಡನ್‌ಗಿರಿಯ ಶಾಂತ, ಹಿಂದೂ ಮುಸ್ಲಿಂ ಸೌಹಾರ್ದದ ನೆಲೆಯನ್ನು ಹಿಂಸಾಮಯ ಮಾಡಲು ಪ್ರಯತ್ನಿಸಿರುವುದಕ್ಕೆ, ಕ್ರಿಶ್ಚಿಯನ್, ಮುಸ್ಲಿಂ ಅಲ್ಪಸಂಖ್ಯಾತರ ಮಾನವೀಯ ಭಾವನೆಯ, ಧರ್ಮ ನಿರಪೇಕ್ಷ (ಜಾತ್ಯಾತೀತ) ಭಾರತೀಯರೆಲ್ಲರ ಒಂದೇ ಒಂದು ಓಟು. ಅರ್ಥ ಸಚಿವರ ಸಲಹೆಗಾರ ಆರ್.ಎಸ್.ಎಸ್.ನ ಮೋಹನ್ ಗುರುಸ್ವಾಮಿ, ನಾವಿಕ ಪಡೆಯ ಅಧಿಪತಿ ವಿಷ್ಣುಭಾಗವತ್ ಇವರುಗಳು ಸಾವಿರಾರು ಕೋಟಿಯ ಭ್ರಷ್ಟಾಚಾರದ ಪ್ರಕರಣಗಳನ್ನು ಎತ್ತಿತೋರಿಸಿರುವಾಗಲೂ, ಅದೇ ಪ್ರಶ್ನೆಯ ಮೇಲೆ ಸರ್ಕಾರ ಬಿದ್ದುಹೋಗಿದ್ದರೂ ನಮ್ಮ ಸರ್ಕಾರ ಭ್ರಷ್ಟಾಚಾರ ಮುಕ್ತ ಎಂದು ಹೇಳಿದ ಜಂಗಧಂಡತನಕ್ಕೆ

ಒಂದೇ ಒಂದು ಓಟು.

ಬಿ.ಜೆ.ಪಿ. ಮೈತ್ರಿಕೂಟ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿಯೇ ರಾಜಸ್ಥಾನ, ಮಧ್ಯಪ್ರದೇಶ, ದೆಹಲಿ ರಾಜ್ಯಗಳ, ದೇಶಾದ್ಯಂತ ಹಲವು ಕ್ಷೇತ್ರಗಳಲ್ಲಿ ನೀಡಿದ ಓಟಿನಂತಹದ್ದೇ ಓಟುಗಳು ಈ ಬಾರಿ ಬಿ.ಜೆ.ಪಿ. ಎಂದು ನಂಬಿ ನೀಡಿದ್ದ ಓಟುಗಳು ಇನ್ನು ಸಾಕು ಬಿ.ಜೆ.ಪಿ. ಎಂದು ಮರೆತು ನಿಂತ ಕೋಟಿಗಟ್ಟಲೇ ಮತದಾರರ ಒಂದೇ ಒಂದು ಓಟು.

ಕೊಂಡಿಯಾಗಿದೆ ಬಿಜೆಪಿಗೆ ಸಂಘಪರಿವಾರಕ್ಕೆ ಅವರ ಭಂಡತನಕ್ಕೆ, ಕ್ರೌರ್ಯಕ್ಕೆ, ದೇಶವನ್ನು ಹರಾಜಿಗೆ ಮಾರುವ ಸ್ವದೇಶಿತನಕ್ಕೆ ನೆರವಾದ ಲೋಕಶಕ್ತಿ ಇತ್ಯಾದಿ 18 ಪಕ್ಷಗಳಿಗೆ ಕೊಂಡಿಯಾಗಿದೆ.

ಪ್ರತಿಯೊಬ್ಬರ ಒಂದೇ ಒಂದು ಓಟು.

ಪ್ರಜಾಪ್ರಭುತ್ವವನ್ನೇ ನಾಶಮಾಡುವ ನಿಲುವನ್ನು ಕೈಹಾಕಿದ ಈ ಸರ್ಕಾರ, ಈ ಪಕ್ಷಗಳ ಕೂಟಕ್ಕೆ ಹಾಗೂ ಅದರ ನಾಯಕ ಬಿಜೆಪಿಗೆ ಅದು ಮತ್ತೆಂದೂ ತಲೆಯೆತ್ತದಂತೆ ಮಾಡುವ ವಿನಾಶಕಾರಕ ಓಟು. ಇದು ಅರಗಿನ ಮನೆಯಲ್ಲಿ ಕೊಲ್ಲಲು ಮಾಡಿದ್ದಕ್ಕೆ, ಇದು ಕಪಟ ಜೂಜಿಗೆ, ಇದು ದ್ರೌಪದಿ ಮಾನಭಂಗಕ್ಕೆ ಎಂದು ಎಣಿಸಿ ಎಣಿಸಿ ಹೊಡೆದ ಭೀಮನ ವಿನಾಶಕಾರಕ ಓಟು ಪ್ರತಿಯೊಬ್ಬರ ಗದಾಘಾತದಂತಹ ಪ್ರಬಲ ಓಟು.

ದೇಶಕಾಗಿದೆ ಬಿ.ಜೆ.ಪಿ.ಗೆ ಆದರ ಮುಖವಾದ ವಾಜಪೇಯಿಗೆ ವಿರೋಧಕ ಓಟು.

ದುರಾಡಳಿತದ ಗಬ್ಬು ನಾತ ಮರೆಸಲು 'ಹುಟ್ಟು' ಚರ್ಚೆಯ ಊದುಬತ್ತಿ

ಬಿಜೆಪಿ ಇನ್ನೊಂದು ಬಾರಿ 'ರಾಷ್ಟ್ರೀಯ ಚರ್ಚೆ'ಗೆ ಕರೆ ಕೊಟ್ಟಿದೆ. ಪ್ರತಿ ಬಾರಿ ದೇಶದ ಸಂವಿಧಾನವನ್ನು ಬುಡಮೇಲು ಮಾಡುವ ಅಥವಾ ಅಲ್ಲಗಳೆಯಲು ಮನಸ್ಸಾದಾಗಲೆಲ್ಲಾ ಇವರು 'ರಾಷ್ಟ್ರೀಯ ಚರ್ಚೆ'ಗೆ ಕರೆ ಕೊಡುತ್ತಾರೆ. ಬಾಬರಿ ಮಸೀದಿ ಒಡೆದು ಹಾಕುವ ತಯಾರಿಯಲ್ಲಿದ್ದಾಗ ಅವರು ಕೋಮುವಾದದ ಬಗ್ಗೆ ರಾಷ್ಟ್ರೀಯ ಚರ್ಚೆಗೆ ಕರೆಕೊಟ್ಟಿದ್ದರು. ಕ್ರಿಶ್ಚಿಯನ್ನರ ಮೇಲೆ ಅಮಾನವೀಯ ದಾಳಿ ಮುಚ್ಚಿಕೊಳ್ಳಲು ಮತಾಂತರದ ಬಗ್ಗೆ 'ರಾಷ್ಟ್ರೀಯ ಚರ್ಚೆ'ಗೆ ಕರೆಕೊಟ್ಟರು. ಬಿಜೆಪಿ ರಾಷ್ಟ್ರೀಯ ಚರ್ಚೆಗೆ ಕರೆ ಕೊಟ್ಟಿದ್ದಾರೆ ಎಂದರೆ ದೇಶಕ್ಕೆ ಏನೋ ಗಂಡಾಂತರ ಕಾದಿದೆ ಅಥವಾ ಅವರು ಏನೊ ಘಾತಕ ಮಾಡ ಹೊರಟಿದ್ದಾರೆ ಎಂದರ್ಥ.

ಅವರ ಹದಿಮೂರು ತಿಂಗಳ ದುರಾಡಳಿತದ ಗಬ್ಬು ನಾತ ಮರೆಸಲು ಇನ್ನೊಂದು 'ರಾಷ್ಟ್ರೀಯ ಚರ್ಚೆ'ಯ ಊದು ಬತ್ತಿ ಹಚ್ಚಿದ್ದಾರೆ. ಈ ದೇಶದಲ್ಲಿ ಹುಟ್ಟಿರದ ನಾಗರಿಕರನ್ನು, ಪ್ರಧಾನಿ ಪಟ್ಟಕ್ಕೆ ಸ್ಪರ್ಧಿಸಲು ಬಿಡಬೇಕೆ ಬೇಡವೆ ಎಂಬ ಬಗ್ಗೆ ಈ ಚರ್ಚೆ. ಹದಿಮೂರು ತಿಂಗಳ ರಾಜ್ಯಭಾರದಲ್ಲಿ ಹೇಳಬಹುದಾದ ಏನೂ ಸಾಧನೆಗಳಿಲ್ಲ. ಈ ವಿವಾದ ಎಬ್ಬಿಸಿಯಾದರೂ ಜನರಿಗೆ ಟೋಪಿ ಹಾಕಿ ಮುಂದಿನ ಚುನಾವಣೆ ಗೆಲ್ಲುವ ಹಂಚಿಕೆ.

ಸಂವಿಧಾನ ಈ ಬಗ್ಗೆ ಸ್ಪಷ್ಟವಿದೆ. ವಿದೇಶದಲ್ಲಿ ಹುಟ್ಟಿದವರಿಗೆ ಸಂವಿಧಾನ ಭಾರತೀಯ ನಾಗರೀಕರಾಗಲು ಅವಕಾಶ ಕೊಡುತ್ತದೆ. ಮಾತ್ರವಲ್ಲ, ಎಲ್ಲಾ ಭಾರತೀಯರಿಗೆ ಸಮಾನ ಸ್ಥಾನಮಾನ ಮತ್ತು ಅವಕಾಶ ಕೊಡುತ್ತದೆ. ಸಂವಿಧಾನ ಸಭೆಯಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆ ನಡೆದು, ಈ ಬಗ್ಗೆ ಸ್ಪಷ್ಟತೆ ಮೂಡಿದ್ದು, ಸಂವಿಧಾನದ ನಿರ್ಮಾಪಕರು ಈ ಬಗ್ಗೆ ಯೋಚಿಸಿ ಜಾಗ್ರತೆಯಿಂದ ತೆಗೆದುಕೊಂಡ ನಿರ್ಧಾರ ಇದು. ಸ್ವಾತಂತ್ರ್ಯದ ಸಂದರ್ಭದಲ್ಲಿದ್ದ ವಿಶಿಷ್ಟ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ಅವಕಾಶ ಕೊಡಲಾಗಿದೆ ಎಂದು ನೆನಪಿಸಿಕೊಳ್ಳುವ ಅಗತ್ಯ ಬಿದ್ದಿದೆ ಈಗ. ದೇಶ ಇಬ್ಭಾಗವಾಗಿ ಉದ್ಭವಿಸಿದ ಹೊಸ ಗಡಿಯ ಎರಡೂ ಕಡೆ ಲಕ್ಷಾಂತರ ಜನ ತಾವು ಹುಟ್ಟಿದ ಪ್ರದೇಶ ಬಿಟ್ಟು 'ವಿದೇಶ'ಕ್ಕೆ ಹೋಗುವ ವಿಶಿಷ್ಟ ಪರಿಸ್ಥಿತಿ ಉಂಟಾಗಿತ್ತು. ಈ ದೇಶದಲ್ಲಿ ಹುಟ್ಟಿದವರು ನಾಗರಿಕರಲ್ಲ ಎನ್ನುವಂತಿದ್ದರೆ ರಚಿತವಾದ ಎರಡೂ ಹೊಸ ದೇಶಗಳಲ್ಲಿ ಲಕ್ಷಾಂತರ ಜನ ನಾಗರಿಕ ಹಕ್ಕು ಕಳೆದು ಕೊಳ್ಳುತ್ತಿದ್ದರು. ನಮ್ಮ ಗೃಹ ಮಂತ್ರಿ ಎಲ್.ಕೆ. ಅಡ್ವಾಣಿ ಸೇರಿದಂತೆ ಲಕ್ಷಾಂತರ ಜನ ಈಗಿನ ಪಾಕಿಸ್ತಾನದಲ್ಲಿ ಹುಟ್ಟಿದವರು ಆದ್ದರಿಂದ ಸಂವಿಧಾನ ಈ ಬಗ್ಗೆ ಸ್ಪಷ್ಟ ಖಚಿತ ನಿಲುವು ಹೊಂದಿದೆ.

ಹುಟ್ಟಿದ ಸ್ಥಳ, ವಿಶಿಷ್ಟ ಲಕ್ಷಣಗಳು ಏನೇ ಇರಲಿ- ಸಂವಿಧಾನ ಭಾರತೀಯ ನಾಗರೀಕರಿಗೆ ಚುನಾವಣೆಗೆ ಸ್ಪರ್ಧಿಸಲು ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕೊಡುತ್ತದೆ. ಸಂವಿಧಾನದತ್ತ ಈ ಹಕ್ಕನ್ನು ಚಲಾಯಿಸಲು ಅಡ್ಡಿಪಡಿಸುವ ತಿದ್ದುಪಡಿ ಬೇಕಾಗಿಲ್ಲ. ಅದೂ ಒಂದು ಚುನಾವಣೆ ಒಂದು ವ್ಯಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸೋನಿಯಾಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಸಂವಿಧಾನದತ್ತ ಹಕ್ಕಿದೆ. ಕಾಂಗ್ರೆಸ್‌ಗೆ ಸೋನಿಯಾರನ್ನು ಪ್ರಧಾನ ಮಂತ್ರಿಯಾಗಿ ಚುನಾವಣೆಯಲ್ಲಿ ಮುಂದಿಡುವ ಹಕ್ಕಿದೆ. ಆದರೆ ಆ ಹಕ್ಕನ್ನು ಚಲಾಯಿಸುತ್ತಾರೋ ಬಿಡುತ್ತಾರೊ ಸೋನಿಯಾಗೂ, ಕಾಂಗ್ರೆಸ್ಸಿಗೂ ಬಿಟ್ಟಿದ್ದು. ಆದರೆ ಆ ಹಕ್ಕನ್ನು ಚಲಾಯಿಸುವುದನ್ನು ತಡೆಯಲು ಸಂವಿಧಾನ ತಿದ್ದುಪಡಿ ತರುವುದು ಸರಿಯಲ್ಲ. ಸಂವಿಧಾನದಲ್ಲಿ ಹಕ್ಕಿದೆ ಎಂಬ ಮಾತ್ರಕ್ಕೆ ಅದನ್ನು ಚಲಾಯಿಸಬೇಕೆಂದಿಲ್ಲ, ಉದಾಹರಣೆಗೆ ನಮ್ಮ ಸಂವಿಧಾನದ ಪ್ರಕಾರ 'ಪ್ರತಿಯೊಬ್ಬ ವಿವಾಹಿತನಿಗೂ ವಿವಾಹ ವಿಚ್ಛೇದನ ಪಡೆಯುವ' ಅಧಿಕಾರವಿದೆ. ಆದರೆ ಈ ಎಲ್ಲರೂ ಈ ಹಕ್ಕು ಚಲಾಯಿಸಲಿಕ್ಕಾಗಿ ಚಲಾಯಿಸಲು ಹತ್ತಿದರೆ, ಸಾಮಾಜಿಕ ಅರಾಜಕತೆ ಉಂಟಾದೀತು. ಬಹುಸಂಖ್ಯಾತರು ಈ ಹಕ್ಕು ಚಲಾಯಿಸಲು ಹೋಗುವುದಿಲ್ಲ ಆದರೆ ವಿವಾಹ ವಿಚ್ಛೇದನ ಬಯಸುವವರಿಗೆ ಸಂವಿಧಾನ ಅವಕಾಶ ಕೊಡುತ್ತದೆ. ಆದರೆ ಸಾಮಾಜಿಕ ಸಾಮರಸ್ಯ ಮದುವೆಯನ್ನು ಉಳಿಸಲು ಸಂವಿಧಾನದಲ್ಲಿರುವ ವಿವಾಹ ವಿಚ್ಛೇದನದ ಹಕ್ಕನ್ನು ತಿದ್ದುಪಡಿ ಮಾಡಿ ತೆಗೆಯ ಬೇಕು ಎಂದು ಹೇಳಿದಂತಿದೆ ಬಿಜೆಪಿಯವರ ಈ ವಾದ. ಆದ್ದರಿಂದ ಕಾಂಗ್ರೆಸ್, ಸೋನಿಯಾ ಈ ಹಕ್ಕನ್ನು ಚಲಾಯಿಸಬಹುದು. ಕಾಂಗ್ರೆಸ್‌ನ ನಿರ್ಧಾರ ಸರಿಯೋ ತಪ್ಪೋ ಎಂದು ಜನ ಮತದಾನದ ಹಕ್ಕು ಚಲಾಯಿಸಿ ನಿರ್ಧರಿಸುತ್ತಾರೆ.

ಬಿಜೆಪಿ ಜನರ ಗಮನವನ್ನು ನಿಜವಾದ ಜನರ ತುರ್ತಿನ ಸಮಸ್ಯೆಗಳು ಕಾಳಜಿಗಳಿಂದ ಬೇರೆಡೆಗೆ ಹರಿಸಲು ಈ ನಾಟಕ ಆಡುತ್ತಿದ್ದಾರೆ ಎಂಬುದು ಸ್ಪಷ್ಟ. ಪವಾರ್‌ನಂತಹ ಕಾಂಗ್ರೆಸ್ ನಾಯಕರು ಈ ಚರ್ಚೆಯಲ್ಲಿ ಭಾಗವಹಿಸಿ ಬಿಜೆಪಿಯನ್ನು ಅನುಮೋದಿಸುವ ಮೂಲಕ ಜನರ ಸಮಸ್ಯೆಗಳು, ಕಾಳಜಿಗಳು ಚುನಾವಣಾ ವಿಷಯವಾಗುವುದನ್ನು ತಡೆಯಲು ಸಹಾಯ ಮಾಡುತ್ತಿದ್ದಾರೆ. ಈ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರ ಹುನ್ನಾರವೇನು? ಈ ಬಗ್ಗೆ ಈಗ ಚರ್ಚೆಬೇಕಿಲ್ಲ. ಆದರೆ ಬಿಜೆಪಿ ಸರ್ಕಾರ ಬಿದ್ದ ಮೇಲೆ ಕಾಂಗ್ರೆಸ್ ನಾಯಕತ್ವದಲ್ಲಿ ಬದಲಿ ಜಾತ್ಯಾತೀತ ಸರ್ಕಾರ ರಚಿಸಲು ಸಾಧ್ಯವಾಗದೆ ಹೋಗಿದ್ದರ ಪ್ರಕರಣದಲ್ಲಿ ನಿಗೂಢವಾಗಿದ್ದ ಹಲವು ಪ್ರಶ್ನೆಗಳ ಮೇಲೆ ಹೆಚ್ಚಿನ ಬೆಳಕು ಬೀಳಬಹುದು. ○

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಈಗ ಒಂದು ಪಠ್ಯ ಪುಸ್ತಕವಾಗಿರುವ ದೇಜಗೌರವರು ಬರೆದ ಲೋಕನಾಯಕ ಪುಸ್ತಕದಲ್ಲಿ 'ಮಹಾಯುದ್ಧ ಕಾಲದಲ್ಲಿ ಭಾರತೀಯ ಕಮ್ಯುನಿಸ್ಟರು ಸಾರ್ವಭೌಮ ಸರ್ಕಾರದ ಪರವಾಗಿದ್ದರೆಂಬ (ಇಂಗ್ಲೀಷ್ ಅರಸರ), ಅವರು ಸ್ವಾತಂತ್ರ್ಯ ಸಮರದಲ್ಲಿ ಭಾಗಿಗಳಾಗಿರಲಿಲ್ಲವೆಂಬ ಸಂಗತಿ ಸರ್ವವೇದ್ಯವಾದದ್ದು; ಮಾತ್ರವಲ್ಲ ಅವರವರ ನೆಲೆಬೆಲೆಗಳೇನೆಂಬುದು ಆಗಿನ ಅವರ ವರ್ತನೆಯಿಂದ ಸ್ಪಷ್ಟವಾಗುತ್ತದೆ" ಎಂದು ಬರೆದಿದ್ದಾರೆ. ಹೀಗೆ ದೇಜಗೌ ಸಾರಸಗಟಾಗಿ ಬರೆಯಲು ಕಾರಣವೇನು? ಮತ್ತು ಇದು ಸರಿಯೇ?

- ಯಮುನಾ ಗಾಂವಕರ್

ಹೀಗೆ ಪಠ್ಯ ಪುಸ್ತಕಗಳಲ್ಲಿ ಸಾರಸಗಟಾಗಿ ಕಮ್ಯುನಿಸ್ಟ್‌ರನ್ನು ಮಾರ್ಕ್ಸ್‌ವಾದವನ್ನು ತೆಗಳುವುದು ಸಾಮಾನ್ಯ. ಇಂತಹವು ಬಹಳಷ್ಟು ಪತ್ರಿಕೆ, ಅವುಗಳಲ್ಲಿಯೂ ಬಂಡವಾಳಶಾಹಿ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್‌ಗಳ ನಾಯಕರ ಮಾತುಗಳಲ್ಲಿಯೂ ಕಾಣುವುದುಂಟು. ನಿಜವಾದ ಸಂಗತಿಯೇನು ಎಂಬುದನ್ನು ಅರಿಯದೆ, ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಒಂದು ಸಂಗತಿಯ ಎಲ್ಲಾ ಮುಖಗಳನ್ನು ಅರಿತುಕೊಳ್ಳಬೇಕಾದ ಹೊಣೆಗಾರಿಕೆಯಿಲ್ಲದೆ ಇಂತಹ ಮಾತುಗಳನ್ನು ಪುಂಖಾನುಪುಂಖವಾಗಿ ಉರುಳಿಸುವುದು ಈ ವ್ಯವಸ್ಥೆ ಹಾಗೂ ಅದರ ಭಾಗವಾದ ಶಿಕ್ಷಣ, ಪತ್ರಿಕೆ ಮೊದಲಾದ ಮಾಧ್ಯಮ ಹಾಗೂ ರಾಜಕೀಯ ಪಕ್ಷಗಳು ಕಮ್ಯುನಿಸ್ಟ್ ಚಳುವಳಿಯನ್ನು ಹತ್ತಿಕ್ಕುವ ವಿಧಾನಗಳಲ್ಲಿ ಪ್ರಮುಖವಾದದ್ದು. ಇಂತಹ ಕೆಲಸ ಎಲ್ಲ ಪ್ರಗತಿಪರ ಚಳುವಳಿಯ ಬಗ್ಗೆಯೂ - ಅದು ಶಿವಶರಣರ ಚಳುವಳಿಯಾಗಲೀ, ಇಂದಿನ ಪ್ರಗತಿಪರ ಚಳುವಳಿಗಳ ವಿಷಯದಲ್ಲಾಗಲೀ - ನಡೆಯುತ್ತಿರುತ್ತದೆ. ಆದ್ದರಿಂದಲೇ ಯಾವ ಸಂಗತಿಯನ್ನು ಸ್ವೀಕರಿಸುವಾಗಲೂ ಅದರ ಬಗ್ಗೆ ಕೂಲಂಕುಶ ವಿಚಾರ ಅಗತ್ಯ. ಈ ದೃಷ್ಟಿಯಿಂದ ನಿಮ್ಮ ಪ್ರಶ್ನೆ ಪ್ರಾಮುಖ್ಯತೆ ಪಡೆದಿದೆ.

ಸ್ವಾತಂತ್ರ್ಯ ಸಮರದಲ್ಲಿನ ಕಮ್ಯುನಿಸ್ಟರ ಪಾತ್ರ ಮತ್ತು ಎರಡನೇ ಮಹಾಯುದ್ಧ ಕಾಲದಲ್ಲಿ ಅವರ ನಿಲುವು ಹಾಗೂ ಅದರಿಂದ ವ್ಯಕ್ತವಾಗುವ ನೆಲೆಬೆಲೆಗಳ ವಿಚಾರಕ್ಕೆ ಬರೋಣ. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಭಾರತದ ಸ್ವಾತಂತ್ರ್ಯ ಸಮರದ ಇತಿಹಾಸಕ್ಕೆ ಒಂದು ದೊಡ್ಡ ಅಪಚಾರವನ್ನೇ ಎಸಗಲಾಗಿದೆ. ಭಾರತದ ಸ್ವಾತಂತ್ರ್ಯದಲ್ಲಿ ಭಾಗವಹಿಸಿದವರು ಕೇವಲ ಕಾಂಗ್ರೆಸ್ಸಿಗರು ಮತ್ತು ಕೇವಲ ಗಾಂಧೀಜಿಯಿಂದ ಮಾತ್ರ ಸ್ವಾತಂತ್ರ್ಯ ಬಂತು ಎಂಬ ಏಕಪಕ್ಷೀಯ ದೃಷ್ಟಿಕೋನದ ಚರಿತ್ರೆಯನ್ನು ಶಿಕ್ಷಣ ಹಾಗೂ ಮಾಧ್ಯಮಗಳಲ್ಲಿ ಬಿಂಬಿಸಲಾಗಿದೆ. ಹೀಗಾಗಿ ಸ್ವಾತಂತ್ರ್ಯ ಸಮರದಲ್ಲಿ ಭೋರ್ಗರೆದು ಹರಿದ ಹಲವು ನದಿಗಳನ್ನು ಮಾಯಮಾಡಲಾಗಿದೆ. ಸುಭಾಷ್ ಚಂದ್ರಬೋಸ್‌ರವರಿಗೇ ಹೀಗಾಯಿತೆಂದ ಮೇಲೆ ಕಮ್ಯುನಿಸ್ಟರ ಪ್ರಶ್ನೆ ಏನು. ಕಾಂಗ್ರೆಸ್ ಇನ್ನೂ ಬ್ರಿಟಿಶರ ಅಧೀನದಲ್ಲಿಯೇ ಸ್ವಲ್ಪ ಹೆಚ್ಚಿನ ಪಾಲು ಮಾತ್ರ ಬಯಸುತ್ತಿದ್ದಾಗಲೇ ಆಗತಾನೇ ಹುಟ್ಟಿದ್ದ ಕಮ್ಯುನಿಸ್ಟ್ ಪಕ್ಷ ಬ್ರಿಟಿಶರನ್ನು ಒದ್ದೋಡಿಸಿ ಸಂಪೂರ್ಣ ಸ್ವಾತಂತ್ರ್ಯ ಪಡೆಯಿರಿ ಎಂಬ ಕರೆ ನೀಡಿತು. ಈ ಬೇಡಿಕೆಗಾಗಿ ಹೋರಾಡಲು ಸತತವಾಗಿ 6-7 ವರ್ಷಗಳ ಕಾಲ ಕಾಂಗ್ರೆಸ್ ಅನ್ನು ಒತ್ತಾಯಿಸಿತು. ಕಾಂಗ್ರೆಸ್ ಅಧಿವೇಶನದ ಮುಂದೆಯೇ 50,000 ಕಾರ್ಮಿಕರು ಸತ್ಯಾಗ್ರಹ ನಡೆಸಿದರು! ಇನ್ನು ಕಮ್ಯುನಿಸ್ಟರ ನೇತೃತ್ವದ ಸ್ವಾತಂತ್ರ್ಯ ಹೋರಾಟದ ಹಲವು ವೀರಗಾಥೆಗಳನ್ನು ಹಾಗೂ ಅವೆಲ್ಲದರ ಶಿಖರ ರೂಪವಾದ ತೆಲಂಗಾಣ, ತೇಭಾಗ, ಪುನ್ನಪ್ರವಯಲಾರ್, ನಾವಿಕ ಸೈನ್ಯದ ದಂಗೆ, ಕಾರ್ಮಿಕರ ಮುಷ್ಕರ, ಸೊಲ್ಲಾಪುರದ ಸ್ವಾತಂತ್ರ್ಯ ಘೋಷಣೆಗಳನ್ನು ವಿವರಿಸಲು ಇಲ್ಲಿ ಸಾಧ್ಯವಿಲ್ಲ. ದಯವಿಟ್ಟು 'ಚಿಂತನ' ಪ್ರಕಾಶನದ 'ಭಾರತೀಯ ವಿಮೋಚನ ಸಮರ', ನವಕರ್ನಾಟಕ ಪ್ರಕಾಶನದ 'ಸ್ವಾತಂತ್ರ್ಯ ಗಂಗೆಯ ಸಾವಿರ

ಪುಟ 5 ರಿಂದ


ಊಸರವಳ್ಳಿ ನಾಚಿಸುವ ಬಿಜೆಪಿ ಹೊಸರಂಗ ಎನ್.ಡಿ.ಎ.

ಊಸರವಳ್ಳಿಯೂ ನಾಚುವಂತೆ ಬಿಜೆಪಿ ಮತ್ತು ಸಂಘ ಪರಿವಾರದವರು ಮತ್ತೆ ಆಟ ಆರಂಭಿಸಿದ್ದಾರೆ. ವಾಜಪೇಯಿ ಸರ್ಕಾರದ ಬಹುಮತದ ನಿರ್ಣಯದ ಪರವಾಗಿ ಮತ ಹಾಕಿದ ಪಕ್ಷಗಳನ್ನೆಲ್ಲಾ ಸೇರಿಸಿಕೊಂಡು ಹೊಸ ಮೈತ್ರಿ ಕೂಟ ರಚಿಸಿದೆ. ಅದಕ್ಕೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಕೂಟ (ಎನ್.ಡಿ.ಎ) ಎಂದೂ ಕರೆದಿದೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಸ್ವಂತ ಪ್ರಣಾಳಿಕೆ ಇರುವುದಿಲ್ಲವೆಂದೂ, ಈ ಮೈತ್ರಿಗೆ ವಿಶಾಲನೆಲೆಯ ಪ್ರಣಾಳಿಕೆ ಮಾತ್ರ ಇರುವುದೆಂದೂ ಚಿಡ್ಡಿಗಳೂ ಸಹ ಸಂತೋಷ ಪಡುವಂತೆ ಜಾರ್ಜ್ ಫರ್ನಾಂಡೀಸ್, ಹೆಗ್ಗಡೆಯವರು ಹೇಳಿದ್ದಾರೆ. ಬಿಜೆಪಿಯ ನಾಯಕಗಣ ಈ ಹೊಸ ಮಂಕುಬೂದಿಯ ಘೋಷಣೆಯ ಮೂಲಕ ಅಧಿಕಾರಕ್ಕೆ ಬರಬಹುದು ಎಂದು ಉತ್ಸುಕವಾಗಿದೆ. ವಾಸ್ತವವಾಗಿ ಹೊಸ ಪಕ್ಷಗಳೇನೂ ಸೇರಿದಂತೆ ಆಗಿಲ್ಲ. ಎಐಡಿಎಂಕೆ ಬದಲು ಡಿಎಂಕೆ ಬಂದಿದೆ. ಇಂತಹ ಮತೀಯವಾದಿ, ಫ್ಯಾಸಿಸ್ಟ್‌ರ ಜೊತೆ ಸೇರಿದ ಅಳುಕು ಹಾಗೂ ನೆಲೆ ಜಾರಬಹುದು ಎಂಬ ಆತಂಕದಲ್ಲಿ ಹಿಂದುತ್ವ ಸಿದ್ಧಾಂತ ಕೈಬಿಡಬೇಕೆಂದು ಡಿಎಂಕೆಯ ಮುರಸೋಳಿ ಮಾರನ್ ಮಾತು ಸೇರಿಸಿದ್ದಾರೆ. ಈ ಹಿಂದೆ ಬಿಜೆಪಿಗೆ ಬೆಂಬಲ ವಾಪಸು ಪಡೆದು ನಂತರ ವ್ಯವಹಾರ ಸುಗಮ ಆದ ಮೇಲೆ ಮತ್ತೆ ಸೇರಿಕೊಂಡಿರುವ ಓಂಪ್ರಕಾಶ ಚೌತಾಲ(INLD) ರು ಹರಿಯಾಣ ವಿಕಾಸ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿರುವ ಪಕ್ಷದ ಜೊತೆ(ಬಿಜೆಪಿ) ತಾನು ಇರಲು ಆಗುವುದಿಲ್ಲವೆಂದು ಮತ್ತೆ ಗುರಾಯಿಸಿದ್ದಾರೆ. ಇದರ ಅರ್ಥ ಏನು ಎಂದು ಕಾಲ ಹೇಳುತ್ತದೆ. ಆದರೆ ಈ ಹೊಸ ಮಸಾಲ ಬಾಜಿ ಮಿಕ್ಸರ್‌ಗೆ ದೇಶದ ಹಿತ ವೆಂಬುದು ಇಲ್ಲ. ಮತ್ತೆ ಹಿಂದಿನಂತಹ ಸಂದರ್ಭಸಾಧಕ ಮೈತ್ರಿಕೂಟವಲ್ಲದೇ ಬೇರೇನೂ ಅಲ್ಲ. ಒಂದು ವೇಳೆ ಇಂತಹ ಮೈತ್ರಿ ಕೂಟ ಅಧಿಕಾರಕ್ಕೆ ಬಂದರೆ ಈ ಅವಾಂತರಗಳಿಂದ ಅದೆಂತಹ ಕಿಚಡಿ ಸರ್ಕಾರ ಆಗಬಹುದು. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಎಂಬುದು ದೇಶದ ಜನತೆಯನ್ನು ಮತ್ತೆ ವಂಚಿಸಲು ಹೂಡಿರುವ ತಂತ್ರವಷ್ಟೆ. ಇದಕ್ಕೆ ವಿಶಾಲ ನೆಲೆ ಪ್ರಜಾಪ್ರಭುತ್ವ ಮುಂತಾದವುಗಳು ವಂಚಿಸಲು ಬಳಸುವ ಶಬ್ದಗಳಷ್ಟೇ. ಹಿಂದೆ ಘೋಷಿಸಿದ ರಾಷ್ಟ್ರೀಯ ಅಜೆಂಡಾ ಎಂಬ ಮುಸುಕಿನೊಳಗಿನ ಹಿಂದುತ್ವದ ಬಚ್ಚಿಟ್ಟ ಅಜೆಂಡಾವೇ ಕಾರ್ಯಾಚರಣೆಯಲ್ಲಿದ್ದುದ್ದು ಎಂಬುದು ಇಷ್ಟು ಬೇಗ ಮರೆಯಲು ಸಾಧ್ಯವಿಲ್ಲ. ಇನ್ನು ತೆಲುಗುದೇಶಂ, ತೃಣಮೂಲ ಕಾಂಗ್ರೆಸ್, ನ್ಯಾಷನಲ್ ಕಾನ್‌ಫರೆನ್ಸ್‌ಗಳು ಈ ಮೈತ್ರಿಯೊಳಗೆ ಸೇರಿಲ್ಲ. ದಿನಕ್ಕೊಂದು ಅಭಿಪ್ರಾಯ ಹೇಳುತ್ತಿವೆ. ಇಂತಹ ಮೈತ್ರಿಯು ಸ್ಥಿರ ಸರ್ಕಾರ ನೀಡುವ ಬಗ್ಗೆ ಮಾತನಾಡುತ್ತಿದೆ!

ರಾಷ್ಟ್ರೀಯ ಹಾಗೂ ಪ್ರಜಾಪ್ರಭುತ್ವ ಎಂಬುದಕ್ಕೆ ಸಂಘ ಪರಿವಾರದ ವಿಶ್ಲೇಷಣೆಯೇ ಬೇರೆ. ಉಗ್ರ ಮತೀಯ ಮೂಲಭೂತವಾದೀ ಹಿಂದುತ್ವಕ್ಕೆ ರಾಷ್ಟ್ರೀಯ-ರಾಷ್ಟ್ರೀಯತೆ ಎಂದು ಸಂಘ ಪರಿವಾರ ಕರೆಯುತ್ತದೆ. ಭಾರತ ಬಹುರಾಷ್ಟ್ರೀಯತೆಗಳ ದೇಶವೆಂಬುದನ್ನು ಖಡಾಖಂಡಿತವಾಗಿ ಈ ಪರಿವಾರ ನಿರಾಕರಿಸುತ್ತದೆ ಮತ್ತು ಖಂಡಿಸುತ್ತದೆ. ಗೋಲ್ವಾಲ್ಕರ್ ಹೇಳುತ್ತಾರೆ "..... ಹಿಂದುಸ್ಥಾನದಲ್ಲಿ ಅಸ್ತಿತ್ವದಲ್ಲಿರುವುದು ಹಾಗೂ ಇರಬೇಕಾದ್ದು ಪ್ರಾಚೀನ ಹಿಂದೂ ರಾಷ್ಟ್ರ, ಬೇರಾವುದೂ ಅಲ್ಲ. ಹಿಂದೂ ರಾಷ್ಟ್ರ ಮಾತ್ರ. ....ವಿದೇಶಿಯರಿಗೆ (ಮುಸ್ಲಿಂ - ಕ್ರಿಶ್ಚಿಯನ್ ಮುಂತಾದ ಅನ್ಯ ಮತ, ಧರ್ಮ ಆಚರಣೆಯುಳ್ಳವರಿಗೆ) ಕೇವಲ ಎರಡು ಹಾದಿಗಳು ಒಂದೋ ರಾಷ್ಟ್ರೀಯ ಜನಾಂಗಗಳಲ್ಲಿ ತಮ್ಮನ್ನು ವಿಲೀನಗೊಳಿಸಿಕೊಂಡು ಅದರ ಸಂಸ್ಕೃತಿಯನ್ನು ಅಂಗೀಕರಿಸುವುದು. ಅಥವಾ ರಾಷ್ಟ್ರೀಯ ಜನಾಂಗ ಅವಕಾಶ ಕೊಡುವವರೆಗೆ ಅವರ ಕೃಪೆಯಡಿ ಬದುಕುವುದು. ಅವರು (ಹಿಂದುಗಳು) ಬಯಸಿದಾಗ ದೇಶ ತ್ಯಜಿಸಬೇಕು... ಅವರನ್ನು ಎರಡನೇ ದರ್ಜೆ ಪ್ರಜೆಗಳಂತೆ ಕಾಣಬೇಕು.... ಬಹುಸಂಖ್ಯಾತರು ಭಾರತದಲ್ಲಿ ಹಿಂದುಗಳೇ ಆಗಿದ್ದು ಬಹುಸಂಖ್ಯಾತರ ಆಳ್ವಿಕೆಯಲ್ಲಿಯೇ ಪ್ರಜಾಸತ್ತಾತ್ಮಕವೆಂಬ ಸರಳವಾದ ವಿವರಣೆ ಮೂಲಕ ಧರ್ಮನಿರಪೇಕ್ಷತೆ, ಪ್ರಜಾ ಪ್ರಭುತ್ವವನ್ನು ಧ್ವಂಸಗೊಳಿಸುವ ಈ ಫ್ಯಾಸಿಸ್ಟ್ ಮನೋಭಾವದ ಸಂಘಪರಿವಾರ ಈ ದೇಶದ ಪ್ರಜಾಪ್ರಭುತ್ವ ಉಳಿಸಬಲ್ಲದೇ?

ಇಂತಹ ಘನೋದ್ದೇಶಗಳ ಬಗ್ಗೆ ಇತರೆ ಮೈತ್ರಿ ಕೂಟ ಪಕ್ಷಗಳಿಗೆ ಅರ್ಥವಾಗದೇ? ಇತರೆ ಮೈತ್ರಿಕೂಟದವರ ಅಭಿಪ್ರಾಯಗಳನ್ನು ಬಿಜೆಪಿ ಗಂಬೀರವಾಗಿ ತೆಗೆದುಕೊಳ್ಳದು ಎಂಬುದು ಅನುಭವವಾಗಿದೆ.

ಕಾಲಕಾಲಕ್ಕೆ ಜನರನ್ನು ಮೋಸ ಗೊಳಿಸುವ ಸಂಘಪರಿವಾರ ಹೊಸ ಘೋಷಣೆ, ಹಾಗೂ ಸಂಘಟನೆಗಳನ್ನು ಹುಟ್ಟಿಹಾಕುತ್ತಾ ಬಂದಿರುವುದನ್ನು ಹಿಂದೆ 1948 ರಲ್ಲಿ ಮಹಾತ್ಮ ಗಾಂಧಿಯವರ ಕೊಲೆಯಾದಾಗ ಆರ್.ಎಸ್.ಎಸ್.ನ್ನು ನಿಷೇದಿಸಲಾಗಿತ್ತು. ಏನಾದರೂ ಮಾಡಿ ನಿಷೇಧವನ್ನು ರದ್ದುಪಡಿಸಲು ಯತ್ನಿಸುತ್ತಿದ್ದ ಪರಿವಾರವು ತಾವು ಸಾಂಸ್ಕೃತಿಕ ಸಂಘಟನೆಯಾಗಿರುವುದಾಗಿಯೂ, ರಾಜಕಾರಣದಲ್ಲಿ ಯಾವುದೇ ಪಾತ್ರ ವಹಿಸುವುದಿಲ್ಲವೆಂದು ಭಾರತ ಸರ್ಕಾರಕ್ಕೆ ಭರವಸೆ ನೀಡಿತ್ತು. ಆದರೆ ಧರ್ಮನಿರಪೇಕ್ಷಿತ, ಪ್ರಜಾತ್ತಾತ್ಮಕ ಭಾರತ ವ್ಯವಸ್ಥೆಯನ್ನು [illegible]ಮೇಲುಗೊಳಿಸಿ, ಅಸಹಿಷ್ಣುತೆಯ ಹಿಂದು ರಾಷ್ಟ್ರ ನಿರ್ಮಿಸುವ ಅದರ [illegible]ಯವನ್ನು ಅದುಮಿಡಲಾಗಲಿಲ್ಲ. 1950 ರಲ್ಲಿ ನೆಹರೂ ಕ್ಯಾಬಿನೆಟ್ ನ ಸಚಿವರಾಗಿದ್ದ ಶ್ಯಾಮ ಪ್ರಸಾದ್ ಮುಖರ್ಜಿಯವರಿಗೆ ಸಹಾಯ ಮಾಡಲು



ಕೆಲವು ಮುಖ್ಯ ಸಹಾಯಕರನ್ನು ಆರ್ .ಎಸ್.ಎಸ್.ನೇಮಕ ಮಾಡಿತ್ತು. ಅವರು ಕ್ಯಾಬಿನೆಟ್‌ಗೆ ರಾಜಿನಾಮೆ ಸಲ್ಲಿಸಿದ ನಂತರ ಜನಸಂಘದ ಹುಟ್ಟಿಗೆ ಕಾರಣರಾದರು. ಮುಖ್ಯ ಸಹಾಯಕರಾಗಿದ್ದವರಲ್ಲಿ ದಿವಂಗತ ದೀನದಯಾಳ್ ಉಪಾಧ್ಯಾಯ, ಎಲ್.ಕೆ.ಅದ್ವಾನಿ, ಅಟಲ್‌ಬಿಹಾರಿ ವಾಜಪೇಯಿ ಮತ್ತು ಎಸ್.ಎಸ್. ಬಂಡಾರಿ ಇದ್ದರು. ಆ ಜನಸಂಘ ವಜಾ ನಂತರ ಬಿ.ಜೆ.ಪಿ.ಗಳು ಆರ್.ಎಸ್.ಎಸ್.ನ ಅಜೆಂಡಾವನ್ನೇ ಜಾರಿಗೊಳಿಸಲು ಅಹೋರತ ಶ್ರಮಸಾಧನೆ ಮತ್ತು ಸಂಘ ಪರಿವಾರದ ಅಂಗವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ.

ಇದರೊಂದಿಗೆ, ರಾಜಕೀಯವಾಗಿ ಮೇಲುಗೈ ಪಡೆಯುವ ತುರ್ತು ಪರಿಸ್ಥಿತಿ ನಂತರ ಜನಸಂಘವನ್ನು ವಿಸರ್ಜಿಸಿ ಜನತಾಪಕ್ಷದಲ್ಲಿ ವಿಲೀನಗೊಳ್ಳಲಾಯಿತು. ಈ ವಿಧಾನದಿಂದ ಪ್ರಥಮವಾಗಿ ಕೇಂದ್ರ ಸರ್ಕಾರದ ಆ ಕಳಂಕದಲ್ಲಿ ಬಲಿಯಾದರು. ಜನರನ್ನು ಹಾದಿ ತಪ್ಪಿಸುವಲ್ಲಿ ಕೊಂಚ ಸಫಲರೂ ಆದರು. ಆದರೆ ಜನಸಂಘ ವಿಸರ್ಜಿಸಿದರೂ, ಅವರಲ್ಲಿ ಆರ್.ಎಸ್.ಎಸ್. ಜೊತೆಗೆ ನಿಕಟ ಸಂಬಂಧ ಹಾಗೂ ಸದಸ್ಯತ್ವ ಹೊಂದಿದ್ದರು. ಈ ದ್ವಿ ಸದಸ್ಯತ್ವದ ಪ್ರಶ್ನೆಗೆ ಗಂಭೀರವಾಗಿ ಅಡ್ಡಿ ಬಂತಲ್ಲದೇ ಸರ್ಕಾರದ ಪತನಕ್ಕೂ ಕಾರಣವಾಯಿತು.

ಬಿ.ಜೆ.ಪಿ ಎಂಬುದು ಆರ್.ಎಸ್.ಎಸ್.ನ ಹೊಸ ರಾಜಕೀಯ ಅವತಾರ. ಆರಂಭದಲ್ಲಿ ಗಾಂಧೀ ಪ್ರಣೀತ ಸಮಾಜವಾದ ಅದರ ಅಂತಸ್ಸತ್ವವೆಂದು ಘೋಷಿಸಲಾಯಿತು. ಗಾಂಧೀಜಿ ಮತ್ತು ಸಮಾಜವಾದೀ ವಿಚಾರಧಾರೆಗೆ ಬದ್ಧ ಹಗೆತನವಿದ್ದವರೇ ಅದನ್ನು ಸಿದ್ಧಾಂತವಾಗಿ ಒಪ್ಪದುದು ಒಂದು ವಿಶೇಷವೇ ಸರಿ. ಆದರೆ ಅವರ ಉದ್ದೇಶ ಸಮಾಜವಾದವಲ್ಲ, ಗಾಂಧೀಜಿಯನ್ನು ಕೊಂದರು ಎಂಬ ಕಲೆ ಅಳಿಸಲು ಹಾಕಲಾದ ಮುಸುಕು ಅಷ್ಟೆ. ಇದರಿಂದಲೂ ಜನರ ಮನ ಗೆಲ್ಲದಾದಾಗ ಅತ್ಯಂತ ದೋಷಕಾರಿ ಕೋಮುವಾದವನ್ನು ಪ್ರತಿಪಾದಿಸಲಾಯಿತು. ಪರಿಣಾಮ ದೇಶದಲ್ಲಿ ಸಾವಿರಾರು ಜನರ ಮಾರಣಹೋಮ. ಆಸ್ತಿ, ಪಾಸ್ತಿ ಹಾನಿ. ಬಾಬ್ರಿಮಸೀದಿ ನಾಶ, ಆರ್.ಎಸ್.ಎಸ್.ನ ಹಿಂದುತ್ವದ ಸಿದ್ಧಾಂತದ ನಗ್ನ ಅಳವಡಿಕೆಯ ಪರಿಣಾಮ ಇಂತಹ ಕ್ರೂರವಾದ ಸಿದ್ಧಾಂತದಿಂದ ಭಾರತದ ರಾಜಕಾರಣವನ್ನು ಅದೋಪತನಕ್ಕೆ ನೂಕಿದ್ದಲ್ಲದೆ ಅಲ್ಪ ಸಂಖ್ಯಾತರ ಮೇಲೆ ಆಕ್ರಮಣಗಳು, ಕೋಮು ಘರ್ಷಣೆಗಳಿಂದ ದೇಶ ಬೇಯುವಂತಾಯಿತು. ಅಣುಸ್ಫೋಟದಂತಹ ಘಟನೆಗಳು ನಡೆದು ಅಂತರಾಷ್ಟ್ರೀಯವಾಗಿಯೂ ಭಾರತದ ಸ್ಥಾನಮಾನಕ್ಕೆ ಚ್ಯುತಿ ತರಲಾಯಿತು. ಈ ನಡುವೆ ಬಾಬ್ರಿ ಮಸೀದಿ ಕೆಡವಿದ ಹಿನ್ನೆಲೆಯನ್ನು ಆರ್.ಎಸ್.ಎಸ್. ನಿಷೇದಿಸಲ್ಪಟ್ಟಾಗ ರಾಮಸೇನ ಸಂಘ ಎಂದು ಶಾಖೆಯು ಕೆಲಸ ಮಾಡಿದ್ದು ನೆನಪಿಸಿಕೊಳ್ಳಬೇಕು. 13 ತಿಂಗಳ ಆಡಳಿತದಲ್ಲಿ ಮತ್ತೇ ಮತ್ತೇ ಪ್ರಜಾಪ್ರಭುತ್ವ ಧಾಳಿಗೆ ಭಾಗಿಯಾಗಿದೆ. ಅಧ್ಯಕ್ಷ ಮಾದರಿಯ ಸರ್ಕಾರದ ಪ್ರತಿಪಾದನೆ, ಬಂಗಾಳ, ಬಿಹಾರ ಮುಂತಾದೆಡೆ ಕೇಂದ್ರ ತಂಡಗಳ ರವಾನೆ, ರಾಬ್ಡಿ ದೇವಿ ಸರ್ಕಾರದ ವಜಾ ಇತ್ಯಾದಿ ಹೆಸರಿಸಬಹುದು.

ಬಿ.ಜೆ.ಪಿ. ಹಿಂದೆ 13 ದಿನ, 13 ತಿಂಗಳು ಕೇದ್ರದಲ್ಲಿ ಅಧಿಕಾರ ನಡೆಸಿದಾಗಲೂ, ಅದು ಆರ್.ಎಸ್.ಎಸ್.ನ ಮುಚ್ಚಿಟ್ಟ ಅಜೆಂಡಾದಂತೆ ಕೆಲಸಮಾಡಿದೆ. ನಾಗಪುರದ ನಿರ್ದೇಶನದಂತೆ ನಡೆದಿದೆ. ಬಿ.ಜೆ.ಪಿ. ಒಂದು ಮಾತನಾಡುತ್ತಿದ್ದರೆ, ಸಂಘ ಪರಿವಾರ, ವಿಶ್ವ ಹಿಂದೂ ಪರಿಷತ್, ಭಜರಂಗಗಳಂತಹ ಸಂಘಟನೆಗಳು ಹಿಂದುತ್ವವನ್ನು ಉಗ್ರವಾಗಿ ಪ್ರತಿಪಾದಿಸುತ್ತಾ ಬಂದಿದೆ. ಕಾರ್ಯಾಚರಣೆಗೂ ಇಳಿದಿದೆ. ಈಗಿನ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಎಂಬುದು ಇಂತಹ ಪಿತೂರಿಯ ಸೋಗಿಗಿಂತ ಬಿನ್ನವಲ್ಲ. ಆರ್.ಎಸ್.ಎಸ್.ನಲ್ಲೇ ಆತ್ಮವಿಟ್ಟುಕೊಂಡಿರುವ ವಾಜಪೇಯಿ ಯವರು ಮತ್ತವರ ಪರಿವಾರದವರು ಊಸರವಳ್ಳಿಯನ್ನು ಮೀರಿಸುವ ಸ್ಪರ್ಧೆಯಲ್ಲಿ ತೊಡಗಿದ್ದಾರೆ. ಇದನ್ನು ಜನತೆ ಬಯಲಿಗೆಳೆಯಬೇಕು.

ಮಸಣಕ್ಕಾಗಿ ಮಹಿಳೆಯರ ಹೋರಾಟ

ಉಳುವವನಿಗೆ ಭೂಮಿ ಎಂದು ಹೇಳಿ ಭೂಮಿತಿ ಕಾಯ್ದೆ ಜಾರಿಗೆ ತಂದ ಆಳುವ ಸರ್ಕಾರಗಳು, ಯಾವುದೇ ಭೂ ಹಿಡುವಳಿದಾರರು ಭೂಮಿ ಕಳೆದು ಕೊಳ್ಳದಂತೆ ರಕ್ಷಿಸಿ, ಕೇವಲ ಕಾಗದದಲ್ಲಿಯೇ ಜಾರಿಗೆ ತಂದು ಕಳೆದ 5 ದಶಕಗಳಿಂದ ದುಡಿಯುವ ಜನಕ್ಕೆ ಉಳಲು ತುಂಡು ಭೂಮಿ ಇಲ್ಲದೇ, ತಲೆಯ ಮೇಲೊಂದು ಸೂರು ಇಲ್ಲದೇ ಅತ್ಯಂತ ದೈನ್ಯ ಬದುಕು ಬದುಕುವ ಅನಿವಾರ್ಯತೆ ತಂದಿರಿಸಿವೆ.

ಉಳಲು ಭೂಮಿ ಇಲ್ಲದಿದ್ದರೂ ಅನೇಕ ಕೃಷಿ ಕೂಲಿಕಾರರು ಕೂಲಿ ನಾಲಿ ಮಾಡಿ ದಿನದ ಹೊಟ್ಟೆ ಹೊರೆಯುತ್ತಿದ್ದಾರೆ. ಎರಡೊತ್ತು ಸಿಗದಿದ್ದರೂ ಒಪ್ಪತ್ತು ಉಂಡು ತಮ್ಮ ಬದುಕು ಸಾಗಿಸುತ್ತಿದ್ದಾರೆ. ಬದುಕುವ ಸಮಸ್ಯೆ ಒಂದೆಡೆ ಇದ್ದರೆ, ಇನ್ನೊಂದೆಡೆ ಸತ್ತರೂ ಸಮಸ್ಯೆ. ದಲಿತರು, ಬಡವರು ಸತ್ತಾಗ ಹೂಳಲು 3 ಗಜ ಜಾಗ ದೊರೆಯಂದೇ, ಬೀದಿ ಹೆಣವಾಗಿ ಪ್ರಾಣಿಗಳಿಗಿಂತ ಕನಿಷ್ಠ ಅಂತ್ಯ ಕಾಣುವ ದಾರುಣ ಚಿತ್ರ ಇಂದು ನಾವು ಅನೇಕ ಕಡೆ ಕಾಣುತ್ತಿದ್ದೇವೆ.

ಇಂತಹುದರಲ್ಲಿ ಗುಲಬರ್ಗಾ-ಬೀದರ ರಸ್ತೆ ಮಾರ್ಗ ದಲ್ಲಿರುವ, ಎರಡುನೂರು ಮನೆಗಳಿರುವ ಮಹಾಗಾಂವ ಕ್ರಾಸ್ ಗ್ರಾಮವೂ ಒಂದು. ಗುಲ್ಬರ್ಗಾದಿಂದ 25 ಕಿ.ಮೀ. ದೂರದಲ್ಲಿರುವ ಮಹಾಗಾಂವ ಕ್ರಾಸ್ ಆಳಂದ ಚಿಂಚೋಳಿ ಗುಲ್ಬರ್ಗಾ ತಾಲೂಕುಗಳಿಗೆ ಮತ್ತು ಬೀದರ ಜಿಲ್ಲೆಗೆ ಸಂಪರ್ಕ ಬೆಸೆಯುವ ಪ್ರಮುಖ ಕೇಂದ್ರವೂ ಹೌದು. ಕೂಲಿಮಾಡಲು ಇದ್ದ ಒಂದೆರಡು ಎಕರೆ ಹೊಲದಲ್ಲಿ ಕೆಲಸಮಾಡಲು ಮತ್ತು ಚಿಕ್ಕಪುಟ್ಟ ವ್ಯಾಪಾರ ಮಾಡಿ ಬದುಕಲು ವಲಸೆ ಬಂದ ಕುಟುಂಬಗಳೇ ಇಲ್ಲಿ ಜಾಸ್ತಿ. ಇಂತಹ ಪರಿಸ್ಥಿತಿಯಲ್ಲಿ ಉಳುವುದಕ್ಕೆ ಭೂಮಿಯಿಲ್ಲದ ಜನತೆಗೆ, ಹೂಳುವುದಕ್ಕೆ ಎಲ್ಲಿಂದ ಬರಬೇಕು?

ಮಹಾಗಾಂವ ಕ್ರಾಸ್ ಗ್ರಾಮದಲ್ಲಿ ಯಾರಾದರೂ ಸತ್ತರೆ ಇಡೀ ಊರೇ ಚಿಂತೆ ಮಾಡುತ್ತದೆ. ಏಕೆಂದರೆ ಸತ್ತರೆ ಹೂಳಲು ರುದ್ರಭೂಮಿಯೆಂಬ ಯಾವುದೇ ಸ್ಥಳವಿಲ್ಲ, ಇದ್ದಾಗ ಚಿಂತೆ ಮಾಡದ ಸರ್ಕಾರಕ್ಕೆ ಸತ್ತಾಗ ಚಿಂತಿಸುವ ಜನ ಯಾವ ಲೆಕ್ಕಕ್ಕೆ ಎಂಬ ಯೋಚನೆ ಸರ್ಕಾರಕ್ಕಿರಬೇಕು.

ಈ ಗಂಭೀರ ಪರಿಸ್ಥಿತಿಯನ್ನು ಅರಿತ ಅಲ್ಲಿನ ಮಹಿಳೆಯರು ಮತ್ತು ದುಡಿಯುವ ಜನ ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ರುದ್ರಭೂಮಿ ಒದಗಿಸಲು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು. ಹಲವು ಸಲ ಅಧಿಕಾರಿಗಳಿಗೆ ಭೇಟಿಯಾದರು. ಆದರೆ ಯಾವುದೇ ಕ್ರಮ ಕೈಗೊಳ್ಳಲು ವಿಳಂಬಮಾಡಿದಾಗ ಚಳುವಳಿಯ ಮಾರ್ಗ ಹಿಡಿದರು.

ಭೂಮಿ ತೋರಿಸಿ ಇಂದೇ ರುದ್ರಭೂಮಿ ಮಂಜೂರು ಮಾಡುತ್ತೇವೆ ಎಂದು ಹೇಳಿದ ಅಧಿಕಾರಿಗಳಿಗೆ ಸಂಘಟಕರು ಪಕ್ಕದ ಹಳ್ಳಿಯ ಕುರುಕೋಟಾದ ಮಲ್ಲಿಕಾರ್ಜುನಯ್ಯನವರ ಎರಡು ಎಕರೆ ಜಮೀನನ್ನು ಸರ್ಕಾರ ಖರೀದಿಸುವಂತೆ ಭೂಮಿ ತೋರಿಸಿದರೂ ಸರ್ಕಾರದಲ್ಲಿ ಬಜೆಟ್ ಇಲ್ಲವೆಂದು ಭೂಮಿ ಖರೀದಿ ಮಂಜೂರಾತಿಯಲ್ಲಿಯೇ ಪತ್ರ ವ್ಯವಹಾರ ಮಾಡುತ್ತ ಅಧಿಕಾರಿಗಳು ವಿಳಂಬನೀತಿ ಅನುಸರಿಸಿ ಮೀನ ಮೇಷ ಎಣಿಸುತ್ತಿದ್ದಾರೆ.

ದಲಿತ ಬನ್ನೆಪ್ಪ ಅಂತಪ್ನಳ್ಳಿ ಮರಣಹೊಂದಿದಾಗ ಹೂಳಲು ಮೂರು ಗಜ ಜಮೀನಿಲ್ಲದೇ ಗಂಟೆಗಟ್ಟಲೇ ಹೆಣ ಮನೆ ಮುಂದೆ ಇಟ್ಟು ಪರಿತಪಿಸಿದ್ದು ಜನ ಇನ್ನೂ ಮರೆತಿಲ್ಲ. ಹೆಣ ರಸ್ತೆಯಲ್ಲಿಟ್ಟು ಹೋರಾಟ ಮಾಡಬೇಕಾಗುತ್ತದೆಂದು ಜಿಲ್ಲಾಡಳಿತ ಮತ್ತು ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದಾಗ ಅವರೇ ಮುಂದಾಗಿ ಬೇರೆಯವರ ಹೊಲದಲ್ಲಿ ಹೆಣ ಹೂಳಲು ಅವಕಾಶ ಕಲ್ಪಿಸಿದ್ದು ಎಂತಹವರ ಹೃದಯವನ್ನೂ ಕಲಕುತ್ತದೆ.

ಆದರೆ ಈ ಕ್ಷೇತ್ರದಿಂದ ಆಯ್ಕೆಯಾದ ಶಾಸಕರಿಗೆ, ಸಂಸತ್ ಸದಸ್ಯರಿಗೆ ಯಾವುದರ ಪರಿವೆಯೂ ಇಲ್ಲ. ಕ್ಷೇತ್ರದ ಅಭಿವೃದ್ಧಿಗೆಂದು ಸರ್ಕಾರದಿಂದ ಕೊಡಲ್ಪಟ್ಟ ಶಾಸಕರ 50 ಲಕ್ಷ, ಸಂಸದರ 2 ಕೋಟಿ ಎಲ್ಲಿ ಹೋದವು ಎಂದು ಕೇಳಿದರೆ ಶಾಸಕರ ಲಕ್ಷಗಳು ರಸ್ತೆ, ಬಿಲ್ಡಿಂಗ್ ರಿಪೇರಿ ಹೆಸರಿನಲ್ಲಿ ಗುತ್ತೇದಾರಿಕೆ ಮಾಡುತ್ತಾ ಅವರ ಮನೆಯ ತಿಜೋರಿ ಸೇರಿದ್ದು ಜನರ ಮನೆ ಮಾತಾಗಿದೆ.

ಇದೇ ಮೇ 18 ರಂದು ಪುನಃ ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ರುದ್ರಭೂಮಿ ಒದಗಿಸಲು ಕೋರಿ ಮೆರವಣಿಗೆ ನಡೆಸಿ ಗುಲ್ಬರ್ಗಾ ವಿಭಾಗಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಒತ್ತಾಯಿಸಿದರು. ವಿಭಾಗಾಧಿಕಾರಿಗಳ ಸ್ಥಾನಿಕ ಸಹಾಯಕರು 8 ದಿನದೊಳಗಾಗಿ ರುದ್ರಭೂಮಿಗೆ ಹಣ ಮಂಜೂರು ಮಾಡುವುದಾಗಿ ಹೇಳಿದ ಭರವಸೆ ನಿಜವಾಗ ಬಹುದೇ ಎಂದು ಜನ ನಿರೀಕ್ಷಿಸುತ್ತಿದ್ದಾರೆ. ಭರವಸೆ ಈಡೇರ ದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೆಣವನ್ನೆ ಕಚೇರಿ ಮುಂದೆ ತಂದಿಡಲಾಗುವುದು ಎಂಬ ಎಚ್ಚರಿಕೆ ನೀಡಿದ ಮಹಿಳೆಯರು ಯಾವುದೇ ಹೋರಾಟಕ್ಕೂ ಸಿದ್ಧರಾಗಿದ್ದಾರೆ. ಇದು ಮಹಿಳಾ ಚಳುವಳಿಯ ಬೆಳವಣಿಗೆಯ ಸಂಕೇತವಾಗಿದೆ.

- ಕೆ.ಎಸ್.ಮಸ್ತ್ರಿದ



ವೈಯಕ್ತಿಕ ಹಾಗೂ ಕೌಟುಂಬಿಕ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಅಗತ್ಯ ಕಾನೂನಿನ ನೆರವನ್ನು ನೀಡುವ ಸಲುವಾಗಿ ಅವರ ದುಃಖ ದುಮ್ಮಾನಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿಯು "ಪ್ರಜ್ಞಾ" ಎನ್ನುವ ಕಾನೂನು ಸಲಹಾ ಸಮಿತಿಯೊಂದನ್ನು ರಚಿಸಿ ಕಳೆದ ಒಂದೆರಡು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಅವಧಿಯಲ್ಲಿ ಸಹಾಯ ಕೇಳಿ ಹಲವಾರು ಮಹಿಳೆಯರು "ಪ್ರಜ್ಞಾ" ಬಳಿ ಬಂದಿದ್ದಾರೆ. ಒಂದಕ್ಕಿಂತ ಒಂದು ಕಠಿಣ ಎನ್ನುವಂತಾಗಿರುವ ಮಹಿಳೆಯರ ಸಮಸ್ಯೆಗಳನ್ನು ಸಮಾಜದ ಭಾಗವಾಗಿಯೇ ನೋಡಲು 'ಪ್ರಜ್ಞಾ' ಬಯಸುತ್ತದೆ. ಮಹಿಳಾ ಸಮಸ್ಯೆಯನ್ನು ಈ ಸಾಮಾಜಿಕ ವ್ಯವಸ್ಥೆಯ ಕೈಗನ್ನಡಿಯಾಗಿ ನೋಡುತ್ತದೆ. ಮಹಿಳೆಯ ಮೇಲಿನ ಎಂಥದೇ ಹಿಂಸೆ ಕ್ರೌರ್ಯವು ಈ ಸಮಾಜವೆಂಬ ಕನ್ನಡಿಯ ಪ್ರತಿಬಿಂಬವೇ ಆಗಿರುತ್ತದೆ.

ಈ ಹಿನ್ನೆಲೆಯಲ್ಲಿ "ಪ್ರಜ್ಞಾ" ಬಳಿ ಬಂದ ಅಸಹಾಯಕ ಮಹಿಳೆಯರ ಸಂಕಷ್ಟಗಳನ್ನಾಧರಿಸಿ ಮಹಿಳೆಯರ ಇಂದಿನ ನೈಜ ಸ್ಥಿತಿ-ಗತಿ ಗಳ ಬಗ್ಗೆ ಒಂದು ಕಿರುನೋಟ

ಕೋಡಿಯಾಗಿ ಹರಿಯುತ್ತಿದೆ ಮಹಿಳೆಯರ ಕಣ್ಣೀರು..... ಹೊಣೆಯಾಗುವವರು ಯಾರು?

ಎನ್.ಪ್ರಭಾ

ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಅಪರಾಧಗಳು:

ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವ ಸಲುವಾಗಿ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ನೀಡಲು, ಅಗತ್ಯ ಕಾನೂನು ತಿದ್ದುಪಡಿಯನ್ನು ರೂಪಿಸಲು ರಾಜ್ಯ ಸರ್ಕಾರ ರೂಪಿಸಿರುವ " ಜಂಟಿ ಸದನ ಸಮಿತಿ" ಮಹಿಳಾ ಸಂಘಟನೆಗಳ ಸಲಹೆ ಸೂಚನೆಗಳನ್ನು ಕೇಳಲು, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭೆಯೊಂದನ್ನು ಇತ್ತೀಚೆಗೆ ಕರೆದಿತ್ತು. ಆ ಸಭೆಯಲ್ಲಿ ಬೆಂಗಳೂರು ನಗರದ ಪೊಲೀಸ್ ಆಯುಕ್ತರು ಸಭೆಯ ಮುಂದೆ ಮಹಿಳೆಯರ ಮೇಲಾಗುತ್ತಿರುವ ಅಪರಾಧಗಳ ಕುರಿತಾಗಿ ಕೆಲವು ಮಾಹಿತಿಗಳನ್ನು ನೀಡಿದರು ಇವುಗಳನ್ನು ಗಮನಿಸಿದರೆ, ಮಹಿಳೆಯರಿಗೆ ಈ ಸಮಾಜ ನೀಡುತ್ತಿರುವ ಸಾಮಾಜಿಕ ರಕ್ಷಣೆಯ ಕುರಿತಾದ ಸ್ಪಷ್ಟ ಚಿತ್ರಣ ದೊರೆಯುತ್ತದೆ.

ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರಗಳು 1994 ರಲ್ಲಿ 12,351. ಆಗಿದ್ದರೆ 1995 ರಲ್ಲಿ 19,259, 1996 ರಲ್ಲಿ 11,5773. 98-99 ರಲ್ಲಿ ಎಷ್ಟಾಗಿರಬಹುದು ನೀವೆ ಊಹಿಸಿ?

99 ರ ಏಪ್ರಿಲ್ ತಿಂಗಳ ಒಳಗೆ ಅಂದರೆ ನಾಲ್ಕೇ ತಿಂಗಳ ಅವಧಿಯಲ್ಲಿ ಬೆಂಗಳೂರು ಜಿಲ್ಲೆಯೊಂದರಲ್ಲೇ ಅಪಹರಿಸಲ್ಪಟ್ಟ ಮಹಿಳೆಯರ ಸಂಖ್ಯೆ 505

ಹಾಗೆಯೇ ಅಸ್ವಾಭಾವಿಕವಾಗಿ ಮರಣ ಹೊಂದಿದ ಮಹಿಳೆಯರ ಸಂಖ್ಯೆಯನ್ನು ನೋಡೋಣ.... (ಬೆಂಗಳೂರು ನಗರ ಮಾತ್ರ) 1996 ರಲ್ಲಿ 366, 97 ರಲ್ಲಿ 546, 98 ರಲ್ಲಿ 723, 99 ರ ಏಪ್ರಿಲ್ ಹೊತ್ತಿಗಾಗಲೇ 315 ಪ್ರಕರಣಗಳು.

ಮಹಿಳೆಯರ ಮೇಲೆ ಇಷ್ಟೊಂದು ವೇಗವಾಗಿ ನಡೆಯುತ್ತಿರುವ ಕ್ರೌರ್ಯಗಳಿಗೆ ಹೊಣೆ ಯಾರು? ಕೋಡಿಯಾಗುತ್ತಿರುವ ಮಹಿಳೆಯರ ಕಣ್ಣೀರಿಗೆ ಬೆಲೆ ತೆರುವವರು ಯಾರು?

ಮಹಿಳೆಯರ ಸಂಕಷ್ಟಗಳು ಮಹಿಳೆಯರದ್ದು ಮಾತ್ರವೇ? ಅಥವಾ ಸಮಾಜದ ಸಂಕಷ್ಟವೇ? ಮಹಿಳೆ ಈ ಸಮಾಜದ ಭಾಗವಲ್ಲವೆ? ಇವುಗಳು ಪ್ರತಿಯೊಬ್ಬ 'ಪ್ರಜ್ಞಾವಂತ' ನಾಗರೀಕರು ಹಾಕಿಕೊಳ್ಳಬೇಕಾದ ಗಂಭೀರ ಪ್ರಶ್ನೆ.

ಅತ್ಯಾಚಾರಕ್ಕೊಳಗಾಗುವಲ್ಲಿ ಮಹಿಳೆಯರ ಹೊಣೆಗಾರಿಕೆಯೂ ಇರುವುದೆ?

ನಾನು ಒಮ್ಮೆ ಬೆಂಗಳೂರಿನ ಮೈಸೂರು ರಸ್ತೆಯ ಸ್ಲಂ ಪ್ರದೇಶವೊಂದರ ಜೆ.ಎಂ.ಎಸ್. ಘಟಕಕ್ಕೆ ಭೇಟಿ ನೀಡಲು ಹೋಗಿದ್ದೆ. 2-3 ದಿನಗಳ ಹಿಂದೆಯಷ್ಟೇ ಹಳ್ಳ ದಿಣ್ಣೆಗಳಿಂದ ಕೂಡಿರುವ ಬಸ್ ಸೌಕರ್ಯವಿಲ್ಲದ ಆ ಪ್ರದೇಶದಲ್ಲಿ ಕಾಲೇಜು ಮುಗಿಸಿ ಯುವತಿಯೊಬ್ಬಳು ಮನೆಗೆ ಹಿಂತಿರುಗುತ್ತಿರುವಾಗ ಆಕೆಯ ಮೇಲೆ ಅತ್ಯಾಚಾರ ನಡೆದಿತ್ತು, ನಾನು ಹೋದ ದಿನ ಮಹಿಳೆಯರ ಗುಂಪೊಂದು ಅಲ್ಲಿ ಸೇರಿ ಆ ಘಟನೆಯ ಬಗ್ಗೆ ಅವರದ್ದೇ ಆದ ವಿವಾದಗಳನ್ನು ಮಂಡಿಸುತ್ತಿದ್ದರು. ಅತ್ಯಾಚಾರವೆಸಗಿದವನ ತಪ್ಪೆಷ್ಟು ಅತ್ಯಾಚಾರಕ್ಕೊಳಗಾದವಳ ತಪ್ಪೆಷ್ಟು ಎಂದು ಗಣಿತದ ಲೆಕ್ಕ ಮಾಡುವ ಹಾಗೆ ಲೆಕ್ಕಾಚಾರ ಮಾಡುತ್ತಿದ್ದರು. ಈ ಮಧ್ಯೆ ಒಬ್ಬ ಮಹಿಳೆ ಘಂಟಾಘೋಷವಾಗಿ ಒಂದು ವಾದ ಮಂಡಿಸಿದಳು.

ಅವಳು ಕಾಲೇಜಿಗೆ ಹೋಗುವಾಗ ಎಷ್ಟು ಅಲಂಕಾರ ಮಾಡುವುದು ತುಟಿಗೆ ಬಣ್ಣ, ಕಣ್ಣಿನ ಹುಬ್ಬಿಗೆ ಬಣ್ಣ, ಬಟ್ಟೆಗೊಪ್ಪುವ ಸರ-ಓಲೆ ಸೆಟ್ಟು, ಆ ಬೆಡಗು ಮಾಡುತ್ತಿದ್ದರಿಂದಲೇ ಆಕೆಗೆ ಆ ಸ್ಥಿತಿ ಬಂದಿದ್ದು. ಅವಳೇನು ಕಡಿಮೆಯೇ? ಅವಳಾಗಿ ಅವಳೇ ಕಷ್ಟ ತಂದಿಟ್ಟು ಕೊಂಡಳು ಎಂದಳು.

ಆ ಮಹಿಳೆಯ ವಾದ ಸತ್ಯವೇ. ಆದರೆ, ತನ್ನ ಮನಸ್ಸಿಗೆ ಹಿಡಿಸುವ ಅಲಂಕಾರ ಮಾಡಿಕೊಳ್ಳುವ ಅಧಿಕಾರವು ಮಹಿಳೆಗಿಲ್ಲವೆ? ಎನ್ನುವ ಪ್ರಶ್ನೆ ಒಂದು ಕಡೆಯಾದರೆ, ಅಲಂಕಾರಕ್ಕೆ ಬದಲಿಯಾಗಿ ಇಷ್ಟು ದೊಡ್ಡ ಬೆಲೆ ತೆರಬೇಕೆ ಎನ್ನುವುದು ಮತ್ತೊಂದು ಪ್ರಶ್ನೆ.

ವಯಸ್ಸು ಅಂದ-ಚಂದ, ಇತ್ಯಾದಿ ಎಲ್ಲವನ್ನೂ ಮೀರಿ ಅತ್ಯಾಚಾರಗೈಯ್ಯುವ ವಿಕೃತ ಮನಸ್ಸುಗಳಿಗೆ ಬಹುಶಃ ಮೇಲಿನ ಕಾರಣ ಕ್ಷುಲ್ಲಕವೇ. ಆದರೆ ನಾವೇಕೆ ಮುಗ್ಧ ಹೆಣ್ಣು ಮಕ್ಕಳನ್ನು ಹೊಣೆ ಮಾಡಿ ಸಮಾಧಾನ ಪಡುತ್ತಿದ್ದೇವೆ.

ಬಹುಶಃ ಪುರುಷ ಪ್ರಧಾನ ಸಾಮಾಜಿಕ ಮೌಲ್ಯಗಳ ಹಿಡಿತ ಎನ್ನುವುದಕ್ಕಿಂತ ಸ್ಥಾಪಿತ ಹಿತಾಸಕ್ತಿಗಳ ಪ್ರಾಬಲ್ಯವೇ ಈ ರೀತಿಯ ಖಂಡನೀಯ ಘಟನೆಗಳನ್ನು ಸಮರ್ಥಿಸಲು ಧೈರ್ಯ ಹುಮ್ಮಸ್ಸನ್ನು ನೀಡುತ್ತವೆಯೆಂದರೆ ತಪ್ಪಾಗಲಾರದು.

ಮಹಿಳೆಯನ್ನು ಅಲಂಕಾರದ ಬೊಂಬೆಯೆಂದು, ಭೋಗದ ವಸ್ತುವೆಂದು, ಪುರುಷನನ್ನು ತೃಪ್ತಿಪಡಿಸಲೆಂದೇ ಹೆಣ್ಣಿನ ಜನ್ಮವೆಂದು ಸಂದೇಶ ಕೊಟ್ಟವರು ಯಾರು? ಹೆಣ್ಣೆಂಬ ಕಾರಣಕ್ಕಾಗಿಯೇ ಮಹಿಳೆ ಏನೆಲ್ಲಾ ದಬ್ಬಾಳಿಕೆಗಳನ್ನು ಮೌನವಾಗಿ ಎಷ್ಟು ಕಾಲ ಅನುಭವಿಸುವುದು? ಕೊನೆಗೆ ಅತ್ಯಾಚಾರಕ್ಕೊಳಗಾದ ಆ ಯುವತಿ ಪೊಲೀಸರಿಗೆ ದೂರನ್ನು ಸಹ ನೀಡಿರಲಿಲ್ಲ. ನಾನು ಎಷ್ಟು ಧೈರ್ಯ ಕೊಟ್ಟರೂ ಆ ಮಹಿಳೆಯರು ಬೇಡ ಮೇಡಂ, ಅವನು ರೌಡಿ, ರಾಜಕೀಯ ಪಕ್ಷದ ಬೆಂಬಲ ಇರುವವನು ಅವನ ವಿರುದ್ಧ ದೂರು ದಾಖಲಿಸಿದರೆ ಜೀವವೂ ಹೋದೀತು, ಈ ವಿಷಯವನ್ನು ನೀವು ದಯವಿಟ್ಟು ಬೇರೆ ಕಡೆಯೂ ತಿಳಿಸಬೇಡಿ ಎಂದು ನನಗೆ ಸಲಹೆ ನೀಡಿ ವಾಪಸ್ಸಾದರು. ಅಂದರೆ ದಾಖಲಾಗದ ಇಂತಹ ದೌರ್ಜನ್ಯಗಳು ಅದೆಷ್ಟೋ?

ಕುಡುಕ ಗಂಡನ ಕೂಡಿ

ಕೂಲಿಯ ಮಾಡ್ಯಾಳೆ

ಬೆಂಗಳೂರಿನ ನಾಗರಬಾವಿ ಪ್ರದೇಶದಿಂದ ಜಯಮ್ಮ ಎನ್ನುವ ಮಹಿಳೆ ಅಲ್ಲಿನ ಜೆ.ಎಂ.ಎಸ್. ಘಟಕಕ್ಕೆ ದೂರು ನೀಡಿ ಸಹಾಯ ಕೇಳಿ ಬಂದರು. ಒಂದು ದಿನ ಬೆಳಗಿನ ಜಾವಕ್ಕೆ ಜೆ.ಎಂ.ಎಸ್.ನ ಬೆಂಗಳೂರು ಜಿಲ್ಲಾ ಅಧ್ಯಕ್ಷೆ ಸುನಂದಾ ಅವರ ಮನೆಯ ಬಾಗಿಲನ್ನು ತಟ್ಟಿ ಅಳುತ್ತಾ ನಿಂತಿದ್ದ ಆ ಮಹಿಳೆ ಅಕ್ಕ ರಾತ್ರಿ ಎರಡು ಘಂಟೆಯಲ್ಲಿ ನನ್ನ ಗಂಡ ಕುಡಿದು ಬಂದು ನನ್ನನ್ನು ಮೈಯೆಲ್ಲಾ ಊದುವಂತೆ ಹೊಡೆದು ರಾತ್ರಿಯಿಡಿ ಮನೆಯಿಂದ ಹೊರಗೆ ಹಾಕಿದ್ದಾನೆ. ನನಗೆ ಸಹಾಯ ಮಾಡಿ ಎಂದರು. ಕೂಡಲೆ ಮಹಿಳಾ ಸಹಾಯವಾಣಿಯ ನೆರವನ್ನು ಕೋರಲಾಗಿ "ಹೊಯ್ಸಳ" ಪೊಲೀಸ್ ಜೀಪ್ ಬಂದಿತು. ಜೀಪಿನಲ್ಲಿ ಆ ಮಹಿಳೆಯ ಕರೆದುಕೊಂಡು ಹೋಗಿ ಆಕೆಯಿಂದ ದೂರನ್ನು ಪಡೆದು ಸ್ಥಳೀಯ ಠಾಣೆಗೆ ಅದನ್ನು ವರ್ಗಾಯಿಸಿತು.

ಠಾಣೆಯ ಸಿಬ್ಬಂದಿ ಮಹಿಳೆಯನ್ನು ಕಂಡ ಕೂಡಲೆ ಯಾವಾಗಲೂ ಇರುವುದೇ ಗೋಳು. ಎಷ್ಟು ಸಲ ಸ್ಟೇಷನ್ನಿಗೆ ಬರುವುದು ಮಾಡಲು ಬೇರೆ ಕೆಲಸವಿಲ್ಲವಾ ಎಂದು ಹಾರಾಡಿದರು. ನಾವು ಮಹಿಳಾ ಸಂಘಟನೆಯವರು ಮಾಡಲು ನಮಗೆ ಬೇಕಾದಷ್ಟು ಕೆಲಸಗಳಿವೆ ಸಮಯ ಹಾಳು ಮಾಡದೆ ಕೇಸನ್ನು ದಾಖಲಿಸಿ ಎಂದು ಸುನಂದ ಖಾರವಾಗಿ ಮಾತನಾಡಿದ ನಂತರ ಏನೋ ಒಂದು ಬರೆದುಕೊಂಡು, ಗಂಡನನ್ನು ಠಾಣೆಗೆ ಕರೆಸಿಬುದ್ದಿ ಹೇಳಿ ಕಳಿಸಿದರು.

ಮದುವೆಯಾದ ನಂತರ ಹೆಂಡತಿ ಮಕ್ಕಳನ್ನು ಬಿಟ್ಟು 4 ವರ್ಷಗಳ ಕಾಲ ಎಲ್ಲಿಯೋ ಹೋಗಿದ್ದವ ವಾಪಸ್ಸು ಬಂದ ಮೂರೇ ತಿಂಗಳಲ್ಲಿ ಆಕೆ ವಾಸಿಸುತ್ತಿದ್ದ ಮನೆಯನ್ನು ವಶಪಡಿಸಿಕೊಳ್ಳಲು ಇಲ್ಲ-ಸಲ್ಲದ ನೆವಗಳನ್ನು ಮುಂದೆ ಮಾಡಿ ಸ್ಥಳೀಯ ಪ್ರಭಾವಿ ವ್ಯಕ್ತಿ(?)ಯೊಬ್ಬರ ಬೆಂಬಲವನ್ನು ಪಡೆದು ಆಕೆಗೆ ಚಿತ್ರಹಿಂಸೆ ನೀಡುತ್ತಿದ್ದ. ಆಕೆ ಪೊಲೀಸರಿಗೆ ತಿಳಿಸುವುದಾಗಿ ಹೇಳಿದರೆ ಅವನೇ ಮುಂಚಿತವಾಗಿ ಹೋಗಿ ಆಕೆಯ ಮೇಲೆ ಕಥೆ ಕಟ್ಟಿ ಬರುತ್ತಿದ್ದ. ಪೊಲೀಸರಿಗೆ "ದಿನಾ ಸಾಯುವವರಿಗೆ ಅಳುವವರು ಯಾರು ಎನ್ನುವ ಧೋರಣೆ?

ಬಾಯಿ ಮಾತಿನ ಬುದ್ದಿಯನ್ನಷ್ಟೇ ಹೇಳಿ ಕಳಿಸಿದ್ದ ಪೊಲೀಸರ ಬಗ್ಗೆ ಹೆದರದ ಆಕೆಯ ಗಂಡ ಅದೇ ವಾರದಲ್ಲಿ ಮತ್ತೊಂದು ದಿನ ಮಧ್ಯ ರಾತ್ರಿ ಚೆನ್ನಾಗಿ ಥಳಿಸಿದ. ಬೆಳಿಗ್ಗೆ ಸ್ಥಳೀಯ ಠಾಣೆಗೆ ದೂರು ನೀಡಿ ಹೊಯ್ಸಳ ನೆರವು ಕೋರಲಾಗಿ ಸ್ಥಳಕ್ಕೆ ಬಂದ ಪೊಲೀಸರು ಆಕೆಗೆ ಸಹಕರಿಸಿದ್ದು ಹೀಗೆ... "ಏನೇ ನಿನಗೆ ಸ್ವಲ್ಪವೂ ಭಯ-ಭಕ್ತಿ ಬೇಡವಾ ಇಷ್ಟಕ್ಕೆಲ್ಲಾ ಹೊಯ್ಸಳಕ್ಕೆ ಫೋನ್ ಮಾಡುವುದಾ, ನೀನು ಸರಿಯಿದ್ದಿದ್ದರೆ ನಿನ್ನ ಗಂಡ ಚೆನ್ನಾಗಿಯೇ ನೋಡಿರುತ್ತಿದ್ದ ನೀನು ನಡತೆಗೆಟ್ಟವಳು.." ಮುಂತಾದ ಅವಾಚ್ಯ ಶಬ್ದಗಳಿಂದ ನಿಂದಿಸಿ ನಡೆಯಲಾರದ ಸ್ಥಿತಿಯಲ್ಲಿದ್ದವಳನ್ನು ಠಾಣೆಗೆ ಕರೆದೊಯ್ಯಲಾಯಿತು (ಹೊಯ್ಸಳ ನಂ. 12 ಕೆ.ಎ.04 ಎನ್. 9226)

ವಿಷಯ ತಿಳಿದ ನಾನು ಸುನಂದ ಮತ್ತು ನಮ್ಮ ಜಿಲ್ಲಾ ಸಮಿತಿ ಸದಸ್ಯೆ ವಿಶಾಲವುತಿ ಠಾಣೆಗೆ ಧಾವಿಸಿದೆವು. ಗಂಡನನ್ನು ಕರೆದುಕೊಂಡು ಹೋಗಿ ಠಾಣೆಯಲ್ಲಿ ಕೂಡಿ ಹಾಕಿದ್ದರು. ಕೇಸನ್ನು ಮಾತ್ರ ದಾಖಲಿಸಿರಲಿಲ್ಲ. ಕೇಸನ್ನು ದಾಖಲಿಸಿ ಆಕೆಗೆ ಪರಿಹಾರ ಹಾಗೂ ನ್ಯಾಯ ನೀಡುವಂತೆ ಕೋರಿದರೆ ಪ್ರಭಾವಿ ವ್ಯಕ್ತಿಯನ್ನು ಕರೆಸುವ ಏರ್ಪಾಡು ಮಾಡಿದರು. ಇದರ ಅಗತ್ಯವನ್ನು ನಾವು ಪ್ರಶ್ನಿಸಿ ದೂರನ್ನು ದಾಖಲಿಸಲೇ ಬೇಕೆಂದು ಪಟ್ಟು ಹಿಡಿದ ನಂತರ ದೂರನ್ನು ದಾಖಲಿಸಿದರು. ಹೊಡೆತ-ಬಡಿತ ನಿಲ್ಲಿಸುವುದಾಗಿ ಆಕೆಯ ಗಂಡನಿಂದ ಲಿಖಿತ ಹೇಳಿಕೆ ಪಡೆದು ಮತ್ತೊಂದು ಅವಕಾಶ ಕಲ್ಪಿಸಿ ಇಬ್ಬರನ್ನೂ ವಾಪಸ್ಸು ಕಳಿಸಿದರು.

ಮಾತು-ಮಾತಿಗೂ ಠಾಣೆಗೆ ಬರಬೇಡಮ್ಮ, ಹೆಂಗಸರಿಗೆ ತಾಳ್ಮೆ-ಸಹನೆ ಬೇಕು ಅಡ್ಜಸ್ಟ್ ಮಾಡಿಕೊಂಡು ಹೋಗು ಏನು ಮಾಡಲು ಸಾಧ್ಯ, ಹಣೆಬರ ಎಂದು ಮೈಯೆಲ್ಲಾ ಊದಿ ಗಾಯಗೊಂಡಿದ ಆಕೆಗೆ ಕೊನೆ ಕಿವಿ ಮಾತು ಹೇಳಿ ಕಳಿಸಿಕೊಟ್ಟರು. ಮೇಲಧಿಕಾರಿಗಳ ಗಮನಕ್ಕೆ ತಂದಾಗಲಷ್ಟೇ ಅಷ್ಟೊ-ಇಷ್ಟು ಪರಿಹಾರ ದೊರೆಯಿತೇ ಹೊರತು ವಾಸದ ಮನೆಯ ಗ್ಯಾರಂಟಿಯಾಗಲಿಲ್ಲ. ಉಚಿತ ಸರ್ಕಾರಿ ಸೈಟಿನಲ್ಲೂ ಆಕೆಯ ದುಡಿಮೆಯ ಹಣವನ್ನು ಖರ್ಚು ಮಾಡಿ ಕಟ್ಟಿದ ಮನೆಯಲ್ಲಿ ಆಕೆಗೆ ನೆಲೆಯಿಲ್ಲದ ಸ್ಥಿತಿ.

"ಜಂಟಿ ಪಟ್ಟಾ" ಜಾರಿಮಾಡುವಂತೆ ಒತ್ತಾಯಿಸಿ ಜೆ.ಎಂ.ಎಸ್. ಮಾಡುತ್ತಿರುವ ಹೋರಾಟದ ಮಹತ್ವ ಮಹಲುಗಳಲ್ಲಿ ಕುಳಿತು ಅಧಿಕಾರ ನಡೆಸುವ ಆಳುವ ಜನರಿಗೆ ಹೇಗೆ ಅರ್ಥವಾಗಬೇಕು.

ಮಹಿಳೆಯರ ಕೊರಳಿಗೆ ಹುರುಳಾಗುತ್ತಿರುವ ಗ್ರಾಹಕ-ಕೊಳ್ಳುಬಾಕ ಸಂಸ್ಕೃತಿ

ಒಂದು ಉದಾಹರಣೆ ನೋಡಿ ಕೆ.ಆರ್. ಪುರದ ಲೀಲಾವತಿ-ವಿವಾಹವಾಗಿ 3 ವರ್ಷಗಳಾಗಿವೆ. 2 ವರ್ಷದ ಹೆಣ್ಣು ಮಗುವಿದೆ. ಮದುವೆಯ ಸಂದರ್ಭದಲ್ಲಿ ತೌರಿನವರು ಸಾಕಷ್ಟು ಉಡುಗೊರೆಗಳನ್ನು (ಒಂದು ಲಕ್ಷ ಮೌಲ್ಯದ) ನೀಡಿರುತ್ತಾರೆ ಅದ್ದೂರಿ ಮದುವೆ ನಡೆದಿದೆ. ಮದುವೆಯಾದ ವರ್ಷಕ್ಕೆ ಅದು ತಾ ಇದು ತಾ ಮತ್ತಷ್ಟು ವರದಕ್ಷಿಣೆ ತೆಗೆದುಕೊಂಡು ಬಾ ಇಲ್ಲವಾದರೆ ಮನೆಯಿಂದ ಹೊರಗಡೆ ಹೋಗು ನಿನ್ನನ್ನು ಮದುವೆ ಯಾದದ್ದು ಬಿಕಾರಿಯಾಗಿ ಬದುಕಲು ಅಲ್ಲ. ನಿಮ್ಮ ಅಪ್ಪನಿಗೆ ಹೇಳು ಎಂದು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಲು ಪ್ರಾರಂಭಿಸಿದರು. 19 ವರ್ಷದ ಲೀಲಾವತಿಗೆ ಗಿಡುಗನ ಬಾಯಿ ಹೊಕ್ಕಂತಾಯಿತು. ಅಪ್ಪನ ಬಳಿ ಕಷ್ಟ ಹೇಳಲಾಗಿ ಅಪ್ಪ ಆಗಾಗ ಐದು, ಹತ್ತು, ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟರು. ಇಷ್ಟರಿಂದಲೇ ತೃಪ್ತರಾಗದ ಧನಪಿಶಾಚಿಗಳು ಲೀಲಾವತಿಗೆ ಮತ್ತಷ್ಟು ಹಿಂಸೆ ನೀಡಲು ಮುಂದಾದರು. ಒಂದು ದಿನ ಮಧ್ಯಾಹ್ನ ಅತ್ತೆ, ಮಾವ ಮೈದುನ ಗಂಡ ಸೇರಿ ಆಕೆಯನ್ನು ಬಂಧುಗಳ ಮನೆಗೆ ಕರೆದುಕೊಂಡು ಹೋಗುತ್ತೇವೆಂದು ಹೇಳಿ ಊರಾಚೆಯ ನಿರ್ಜನ ಪ್ರದೇಶದ ರೈಲ್ವೆ ಹಳಿಯ ಮೇಲೆ ಬಲವಂತದಿಂದ ದೂಡಿ ಕೈ ಕಾಲು ಹಿಡಿದು ರೈಲು ಬರುವುದನ್ನು ನಿರೀಕ್ಷಿಸುತ್ತಿದ್ದರು. ಕೂಲಿ ಕೆಲಸಕ್ಕೆಂದು ನಡೆದು ಹೋಗುತ್ತಿದ್ದ ಕೆಲ ಜನರು ಅದೇ ಮಾರ್ಗವಾಗಿ ಬರುವುದನ್ನು ಗಮನಿಸಿ, ಆಕೆಯ ಸಾವಿನ ಪರದೆಯನ್ನು ನಾಟಕೀಯವಾಗಿ ಸರಿಸಿ ಏನೂ ನಡೆಯದವರಂತೆ ಮನೆಗೆ ಕರೆದೊಯ್ದರು.

ಅದೇ ವಾರದಲ್ಲಿ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚುವ ಪ್ರಯತ್ನ ನಡೆಸಿದರು. ಕ್ಷಣಾರ್ಧದಲ್ಲಿ ಅಲ್ಲಿಂದ ಮಗುವಿನೊಂದಿಗೆ ಸಿನಿಮೀಯ ಮಾದರಿಯಲ್ಲಿ ಲೀಲಾವತಿ ತಪ್ಪಿಸಿ ಕೊಂಡು ಸ್ಥಳೀಯ ಪೊಲೀಸರಿಗೆ ದೂರಿತ್ತಳು.

ಪ್ರಕರಣ ದಾಖಲಾಗಲಿಲ್ಲ ಬದಲಿಗೆ "ಪುರುಷ ಪ್ರಧಾನ ಸಮಾಜ ಮೌಲ್ಯಗಳನ್ನು ಎತ್ತಿ ಹಿಡಿಯುವ ವಕ್ತಾರರಂತೆ ವರ್ತಿಸಿದ ಪೊಲೀಸರು ಆಕೆಗೆ ಆದರ್ಶದ ಪಾಠ ಹೇಳಿ ಕಳಿಸಿದರು. ಈಕೆ ತವರಿಗೆ ಬಂದ ನಂತರ ಗಂಡನಿಗೆ ಬೇರೆ ಮದುವೆ ಮಾಡುವ ತಯಾರಿ ನಡೆಯುತ್ತಿತ್ತು. (ಗಂಡನ ಅಣ್ಣನಿಗೆ ಸಹ ಎರಡು ಮದುವೆ) ಇದನ್ನು ಪೊಲೀಸರ ಗಮನಕ್ಕೆ ತರಲು ಹೋದ ಲೀಲಾವತಿಗೆ ಮತ್ತೆ ಪೊಲೀಸರಿಂದ ಅವಮಾನ "ಕೊನೆಗೆ ಆಕೆಗೆ ನೆನಪಾದದ್ದು ಜನವಾದಿ ಮಹಿಳಾ ಸಂಘಟನೆ" ಕೆ.ಆರ್.ಪುರಂನ ಗೌರಮ್ಮ ಅವರ ಬಳಿ ಬಂದು ಅಳಲನ್ನು ತೋಡಿಕೊಂಡರು. ಕೊನೆಗೆ ನಾನು ಗೌರಮ್ಮ ಸಿಐಟಿಯುವಿನ ಕೆಲವು ಸಂಗಾತಿಗಳು ಠಾಣೆಗೆ ಹೋಗಿ ಅವರ ಕ್ರಮವನ್ನು ಪ್ರತಿಭಟಿಸಿದ ನಂತರ ಎಫ್.ಐ.ಆರ್ ದಾಖಲಾಯಿತು. ಗಂಡನನ್ನು ಬಂಧಿಸಿ ಬಿಡುಗಡೆ ಮಾಡುವ ನಾಟಕ ನಡೆಯಿತು. ಮಹಿಳಾ ಸಂಘಟನೆಯ ಗಮನಕ್ಕೆ ಈ ಪ್ರಕರಣ ಬಂದ ನಂತರ ಗಂಡ ಆಕೆಯನ್ನು ಸಿಕ್ಕಲ್ಲಿ ಹೊಡೆಯುವ ಕೃತ್ಯ ನಿಂತಿದೆಯಾದರು ಪೊಲೀಸರ ಅಸಹಕಾರದಿಂದಾಗಿ ಆಕೆಗೆ ನ್ಯಾಯ ಸಿಗುವಲ್ಲಿ ವಿಳಂಬವಾಗುತ್ತಿದೆ. ಮಹಿಳಾ ಸಂಘಟನೆ ಆಕೆಗೆ ಎಲ್ಲಾ ರೀತಿಯ ಅಗತ್ಯ ನೆರವನ್ನು ನೀಡುತ್ತಿದೆ. ಸುಲಭ ಮಾರ್ಗದಲ್ಲಿ ಎಲ್ಲಾ ಐಷಾರಾಮಿ ಸಾಮಗ್ರಿಗಳು ಧಕ್ಕಬೇಕೆನ್ನುವ ದಾಹಕ್ಕೆ ಲೀಲಾವತಿಯಂತಹ ಅದೆಷ್ಟು ಮಹಿಳೆಯರ ಬಲಿ.

ಗ್ರಾಹಕ ಸಂಸ್ಕೃತಿಯ ಪೈಪೋಟಿಗೆ ಲಗಾಮು ಹಾಕಬೇಕಾದ ಹೊಣೆಗಾರಿಕೆ

ನೇಕಾರರನ್ನು ನರಕಯಾತನೆಗೆ ನೂಕುತ್ತಿರುವ ಕೈಮಗ್ಗ ಅಭಿವೃದ್ಧಿ ನಿಗಮ

- ನಿತ್ಯಾನಂದ ಸ್ವಾಮಿ

ಆತ ನರಸಾಪುರದ ನೇಕಾರ. ಮಡದಿ, ಇಬ್ಬರು ಮಕ್ಕಳು ಸೇರಿ ಆತನದೊಂದು ಪುಟ್ಟ ಸಂಸಾರ.ಕಳೆದ ಹತ್ತಾರು ವರ್ಷಗಳಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಡಿಯಲ್ಲಿ ನೇಯ್ಗೆ ಕೆಲಸಮಾಡಿಕೊಂಡು ಆತ ದಿನದೂಡುತ್ತಿದ್ದ. ಡಚ್ ಸರ್ಕಾರದ ನೆರವಿನಿಂದ ಕಟ್ಟಿಸಿಕೊಡಲಾದ ವಸತಿಸಹಿತ ಕಾರ್ಯಗಾರ ಎನ್ನುವ ಮನೆಯ ಅಲುಗಾಡುವ ಗೋಡೆಗಳಂತೆ ಆತನ ಅಭದ್ರ ಬದುಕು. ನಿಗಮದ ಅಧಿಕಾರಿ ನೂಲು ಕೊಟ್ಟರೆ ಮನೆಯಲ್ಲಿ ಲಟ-ಪಟ ನಾದ, ಸಂಜೆಗೆ ಒಲೆಯಲ್ಲಿ ಬೆಂಕಿ ನೂಲು ಸಿಗಲಿಲ್ಲ ವೆಂದರೆ ಸ್ಮಶಾನಮೌನ!

ಅಂದು ಆತ ಎಂದಿನಂತಿರಲಿಲ್ಲ. ಕಳೆದ ಒಂದು ತಿಂಗಳಿನಿಂದ ಪ್ರತಿದಿನ ಆತ ನಿಗಮದ ಆಫೀಸಿಗೆ ಬರುತ್ತಿದ್ದ. ನೂಲು ವಿತರಣಾ ವಿಭಾಗದ ಅಧಿಕಾರಿ ಒಂದಿಲ್ಲೊಂದು ಕಾರಣ ಹೇಳಿ ಆತನನ್ನು ಬರಿಗೈಯಲ್ಲೇ ವಾಪಸ್ ಕಳುಹಿಸಿದ್ದ. ಸಾಲತಂದು ಒಂದು ವಾರದ ಸಂತೆ ನಡೆಸಿದ್ದಾಯಿತು. ಸಾಲ ಕೊಡುವವರು ಯಾರೂ ಸಿಗದಂತಾದಾಗ ಗೌಂಡಿಯರ ಕೈಯಲ್ಲಿ ಕೂಲಿ ಕೆಲಸಕ್ಕೆ ಹೋದ. ಎಂದೂ ಮಾಡದೆ ಇದ್ದ ಕೆಲಸದಿಂದ ಸುಸ್ತಾಗಿ ಹಾಸಿಗೆ ಹಿಡಿದುಬಿಟ್ಟ. ಮಕ್ಕಳ ಗೋಳು ನೋಡಲಾಗದೆ ಆತನ ಹೆಂಡತಿ ಮಕ್ಕಳೊಂದಿಗೆ ತವರುಮನೆ ದಾರಿಹಿಡಿದಿದ್ದಳು.

" ನೂಲು ಸ್ಟಾಕ್ ಇಲ್ಲ" ನೀನು ಏನೂ ಬೇಕಾದರೂ ಮಾಡ್ಕೊ" ಎಂಬ ನೂಲು ವಿತರಣಾ ಅಧಿಕಾರಿಯ ನಿರ್ಲಿಪ್ತ ಮಾತು ಆತನ ಕಿವಿಗಳಲ್ಲಿ ಇನ್ನು ಪ್ರತಿಧ್ವನಿಗೊಳ್ಳುತ್ತಿತ್ತು. ಆತ ಯಾವಾಗ ಬಂದ ಹೇಗೆ ಬಂದ ಎಂಬುದನ್ನು ಯಾರೂ ಗಮನಿಸಿರಲಿಲ್ಲ. ಆಫೀಸಿನಲ್ಲಿ ಇನ್ನೂ ಹತ್ತಾರು ಜನ ನೇಕಾರರು ನೂಲಿಗಾಗಿ ಕಾಯುತ್ತಿದ್ದರು. ಈತ ಏನು ಮಾಡಲು ಹೊರಟಿದ್ದಾನೆ ಎಂಬುದನ್ನು ಬಗ್ಗೆ ಯಾರೂ ಯೋಚಿಸಿರಲಿಲ್ಲ. ಒಮ್ಮಿಂದೊಮ್ಮೆಲೆ ಆತ ಅಲ್ಲಿಯವರೆಗೆ ಮುಚ್ಚಿಟ್ಟುಕೊಂಡಿದ್ದ ಪ್ಲಾಸ್ಟಿಕ್ ಡಬ್ಬಿಯೊಂದರಿಂದ ಸೀಮೆ ಎಣ್ಣೆಯನ್ನು ತನ್ನ ತಲೆಯ ಮೇಲೆ ಸುರಿಯಲಾರಂಭಿಸಿದಾಗಲೇ ಅಲ್ಲಿದ್ದ ಇತರ ನೇಕಾರರಿಗೆ ಆತ ಅನಾಹುತಮಾಡಿಕೊಳ್ಳುತ್ತಾನೆ ಎಂದು ತಿಳಿದದ್ದು. ಸಮಯ ಪ್ರಜ್ಞೆಯ ಯುವಕನೊಬ್ಬ ಕೈಬೀಸಿ ಕೊಟ್ಟ ಪೆಟ್ಟಿಗೆ ಸೀಮೆಎಣ್ಣೆಯ ಡಬ್ಬಾ ಅಧಿಕಾರಿಯ ಮೇಜಿನ ಮೇಲೆ ಬಿತ್ತು. ಅಷ್ಟರಲ್ಲಿ ಇನ್ನುಳಿದವರು ಆತನ ಮೇಲೆ ಮುಗಿಬಿದ್ದು ಆತನ ಜೇಬಿನಿಂದ ಬೆಂಕಿ ಪೆಟ್ಟಿಗೆಯೊಂದನ್ನು ವಶಪಡಿಸಿಕೊಂಡರು ನಿಗಮದ ಕಛೇರಿಯಲ್ಲಿ ನೇಕಾರನೊಬ್ಬ ಉಪವಾಸ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟದ್ದನ್ನು ವಿಫಲಗೊಳಿಸಿದಂತಾಯಿತು. ಆದರೆ ಈ ಘಟನೆಗೆ ಪ್ರತ್ಯಕ್ಷವಾಗಿ ಕಂಡಿದ್ದ ಅಧಿಕಾರಿಯಾಗಲಿ, ನಿಗಮದ ಆಡಳಿತ ವರ್ಗವಾಗಲಿ ಪಶ್ಚಾತ್ತಾಪ ಪಟ್ಟಂತ ಕಾಣಲಿಲ್ಲ.

ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿ 25 ವರ್ಷಗಳಾಗುತ್ತಿವೆ. ನೇಕಾರರಿಗೆ ಮುಂಗಡ ಸಾಲಕೊಟ್ಟು ಜೀತದಾಳು ಗಳಂತೆ ದುಡಿಸುತ್ತಿದ್ದ ಸಾಹುಕಾರರ ಸುಲಿಗೆಯಿಂದ ನೇಕಾರರನ್ನು ಬಿಡುಗಡೆ ಮಾಡುವ ಉದ್ದೇಶದಿಂದ ನಿಗಮದ ಸ್ಥಾಪನೆಯಾಗಿತ್ತು. ನಿಮಗೆ ವರ್ಷದಲ್ಲಿ 300 ದಿನ ಉದ್ಯೋಗ ಕೊಡುತ್ತೇವೆ, ನಿಮಗೆ ಸರ್ಕಾರದಿಂದ ಸಬ್ಸಿಡಿ ಕೊಡಿಸುತ್ತೇವೆ, ನಿಮಗೆ ವಾಸಮಾಡಲು ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಆಸೆ ತೋರಿಸಿ ನೇಕಾರರನ್ನು ನಿಗಮದ ಅಡಿಯಲ್ಲಿ ಸೇರಿಸಿಕೊಳ್ಳಲಾಗಿತ್ತು. ಆದರೆ ಸರ್ಕಾರಿ ಜಾಹೀರಾತುಗಳು ಕನ್ನಡಿಯೊಳಗಿನ ಮಾವಿನ ಹಣ್ಣಿನಂತೆ ಎಂಬುದು ನೇಕಾರರ ಕಹಿ ಅನುಭವವಾಗಿದೆ.

ರಾಜ್ಯದಲ್ಲಿ ಕನಿಷ್ಠ 50 ಸಾವಿರ ಮಗ್ಗಗಳನ್ನು ನಿಗಮದ ವ್ಯಾಪ್ತಿಗೆ ತರಬೇಕೆಂಬ ಗುರಿಯಿಟ್ಟುಕೊಳ್ಳಲಾಗಿತ್ತು. ಗುರಿ ಮುಟ್ಟು ವುದಿರಲಿ, ನಿಗಮದ ಅಡಿಯಲ್ಲಿದ್ದ 30 ಸಾವಿರ ಮಗ್ಗಗಳ ಪೈಕಿ ಈಗ ಕೇವಲ 10 ಸಾವಿರ ಮಗ್ಗಗಳು ಚಲಾವಣೆಯಲ್ಲಿವೆ. ನೇಕಾರರಿಗೆ ದಿನದಿಂದ ದಿನಕ್ಕೆ ನಿಗಮದ ಮೇಲಿನ ವಿಶ್ವಾಸ ಕಡಿಮೆಯಾಗುತ್ತಿದೆ. ನಿಗಮವನ್ನು ನಂಬಿಕೊಂಡು 'ನೆಮ್ಮದಿಯ ದಿನಗಳಿಗಾಗಿ ಕಾಯುವುದು ಬಿಳಿ ಮೋಡಗಳನ್ನು ನೋಡಿ ಮಳೆಗಾಗಿ ನಂಬಿಕುಳಿತಂತೆ ಎನ್ನುವುದು ಸಾಮಾನ್ಯ ಅಭಿಪ್ರಾಯವಾಗತೊಡಗಿದೆ.

ನಿಗಮದ ಅಡಿಯಲ್ಲಿ ಬಂದ ನಂತರವೂ ನೇಕಾರರು ಸಾಲಕ್ಕಾಗಿ ದುಡಿಯುವುದು ತಪ್ಪಲಿಲ್ಲ. ನಿಗಮವು ನೇಕಾರರ ಹೆಸರಿನಲ್ಲಿ ಬ್ಯಾಂಕಿನಿಂದ ಸಾಲ ಪಡೆಯುತ್ತದೆ. ಸಾಲದ ಹಣವನ್ನು ದುಡಿಯುವ ಬಂಡವಾಳ ಎನ್ನುವ ಹೆಸರಿನಲ್ಲಿ ತನ್ನ ಬಳಿ ಇಟ್ಟುಕೊಳ್ಳುತ್ತದೆ. ನೇಕಾರನ ಸಂಪಾದನೆಯಿಂದ ಕಡಿತ ಮಾಡುವ ಹಣವನ್ನು ಬ್ಯಾಂಕಿಗೆ ತುಂಬುವ ಮೂಲಕ ಸಾಲದ ಕಂತುಗಳನ್ನು ಬಡ್ಡಿ ಸಹಿತವಾಗಿ ಹಿಂತಿರುಗಿಸಬೇಕು ಆದರೆ ನೌಕರ ವರ್ಗದವರಂತೆ ನೇಕಾರರಿಗೆ ನಿಗದಿತ ಆದಾಯ ಇರುವುದಿಲ್ಲ. ನಿಗಮವು ನೂಲನ್ನು ಪೂರೈಸಿದರೆ ಮಾತ್ರ ಇವರಿಗೆ ಉದ್ಯೋಗ. ಉದ್ಯೋಗ ಇದ್ದರೆ ಮಾತ್ರ ಸಂಪಾದನೆ. ನಿಗಮದಿಂದ ನೂಲು ಸರಬರಾಜು ಆಗದಿದ್ದರೆ, ಸಾಲದ ಕಂತುಗಳ ಸಂದಾಯ ನಿಧಾನವಾಗಿ ಸಾಲದ ಹೊರೆ ಬೆಳೆಯುತ್ತಾ ಹೋಗುತ್ತದೆ. ನೇಕಾರರ ಸಂಪಾದನೆಯಿಂದ ಕಡಿತ ಮಾಡಲಾದ ಹಣವನ್ನು ಬ್ಯಾಂಕಿಗೆ ಜಮಾಮಾಡುವ ಬದಲು ನಿಗಮವು ತನ್ನ ಖರ್ಚುವೆಚ್ಚಗಳಿಗಾಗಿ ಬಳಸಿಕೊಳ್ಳುವುದೂ ಉಂಟು.

ನೇಕಾರರಿಗೆ ತುಂಡುದರದಲ್ಲಿ ಕೂಲಿಯನ್ನು ಕೊಡಲಾಗುತ್ತದೆ. ಹತ್ತಿ ನೂಲಿನ ಬಟ್ಟೆಯನ್ನು ನೇಯುವ ನೇಕಾರ ಕುಟುಂಬದ ಮಾಸಿಕ ಸರಾಸರಿ ಸಂಪಾದನೆ ರೂ. 500 ಮಾತ್ರ. ಪಾಲಿಯೆಸ್ಟರ್ ಅಥವ ರೇಶ್ಮೆ ಬಟ್ಟೆಯ ನೇಯ್ಗೆ ಕೂಲಿದರಗಳು ಹತ್ತಿ ಬಟ್ಟೆಯ ದರಗಳಿಗಿಂತ ಸ್ವಲ್ಪ ಮೇಲ್ಮಟ್ಟದಲ್ಲಿರುತ್ತವೆ. ಆದರೆ ಬಿಜೆಪಿಯಂತಹ ಸರ್ಕಾರ ಒಂದು ಅಗತ್ಯ ವಸ್ತುಗಳ ಬೆಲೆಗಳನ್ನು ಗಗನದೆತ್ತರಕ್ಕೆ ಏರಿಸಿರುವಾಗ 500 ರೂಪಾಯಿಗಳ ಮಾಸಿಕ ಸಂಪಾದನೆ ಯಾವ ಮೂಲೆಗೆ?

ಬೆಲೆ ಏರಿಕೆಯ ಬಿಸಿ ತಟ್ಟದವರಿಲ್ಲ ನಿಗಮದ ಅಧಿಕಾರಿ ವರ್ಗದವರಿಗೂ ಅದು ತಟ್ಟಿರುತ್ತದೆ. ಆದರೆ ಅವರುಗಳಿಗೆ ಸಂಬಳದ ಜೊತೆಯಲ್ಲಿ ಬೆಲೆ ಏರಿಕೆಯನ್ನು ಸರಿದೂಗಿಸಲು ತುಟ್ಟಿ ಭತ್ಯೆ ಸಿಗುತ್ತದೆ. ಆದರೆ ನೇಕಾರರಿಗೂ ನ್ಯಾಯವಾಗಿ ತುಟ್ಟಿಭತ್ಯೆ ನೀಡಬೇಕು ಎಂದು ನಿಗಮದ ಆಡಳಿತ ವರ್ಗ ಒಪ್ಪುವುದಿಲ್ಲ. ಸಾವಿರಗಟ್ಟಲೆ ರೂಪಾಯಿ ಮಾಸಿಕ ಸಂಬಳ ಇರುವ ನೌಕರ ವರ್ಗದವರಿಗೆ ತುಟ್ಟಿಭತ್ಯೆ ಅವಶ್ಯ ಎನ್ನುವುದಾದರೆ ಅತೀ ಕಡಿಮೆ ಸಂಪಾದನೆ ಇರುವ ನೇಕಾರರಿಗೆ ಯಾಕೆ ತುಟ್ಟಿಭತ್ಯೆ ಇಲ್ಲ?

ನಿಗಮದ ಸಿಬ್ಬಂಧಿ ವರ್ಗದವರು ವೃತ್ತಿ ಸಂಘಗಳ ಕಾಯ್ದೆ ಅಡಿಯಲ್ಲಿ ಸಂಘ ರಚಿಸಿಕೊಂಡಿದ್ದಾರೆ. ಕಾಲಕಾಲಕ್ಕೆ ವೇತನ ಹೆಚ್ಚಳದ ಬೇಡಿಕೆ ಸಲ್ಲಿಸಿ ದ್ವಿಪಕ್ಷೀಯ ಚರ್ಚೆಯ ಮೂಲಕ ತಮ್ಮ ಸಂಬಳ ಸವಲತ್ತು ಗಳನ್ನು ಹೆಚ್ಚಿಸಿಕೊಳ್ಳುತ್ತಾರೆ. ಆದರೆ ನಿಗಮದ ಆಡಳಿತ ವರ್ಗ ನೇಕಾರರ ಸಂಘಕ್ಕೆ ಮಾನ್ಯತೆ ನೀಡುತ್ತಿಲ್ಲ. ನೇಕಾರರ ಕೂಲಿ ದರಗಳ ಹೆಚ್ಚಳಕ್ಕೆ ಸಂಬಂಧಿಸಿ ನೇಕಾರರ ಸಂಘವನ್ನು ಚರ್ಚೆಗೆ ಕರೆಯುವುದಿಲ್ಲ. ಏಕಪಕ್ಷೀಯವಾಗಿ ಕೂಲಿಯ ದರಗಳನ್ನು ಪರಿಷ್ಕರಿಸಿ ಪ್ರಕಟಿಸುತ್ತದೆ. ನೇಕಾರರ ಅಸಹಾಯಕತೆ ಹಾಗೂ ಸಂಘಟನಾ ಬಲಹೀನತೆಯನ್ನು ನಿಗಮದ ಆಡಳಿತ ವರ್ಗ ಚೆನ್ನಾಗಿ ಬಳಸಿಕೊಳ್ಳುತ್ತದೆ.

ಕೂಲಿ ಹೆಚ್ಚಳಕ್ಕೆ ಒತ್ತಾಯಿಸಿ:

25-5-99 ರಿಂದ ಹುಬ್ಬಳ್ಳಿಯಲ್ಲಿ ಕೆ.ಎಚ್.ಡಿ.ಸಿ. ಕೇಂದ್ರ ಕಛೇರಿಯ ಎದುರು ನೇಕಾರರ ರಾಜ್ಯ ಮಟ್ಟದ ಸಾಮೂಹಿಕ ಉಪವಾಸ ಸತ್ಯಾಗ್ರಹ ಆರಂಭವಾಗಲಿದೆ.

ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅನೇಕ ವರ್ಷಗಳಿಂದ ಜಾರಿಯಲ್ಲಿದ್ದ ಜನತಾ ಸೀರೆ ದೋತಿ ಯೋಜನೆಗೆ ಸಬ್ಸಿಡಿ ನೀಡುವುದನ್ನು ನಿಲ್ಲಿಸಿಬಿಟ್ಟಿದೆ. ಇದರಿಂದಾಗಿ ಸಾವಿರಾರು ನೇಕಾರರಿಗೆ ಉದ್ಯೋಗ ಇಲ್ಲದಂತಾಗಿದೆ. ಆದರೆ ರಾಜ್ಯದಲ್ಲಿ ಜನತಾದಳ ಸರ್ಕಾರ ಈ ಯೋಜನೆಗೆ ಸಬ್ಸಿಡಿ ನೀಡುವುದನ್ನು ಮುಂದುವರೆಸಲು ನಿರ್ಧರಿಸಿ ನೇಕಾರರ ನೆರವಿಗೆ ಬಂದಿದೆ. ಆದರೆ ಸರ್ಕಾರ ನೀಡುವ ಸಬ್ಸಿಡಿ ನೇರವಾಗಿ ನೇಕಾರರಿಗೆ ತಲುಪುವುದಿಲ್ಲ. ಅದರಲ್ಲಿ ಒಂದು ಭಾಗ ನಿಗಮದ ಆಡಳಿತಾತ್ಮಕ ಖರ್ಚಿಗೆ ಹೋಗುತ್ತದೆ. ಇತ್ತ ತುಟ್ಟಿಭತ್ಯೆಯೂ ಇಲ್ಲ, ಅತ್ತ ಸಂಪೂರ್ಣ ಸಬ್ಸಿಡಿಯೂ ಸಿಗದಂತಾಗಿ ನೇಕಾರರ ಸಂಪಾದನೆ ಕುಗ್ಗುತ್ತದೆ.

ವಿದ್ಯಾವಿಕಾಸ ಯೋಜನೆಯ ಅಡಿಯಲ್ಲಿ ಶಾಲಾಮಕ್ಕಳಿಗೆ ಪಾಲಿಯೆಸ್ಟರ್ ನೂಲಿನಿಂದ ಸಮವಸ್ತ್ರ ತಯಾರಿಸಿ ಕೊಡುವುದನ್ನು ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ವಹಿಸಲಾಗಿತ್ತು, ಪಾಲಿಯೆಸ್ಟರ್ ಬಟ್ಟೆಯ ನೇಯ್ಗೆಯಿಂದ ನೇಕಾರರ ಸಂಪಾದನೆಯಲ್ಲಿ ಹೆಚ್ಚಳವಾಗಿತ್ತು. ಈಗ ಶಾಲಾ ಮಕ್ಕಳ ಸಮವಸ್ತ್ರ ಸಿದ್ಧಪಡಿಸುವುದನ್ನು ವಿದ್ಯುತ್ ಚಾಲಿತ ಮಗ್ಗಗಳ ಅಭಿವೃದ್ಧಿ ನಿಗಮಕ್ಕೆ ವಹಿಸಿಕೊಡಲಾಗಿದೆ. ಇದರಿಂದಾಗಿ ಕೈಮಗ್ಗ ನಿಗಮದ ನೇಕಾರರ ಸಂಪಾದನೆಯಲ್ಲಿ ತೀವ್ರ ಕುಸಿತ ಉಂಟಾಗಿದ್ದು ನೇಕಾರರು ಆಘಾತಕ್ಕೊಳಗಾಗಿದ್ದಾರೆ.

ನಿಗಮದ ಅಧಿಕಾರಿಗಳಿಗೆ ಸಿಬ್ಬಂಧಿಯವರಿಗೆ ವಾರದ ರಜೆ ಅಲ್ಲದೆ ಸಂಬಳಸಹಿತದ ರಾಷ್ಟ್ರೀಯ ಮತ್ತು ಧಾರ್ಮಿಕ ಹಬ್ಬದ ರಜೆಗಳಿವೆ. ಹಬ್ಬ ಬರಲಿ, ಹುಣ್ಣಿಮೆ ಬರಲಿ, ನೇಕಾರರು ಮಾತ್ರ ಮಗ್ಗದ ಮೇಲೆ ಕುಳಿತುಕೊಳ್ಳಲೇ ಬೇಕು. ನೇಕಾರರು ಇಂತಹ ಅನೇಕ ಕಾನೂನು ಬದ್ಧ ಹಕ್ಕುಗಳಿಂದ ಇಂದಿಗೂ ವಂಚಿತರಾಗಿ ಉಳಿದಿದ್ದಾರೆ.

ನಿಗಮವು ಲಾಭದಲ್ಲಿರಲಿ ಅಥವಾ ನಷ್ಟದಲ್ಲಿರಲಿ, ನಿಗಮದ ಸಿಬ್ಬಂಧಿ ವರ್ಗದವರು ಪ್ರತಿವರ್ಷ ಬೋನಸ್ ಪಡೆಯುತ್ತಲೇ ಬಂದಿದ್ದಾರೆ. ಆದರೆ ಪ್ರತ್ಯಕ್ಷ ಉತ್ಪಾದನೆಯಲ್ಲಿ ಭಾಗವಹಿಸುವ ನೇಕಾರರಿಗೆ ಬೋನಸ್ ಅನ್ನು ನಿರಾಕರಿಸಲಾಗುತ್ತಾ ಬರಲಾಗಿದೆ. ಬೆಳ್ಳಿ ಹಬ್ಬದ ಉಡುಗೊರೆಯಾಗಿ ಯಾದರೂ ಈ ವರ್ಷ ಬೋನಸ್ ಪಡೆಯಬೇಕೆಂದು ನೇಕಾರರು ಆಸೆಪಡುವುದರಲ್ಲಿ ತಪ್ಪೇನಿದೆ? 1997-98 ನೇ ಸಾಲಿನಲ್ಲಿ ನಿಗಮವು ಲಾಭಗಳಿಸಿದೆ ಎಂದು ಹೇಳಲಾಗುತ್ತಿದೆ. ನಿಗಮದ ಕೆಲವು ಅಧಿಕಾರಿಗಳು ನಿಗಮದ ಲಕ್ಷಗಟ್ಟಲೆ ಹಣವನ್ನು ಅಪವ್ಯಯ ಮಾಡುತ್ತಾ ಬಂದಿರುವುದರಿಂದ ನಿಗಮವು ಸತತವಾಗಿ ನಷ್ಟ ಅನುಭವಿಸುತ್ತಾ ಬಂದಿತ್ತು. ಈಗಲೂ ನಿಗಮದಲ್ಲಿ ಹಣ ಪೋಲಾಗುವುದು ನಿಂತಿಲ್ಲ ನಿಗಮದ ಆಡಳಿತ ವಿಭಾಗ ಸಿಕ್ಕಪಟ್ಟೆ ಬೆಳೆದು ಬಿಳಿ ಆನೆಯಂತೆ ಕೊಬ್ಬಿದೆ. ನೇಕಾರರ ಶ್ರಮಕ್ಕೆ ಪ್ರತಿಫಲವಾಗಿ ದೊರೆಯಬೇಕಾದದು ವ್ಯರ್ಥವಾಗಿ ಸೋರಿ ಹೋಗುತ್ತದೆ. ನೇಕಾರರ ಬದುಕಿನ ಈ ನರಕಯಾತನೆ ತಪ್ಪಬೇಕಾದರೆ ನೇಕಾರರು ರಾಜ್ಯಾದ್ಯಂತ ತಮ್ಮ ಸಂಘಟನೆಯನ್ನು ಬಲಿಷ್ಠಗೊಳಿಸಿ ಕಾಲಕಾಲಕ್ಕೆ ಸಮರಶೀಲ ಹೋರಾಟಗಳನ್ನು ನಡೆಸುವುದೊಂದೇ ದಾರಿಯಾಗಿದೆ

ನಿಮ್ಮ ಪ್ರಶ್ನೆ - ನಮ್ಮ ಉತ್ತರ

ಪುಟ 2 ರಿಂದ

ಕೊರೆಗಳು' ಮೊದಲಾದ ಪುಸ್ತಕಗಳನ್ನು ಓದಿ.

ಎರಡನೇ ಮಹಾಯುದ್ಧ ಕಾಲದಲ್ಲಿಯೂ ಭಾರತ ಸ್ವಾತಂತ್ರ್ಯಕ್ಕಾಗಿ ಧೀರ ಹೋರಾಟವನ್ನು ಕಮ್ಯುನಿಸ್ಟರು ಮಾಡಿದ್ದಾರೆ. ಆದರೆ ಅದು ಕಾಂಗ್ರೆಸ್ ತುಳಿದ ದಾರಿಯಾಗಿರಲಿಲ್ಲ ಅಷ್ಟೆ.

ಎರಡನೇ ಮಹಾಯುದ್ಧ ಆರಂಭವಾಗುವ ವೇಳೆಗೆ ಭಾರತದ ಸ್ವಾತಂತ್ರ್ಯವನ್ನು ಸಾಧಿಸುವುದು ಹೇಗೆ ಎಂಬ ಬಗ್ಗೆ ಕಾಂಗ್ರೆಸ್ಸಿನಲ್ಲಿಯೇ ಒಂದು ಕಡೆ ಗಾಂಧೀಜಿ ಹಾಗೂ ಅವರ ಶಿಷ್ಯ ಮಂಡಳಿಗೂ, ಸುಭಾಶ್ ಚಂದ್ರಬೋಸ್, ನೆಹರೂ, ಸಮಾಜವಾದಿ, ಕಮ್ಯುನಿಸ್ಟರಿಗೂ ಭಿನ್ನಾಭಿಪ್ರಾಯವಿತ್ತು. ಗಾಂಧೀಜಿ ತಮ್ಮದೇ ದಾರಿಯ ಬಗ್ಗೆ ಪಟ್ಟು ಹಿಡಿದಾಗ ಸುಭಾಶ್ ಚಂದ್ರಬೋಸ್‌ರು ಕಾಂಗ್ರೆಸ್ ಬಿಟ್ಟರು. ನೆಹರೂ ಗಾಂಧೀಜಿ ಒತ್ತಡಕ್ಕೆ ಮಣಿದರು. 1937 ರಲ್ಲಿ ಅನೇಕ ಪ್ರಾಂತ್ಯಗಳಲ್ಲಿ ಸರ್ಕಾರ ರಚಿಸಿದ ಕಾಂಗ್ರೆಸ್ ಸ್ವಾತಂತ್ರ್ಯ ಸಮರವನ್ನೇ ಮರೆತಿದ್ದಾಗ ಸ್ವಾತಂತ್ರ್ಯ ಹೋರಾಟದ ಕಹಳೆ ಮೊಳಗಿದ್ದು ಕಮ್ಯುನಿಸ್ಟರು ಹಾಗೂ ಅವರ ನೇತೃತ್ವದ ರೈತ-ಕಾರ್ಮಿಕ ಹೋರಾಟಗಳಿಂದಲೇ. ಎರಡನೇ ಮಹಾಯುದ್ಧ ಆರಂಭವಾದ ಮೇಲೂ ಈ ಹೋರಾಟಗಳು ಮತ್ತಷ್ಟು ತೀವ್ರವಾದವು. ಆದರೆ ಆ ಸಮಯಕ್ಕೆ ಇಡೀವಿಶ್ವದಲ್ಲಿ ಹಿಟ್ಲರನ ನೇತೃತ್ವದ ಪೈಶಾಚಿಕ ಫ್ಯಾಸಿಸ್ಟ್ ಶಕ್ತಿಗಳಿಗೂ, ಅದನ್ನು ಸೋಲಿಸಲು ಒಗ್ಗೂಡಿದ ಬ್ರಿಟನ್, ಅಮೆರಿಕಾ, ಸೋವಿಯತ್ ಒಕ್ಕೂಟಕ್ಕೂ ದೊಡ್ಡ ಹಣಾಹಣಿ ನಡೆದಿತ್ತು. ಇದು ಒಂದು ರೀತಿಯಲ್ಲಿ ಜಗತ್ತಿನಲ್ಲಿ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಇಂತಹ ಸಂದರ್ಭದಲ್ಲಿ ಇಡೀ ಜಗತ್ತಿನಲ್ಲಿ ಎಲ್ಲೂ ಸ್ವಾತಂತ್ರ್ಯ ಉಳಿಯುವುದಿಲ್ಲ ಎನ್ನುವಂತಹ ಪರಿಸ್ಥಿತಿಯನ್ನು ವಿಮರ್ಶೆ ಮಾಡಿದ ಕಮ್ಯುನಿಸ್ಟ್ ಪಕ್ಷ ಭಾರತಕ್ಕೆ ಅಂತಯೇ ಇನ್ನೂ ಅನೇಕ ವಸಾಹತು ದೇಶಗಳಿಗೆ ಸ್ವಾತಂತ್ರ್ಯ ದೊರಕಬೇಕಾದರೆ ಫ್ಯಾಸಿಸ್ಟ್ ಶಕ್ತಿಗಳ ಮೂಲೋತ್ಪಾಟನವಾಗದೆ ಸಾಧ್ಯವಿಲ್ಲ. ಆದ್ದರಿಂದ ಫ್ಯಾಸಿಸ್ಟ್ ವಿರುದ್ಧದ ಹೋರಾಟಕ್ಕೆ ಬೆಂಬಲಿಸಬೇಕು ಎಂದು ತೀರ್ಮಾನಿಸಿತು. ಜೊತೆಗೆ ಕಾರ್ಮಿಕ ವರ್ಗದ ಮೊದಲ ಕ್ರಾಂತಿಯಾದ ಜಗತ್ತಿನ ಅನೇಕ ವಿಮೋಚನಾ ಹೋರಾಟಗಳಿಗೆ ಸ್ಫೂರ್ತಿಯ ಸೆಲೆಯಾದ, ಸ್ವತಃ ಜಯಪ್ರಕಾಶ್ ನಾರಾಯಣರಿಗೆ ಸ್ಫೂರ್ತಿ ನೀಡಿದ ಸೋವಿಯತ್ ಒಕ್ಕೂಟದ ಮೇಲೆ ಒಂದೇ ದಿನ ಧಾಳಿ ಮಾಡಿ ನಿರಂತರವಾಗಿ ಅದನ್ನು ಪುಟಗಟ್ಟಲು ಪ್ರಯತ್ನ ನಡೆಸಲಾಗುತ್ತಿತ್ತು. ಸೋವಿಯತ್ ಒಕ್ಕೂಟದ ರಕ್ಷಣೆಯೂ ಅಂತ ರ್‍ರಾಷ್ಟ್ರೀಯ ಚಳುವಳಿಯಾದ ಕಮ್ಯುನಿಸ್ಟ್ ಚಳುವಳಿಯ ಒಂದು ಮಹತ್ವದ ಕರ್ತವ್ಯ ಯುದ್ಧದ ನಂತರ ಬೆಳಕಿಗೆ ಬಂದ, ಜಗತ್ತನ್ನೇ ಗಾಬರಿಗೀಡು ಮಾಡಿದ ಸಂಗತಿಗಳನ್ನು ಗಮನಿಸಿದರೆ ಈ ಮಾತಿನ ಸತ್ಯ ಅರಿವಾಗುತ್ತದೆ. ಕೋಟ್ಯಾಂತರ ಜನರನ್ನು ಬರ್ಬರ ಕೊಲೆಗೈದ ರಾಕ್ಷಸೀ ಕೃತ್ಯದ ಜೊತೆಯಲ್ಲಿಯೇ ಆಪರೇಷನ್ ಬಾರ್ಬರೋಸಾ ಎಂದು ಹೆಸರಿಟ್ಟ ರಷ್ಯದ ಮೇಲಿನ ಯುದ್ಧದ ನಂತರ 'ಆಪರೇಷನ್ ಓರಿಯೆಂಟ್' ಎಂಬ ಅಫ್ಘಾನಿಸ್ತಾನದ ಮೂಲಕ ಭಾರತವನ್ನು ಆಕ್ರಮಿಸುವ ಯೋಜನೆ ಹಿಟ್ಲರನದಾಗಿತ್ತು.

ಫ್ಯಾಸಿಸಂನ ಭೀಕರ ಸ್ವರೂಪದ ಆಳ, ಉದ್ದ, ಅಗಲದ ಕಲ್ಪನೆ ಇದ್ದರೆ, ಮತ್ತು ಫ್ಯಾಸಿಸಂ ಭಾರತವನ್ನು ಆಕ್ರಮಿಸುತ್ತಿತ್ತು ಎಂಬುದನ್ನು ನೆನಸಿಕೊಂಡರೆ ಎರಡನೇ ಮಹಾಯುದ್ಧದ ಸಮಯದಲ್ಲಿ ಫ್ಯಾಸಿಸಂ ವಿರುದ್ಧದ ಶಕ್ತಿಗಳ ಹೋರಾಟಕ್ಕೆ (ಅದರಲ್ಲಿ ಬ್ರಿಟನ್ ಸೇರಿದ್ದರೂ ಕೂಡ) ಮತ್ತು ರಷ್ಯಾದ ಗೆಲುವಿಗೆ ನಾವು ಬೆಂಬಲಿಸಿದವು ಎಂಬುದು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕೊಟ್ಟ ದೊಡ್ಡ ಕೊಡುಗೆ.

ಮಹಾಯುದ್ಧದ ಆರಂಭ ಕಾಲದಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಸೋಲಬೇಕು ಎಂದು ಬಯಸಿದ ಕಾಂಗ್ರೆಸ್ ಜಗತ್ತಿನಲ್ಲಿ ಏನಾದರೇನು, ಫ್ಯಾಸಿಸ್ಟ್ ಶಕ್ತಿಗಳು ಗೆದ್ದರೇನು ಎಂದು ಚಲೇ ಜಾವ್ ಚಳುವಳಿ ಆರಂಭಿಸಿತು. ಜೊತೆಗೆ ಇದೇ ಸಮಯ ನೋಡಿ ಫ್ಯಾಸಿಸ್ಟ್ ವಿರೋಧಿ ನಿಲುವು ತೆಗೆದುಕೊಂಡ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಅಪಪ್ರಚಾರದ ಮಳೆಗರೆಯಿತು. ಜನರನ್ನು ನಮ್ಮ ವಿರುದ್ಧ ಎತ್ತಿ ಕಟ್ಟಿತು. ಜನರಲ್ಲಿ ಕಮ್ಯುನಿಸ್ಟ್ ವಿರೋಧಿ ಭಾವನೆ ಮೂಡಿಸಲು ಅಂದಿನಿಂದ ಇಂದಿನವರೆಗೆ ಅದನ್ನು ಬಳಸಿಕೊಳ್ಳಲಾಗುತ್ತಿದೆ.

ಉದ್ಭವವಾಯಿತು ಹೌದೆ ಪ್ರಸ್ತಾವನೆ? ಹೌದು ಉದ್ಭವವಾಗಿದೆ. ಚುಟುಕು ಪ್ರಶ್ನೆಗೊಂದು ಚುಟುಕು ಉತ್ತರ ನೀಡಿ ಕೇವಲ ಮನರಂಜನೆಯೇ ಗುರಿಯಾದ ಪ್ರಶ್ನೋತ್ತರ ಇದಲ್ಲ ಎಂಬುದು ನಿಮಗೂ ಗೊತ್ತಿದೆ.

ಸ್ವಾತಂತ್ರ್ಯ ಸಮರದ ಮಹಾ ಸೇನಾನಿ

ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್

ಶಾರದ ಕೆ.ಎಸ್

ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇತಾಜಿ ಸುಭಾಸ್‌ಚಂದ್ರಬೋಸ್‌ರ ಇಂಡಿಯನ್ ನ್ಯಾಷನಲ್ ಆರ್ಮಿಯ ಝಾನ್ಸಿರಾಣಿ ರೆಜಿಮೆಂಟಿನ ಕ್ಯಾಪ್ಟನ್ ಆಗಿದ್ದ ಲಕ್ಷ್ಮಿ, ಇಂದೂ ತಮ್ಮ 84ರ ಇಳೀ ವಯದಲ್ಲೂ ನಮ್ಮನ್ನು ನಾಚಿಸುವಂತಹ ಪಾದರಸದಂತಹ ವ್ಯಕ್ತಿತ್ವ. ಈ ವೀರ ವನಿತೆ ಚೈತನ್ಯದ ಚಿಲುಮೆ, ಹೋರಾಟದ ಸಂಕೇತ ಇವರ ಜೀವನ ಚರಿತ್ರೆ ಒಂದು ರೋಮಾಂಚಕ.

ಮನೆಯೊಳಗೇ ಸೀಮಿತವಾಗಿದ್ದ ಮಹಿಳೆಯ ಬದುಕು ಹೊರ ಪ್ರಪಂಚದ ಚಟುವಟಿಕೆಗಳಿಗೂ ತೆರೆದುಕೊಳ್ಳುವಂತಾಗುವಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯ ಪಾತ್ರ ಅತಿ ಹಿರಿದು. ಹೋರಾಟದ ವಿವಿಧ ಸಂದರ್ಭಗಳಲ್ಲಿ ನಾಚಿ ತಲೆ ತಗ್ಗಿಸುವಂತಾಗುತ್ತದೆ.

ಕ್ಯಾಪ್ಟನ್ ಲಕ್ಷ್ಮಿ ಸೆಹಗಾಲ್ ಅಮ್ಮುಕುಟ್ಟಿಯಮ್ಮ ಹಾಗೂ ಸ್ವಾಮಿನಾಥನ್ ಅವರ ಪುತ್ರಿ. ಪ್ರಥಮ ಜಾಗತಿಕ ಯುದ್ಧ ಪ್ರಾರಂಭವಾದಾಗ ಅಂದರೆ 1914 ಅಕ್ಟೋಬರ್ 24 ರಂದು ಜನಿಸಿದರು. ತಾಯಿ ಅಮ್ಮುಕುಟ್ಟಿಯಮ್ಮ ಮೂಲತಃ ಕೇರಳದವರು. ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಮುಖ ಕಾರ್ಯಕರ್ತೆ. ಅಖಿಲ ಭಾರತ ಮಹಿಳಾ ಸಮ್ಮೇಳನದ ಸಂಸ್ಥಾಪಕರಲ್ಲಿ ಒಬ್ಬರು. ಕಲೆ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಮುಖ ವ್ಯಕ್ತಿ. ತಂದೆ ಸ್ವಾಮಿನಾಥನ್ ಮದ್ರಾಸಿನಲ್ಲಿ ವಕೀಲರಾಗಿದ್ದವರು. ಅಂತರ್‌ರಾಷ್ಟ್ರೀಯ ಖ್ಯಾತಿಯ ಭರತ ನಾಟ್ಯ ಕಲಾವಿದೆ ಮೃಣಾಲಿನಿ ಸಾರಾಬಾಯಿ ಇವರ ಸೋದರಿ. ಇವರ ತಂದೆ ಸ್ವಾಮಿನಾಥನ್ ಜಾತಿ ಪದ್ಧತಿ ವಿರುದ್ಧ ಹೋರಾಡಿದ ಪ್ರಗತಿಪರ ವ್ಯಕ್ತಿ. ತಂದೆಯವರ ಪ್ರಗತಿಪರ ಚಿಂತನೆಯಿಂದ ತನ್ನ ಬದುಕು ಪ್ರಭಾವಿತವಾಯಿತು ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಲಕ್ಷ್ಮಿ. ವೃತ್ತಿಯಲ್ಲಿ ವೈದ್ಯೆಯಾದ ಕಾಂ।। ಲಕ್ಷ್ಮಿ ತಮ್ಮ ವೈದ್ಯಕೀಯ ವೃತ್ತಿ ಮುಗಿದ ಬಳಿಕ ಸರ್ಕಾರಿ ಹುದ್ದೆಗೆ ಹೋಗಲು ಬಯಸಲಿಲ್ಲ. ತಮ್ಮ ಸಂಬಂಧಿಕಳೊಬ್ಬಳ ಅನಾರೋಗ್ಯದ ಕಾರಣದಿಂದ ಸಿಂಗಪುರಕ್ಕೆ ಹೋಗಬೇಕಾದ ಅನಿವಾರ್ಯತೆ ಬಂತು. ಸಿಂಗಪುರಿನಲ್ಲಿ ತಮಿಳು ನಾಡಿನ, ಕೇರಳದ ಜನ ಸಾಕಷ್ಟು ಸಂಖ್ಯೆಯಲ್ಲಿ ವಾಸವಾಗಿದ್ದರು. ಇವರ ಸಂಬಂಧಿಗಳನೇಕರು ಅಲ್ಲಿ ವಾಸವಾಗಿದ್ದರು. ಅವರೆಲ್ಲರೂ ಅಲ್ಲೇ ವೈದ್ಯವೃತ್ತಿ ಆರಂಭಿಸಲು ಇವರನ್ನು ಖಿನ್ನವಿಸಿಕೊಂಡರು. ಅಂದಿನಿಂದ ಆರಂಭವಾಯಿತು. ನನ್ನ ವೈದ್ಯವೃತ್ತಿ ಎಂದು ಹೇಳುತ್ತಾರೆ ಕಾಂ.।। ಲಕ್ಷ್ಮಿ ಸೆಹಗಾಲ್.

1939ರಲ್ಲಿ ಎರಡನೇ ಮಹಾಯುದ್ಧ ಆರಂಭವಾಗಿತ್ತು. ಪೂರ್ವ ಏಷಿಯಾದಲ್ಲೇ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಲು ರಾಸ್‌ಬಿಹಾರಿ ಬೋಸ್ ಅವರ ನೇತೃತ್ವದಲ್ಲಿ 1942, ಜೂನ್‌ನಲ್ಲಿ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ (Indian Independence leage) ಎಂಬ ವ್ಯೂಹವೊಂದರ ರಚನೆಯಾಯಿತು.

1943, ಆಗಸ್ಟ್ 3 ರಂದು ನೇತಾಜಿ ಸಿಂಗಪುರ್‌ಗೆ ಆಗಮಿಸಿದರು. ಇದೇ ವೇಳೆಗೆ ಕ್ಯಾಪ್ಟನ್ ಲಕ್ಷ್ಮಿ ಸಿಂಗಪೂರ್‌ನಲ್ಲಿದ್ದರು. ಸುಭಾಸ್ ಕ್ರಾಂತಿಕಾರಿ ಸೇನಾ ಪಡೆಯೊಂದನ್ನು ರಚಿಸಲು ನಿರ್ಧರಿಸಿದರು. ಅದಕ್ಕಾಗಿ 18 ರಿಂದ 25 ವರ್ಷದೊಳಗಿನ ಯುವಕರಿಗೆ ಕರೆ ನೀಡಿದರು. ಅಂತಿಮವಾಗಿ 60,000 ಜನರನ್ನು ಹೊಂದಿದ ಆಜಾದ್ ಹಿಂದ್ ಫೌಜ್ ರೂಪ ತಾಳಿತು. ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಹಾಗೂ ಅಜಾದ್ ಹಿಂದ್ ಫೌಜ್ (INA) ಒಂದಾಗಿ ಅದರ ನಾಯಕತ್ವವನ್ನು ರಾಸ್ ಬಿಹಾರಿ ಬೋಸ್ ನೇತಾಜಿಯವರಿಗೆ ವಹಿಸಿಕೊಟ್ಟರು.

ಮಹಿಳೆಯರ ಸ್ಥಾನಮಾನ ಸುಧಾರಣೆಗಾಗಿ ಮಹಿಳಾ ರೆಜಿಮೆಂಟಿನ ಅಗತ್ಯವನ್ನು ಪ್ರತಿಪಾದಿಸಿದ ಸುಭಾಸ್ ಮಹಿಳೆಯರನ್ನು ಸಂಘಟಿಸುವ ಹೊಣೆ ಹೊರುವ ಮಹಿಳೆಯನ್ನು ಹುಡುಕುತ್ತಿದ್ದರು. ಈ ಸಂದರ್ಭದಲ್ಲಿ ಸುಭಾಸ್‌ರನ್ನು ಬೇಟಿಮಾಡಿದ ಲಕ್ಷ್ಮೀ ಅವರೊಂದಿಗೆ ಐದು ಗಂಟೆಗಳ ಕಾಲ ಚರ್ಚಿಸಿದರು. ಹೋರಾಟದಲ್ಲಿ ಪಾಲ್ಗೊಳ್ಳಲು ಹಾತೊರೆಯುತ್ತಿದ್ದ ಲಕ್ಷ್ಮೀ ಮುಂದಿನ ದಿನಗಳಲ್ಲಿ ಝೂನ್ಸಿ ರೆಜಿಮೆಂಟಿನ ನಾಯಕಿಯ ಹೊಣೆ ಹೊತ್ತರು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ (1857) ಮಹಾನಾಯಕಿಯಾಗಿದ್ದ ಝೂನ್ಸಿ ರಾಣಿ ಹೆಸರಿನಲ್ಲಿ ಒಂದು ಮಹಿಳಾ ಸೈನ್ಯ ಪ್ರಾರಂಭವಾಯಿತು. ಈ ಸೈನ್ಯವನ್ನು ಕಟ್ಟಲು ಕಾಂ।। ಲಕ್ಷ್ಮಿ ಅಹರ್ನಿಶಿ ದುಡಿದರು ಇದರ ಕ್ಯಾಪ್ಟನ್ ಆಗಿ ಪೂರ್ವ ಏಷಿಯಾದಲ್ಲಿ ಮಹಿಳೆಯರ ಸಂಘಟನೆಯ ಜವಾಬ್ದಾರಿಯ ಹೊಣೆ ಹೊತ್ತವರು.

"ಇದು ಬರೀ ಪ್ರಚಾರ ಸೇನೆಯಾಗುವುದು ನನಗಿಷ್ಟವಿಲ್ಲ ಸೇನೆಯ ಪ್ರತಿ ಮಹಿಳೆಯರು ಯೋಧೆಯರಾಗಿ ರಣರಂಗಕ್ಕಿಳಿಯಬೇಕು. ಇದರಿಂದ ಮಹಿಳೆಯರು ಪಡೆಯುವುದು ಬಹಳಷ್ಟಿದೆ ಕೇವಲ ರಾಷ್ಟ್ರದ ಸ್ವಾತಂತ್ರ್ಯವನ್ನು ಮಾತ್ರವಲ್ಲ, ತಮ್ಮದೇ ವಿಮೋಚನೆಯನ್ನು ಮಹಿಳೆಯರು ಪಡೆಯುತ್ತಾರೆ" ಎಂದು ಸುಭಾಷ್ ಭಾವಿಸಿದುದಾಗಿ ಲಕ್ಷ್ಮಿ ಹೇಳುತ್ತಾರೆ.

'ನಿಮ್ಮದೇ ಹಕ್ಕುಗಳಿಗಾಗಿ ನಿಮ್ಮದೇ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಎಂದು ನೇತಾಜಿಯವರು ನೀಡಿದ ಸ್ಫೂರ್ತಿಯ ಕರೆ ಮಹಿಳೆಯರ ಮೇಲೆ ಗಾಢ ಪ್ರಭಾವ ಬೀರಿದವು ಬ್ರಿಟಿಷರ ವಿರುದ್ಧ ಝಾನ್ಸಿ ರೆಜಿಮೆಂಟ್ ನಡೆಸಿದ ಹೋರಾಟ ನೆನಪಿಸಿದರೆ ಎದೆ ಝಲ್ಲೆನಿಸುತ್ತದೆ. ಬ್ರಿಟಿಷರು ನಿರಂತರ ಬಾಂಬುಗಳ ಮಳೆಗೈಯುತ್ತಿದ್ದರು. ಈ ಸಂದರ್ಭದಲ್ಲಿ ಬರ್ಮಾ, ಸಿಂಗಪುರ್‌ನ ದಟ್ಟನೆಯ ಕಾಡುಗಳಲ್ಲಿ ದಿನಗಟ್ಟಲೆ ಅನ್ನ, ನೀರು ಬಿಟ್ಟು ಮಾರಣಾಂತಿಕ ಹೋರಾಟ ಮಾಡಿದ ಧೀರ ಮಹಿಳೆ ಲಕ್ಷ್ಮಿ ಸ್ವಾಮಿನಾಥನ್. ಅನಕ್ಷರಸ್ಥರು ಮನೆಯಿಂದಾಚೆ ಎಂದೂ ಬಾರದಿದ್ದವರು ರಬ್ಬರ್ ತೋಟದಲ್ಲಿ ಕೆಲಸ ಮಾಡುತ್ತಿದ ಕೂಲಿಕಾರ ಮಹಿಳೆಯರು- ಹೀಗೆ ವಿವಿಧ ವರ್ಗಕ್ಕೆ ಸೇರಿದ್ದ 1500 ಜನ ಮಹಿಳೆಯರನ್ನೊಳಗೊಂಡಿತ್ತು. ಝಾನ್ಸಿರಾಣಿ ರೆಜಿಮೆಂಟ್ ಇದರಲ್ಲಿ 300 ಮಂದಿ ಮಾತ್ರ ನರ್ಸಿಂಗ್ ಸೇವೆಗೆ ಸೇರಿದವರಾಗಿದ್ದರು.

ರೆಜಿಮೆಂಟಿನ ಅನೇಕ ಸಂಗಾತಿಗಳು ಬ್ರಿಟಿಷರ ಬಾಂಬಿಗೆ ಬಲಿಯಾದರು. ಬಲಿಯಾದ ಮಹಿಳೆಯರ ಧೀರೋದಾತ್ತ ಹೋರಾಟ ಯಾವ ಪುರುಷ ಸೈನಿಕರ ಹೋರಾಟಕ್ಕೂ ಕಡಿಮೆ ಇರಲಿಲ್ಲ.. ಅವರ ಯುದ್ಧ ಕೌಶಲ್ಯ, ಶಿಸ್ತು ಬ್ರಿಟಿಸ್ ಸೈನ್ಯವನ್ನೇ ಬೆಕ್ಕಸಬೆರಗಾಗಿಸಿತು. ಜಪಾನಿ ಸೈನಿಕರು ಕೊಂಡಾಡಿದರು ಎಂದು ಹೆಮ್ಮೆಯಿಂದ ಹೇಳುತ್ತಾರೆ. ಕ್ಯಾಪ್ಟನ್ ಲಕ್ಷ್ಮಿ.

"ಸೇನೆಯ ಮುಂಚೂಣಿಯಲ್ಲಿ ಕೆಲಸ ಮಾಡಿದ ಅನೇಕ ಮಹಿಳೆಯರನ್ನು ಸ್ವತಂತ್ರ ಭಾರತದಲ್ಲಿ ಪೂರ್ಣ ಕಡೆಗಣಿಸಲಾಯಿತು. ಇವರಿಗೆ ಯಾವುದೇ ಮಾನ್ಯತೆ ದೊರೆಯಲಿಲ್ಲ. ಹಲವರು ಭಾರತಕ್ಕೆ ಹಿಂದಿರುಗಲು ಬಯಸಿದ್ದರು. ಆದರೆ ಅವರಿಗೆ ಭಾರತಕ್ಕೆ ಬರಲು ಅವಕಾಶ ನೀಡಲಿಲ್ಲ. ಸ್ವಾತಂತ್ರ ಹೋರಾಟದ ಪೆನ್‌ಷನ್ ಪಡೆಯಲು ಆರು ತಿಂಗಳು ಜೈಲಿನಲ್ಲಿದ್ದ ಪುರಾವೆ ಒದಗಿಸಬೇಕಾಗಿತ್ತು ಆದರೆ ಅವರ ಬಳಿ ಯಾವ ಅಂತಹ ಪುರಾವೆಗಳು ಇರಲಿಲ್ಲ. ಕಾರಣ ಆ ಮಹಿಳೆಯರಾರು ಜೈಲಿಗೆ ಹೋದವರಲ್ಲ. ಭಾರತಕ್ಕೆ ಹಿಂದಿರುಗಿದ ಅನೇಕ ಮಹಿಳೆಯರ ಬಳಿ ಅಂತಹ ಸರ್ಟಿಫಿಕೇಟ್‌ಗಳಿರಲಿಲ್ಲ.

ದೀರ್ಘ ಹೋರಾಟದ ನಂತರ ಝಾನ್ಸಿರಾಣಿ ರೆಜಿಮೆಂಟಿನ ಸದಸ್ಯರಿಗೆ ಸ್ವಾತಂತ್ರ್ಯ ಹೋರಾಟಗಾರರ ಸರ್ಟಿಫಿಕೇಟ್ ಪಡೆದುಕೊಳ್ಳಲು ಸಾಧ್ಯವಾಯಿತು. ಆದರೆ ಇಷ್ಟರಲ್ಲೇ ಹಲವಾರು ಮಹಿಳೆಯರು ಉಪವಾಸ, ಕಷ್ಟಗಳಿಗೆ ಸಿಲುಕಿ ಸತ್ತಿದ್ದರು" ಎಂದು ಲಕ್ಷ್ಮಿ ವಿಷಾಧಿಸುತ್ತಾರೆ.

ತಾತ್ಕಾಲಿಕ ದೇಶಾಂತರ ಸರ್ಕಾರ ರಚಿಸುವ ಮೂಲಕ ಆಜಾದ್ ಹಿಂದ್ ಫೌಜ್‌ನ ಸ್ವಾತಂತ್ರ ಹೋರಾಟಕ್ಕೆ ಹೊಸ ಸ್ವರೂಪ ನೀಡಲಾಯಿತು. ಸರ್ಕಾರದ ಆದೇಶದ ಅಡಿಯಲ್ಲಿ ಸೇನೆ ಹೋರಾಡಬೇಕು ಎಂಬ ತತ್ವದ ಅನ್ವಯ ರೂಪಿಸಲಾದ ಆಜಾದ್ ಹಿಂದ್ ಸರ್ಕಾರದಲ್ಲಿ ಮಹಿಳಾ ಸಂಪುಟ ಸಚಿವೆ ಇರಬೇಕೆಂದು ಪಟ್ಟು ಹಿಡಿದ ನೇತಾಜಿ ವೈದ್ಯಕೀಯ ಹಾಗೂ ಸಾಮಾಜಿಕ ವ್ಯವಹಾರದ ಖಾತೆಯನ್ನು ಕ್ಯಾಪ್ಟನ್ ಲಕ್ಷ್ಮೀಗೇ ವಹಿಸಿದ್ದರು.


ಬರ್ಮಾದಲ್ಲಿ ವಿಮಾನ ದಾಳಿಗಳ ಸಂದರ್ಭಗಳಲ್ಲೂ ವಿಚಲಿತರಾಗದಂತಹ ಸಾಹಸಿಗಳಾಗಿದ್ದರು ಝಾನ್ಸಿರಾಣಿ ರೆಜಿಮೆಂಟಿನ ಯೋಧೆಯರು. ಬ್ರಿಟಿಷ್ ಮಿಲಿಟರಿಯಿಂದ ಒಮ್ಮೆ ಬಂಧನಕ್ಕೊಳಗಾದ ಕ್ಯಾಪ್ಟನ್ ಲಕ್ಷ್ಮಿ ಅವರನ್ನು ಬರ್ಮಾದ ಉತ್ತರ ಭಾಗದಲ್ಲಿ 8 ತಿಂಗಳುಗಳ ಕಾಲ ಗೃಹ ಬಂಧನದಲ್ಲಿರಿಸಲಾಗಿತ್ತು. ನಂತರ ಭಾರತಕ್ಕೆ ವಿಮಾನದಲ್ಲಿ ಅವರನ್ನು ವಾಪಸ್ಸು ಕರೆತರಲಾಯಿತು.

ಎರಡನೇ ಜಾಗತಿಕ ಯುದ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಜೀವದ ಹಂಗು ತೊರೆದು ಹೋರಾಡಿದ ಕ್ಯಾಪ್ಟನ್ ಲಕ್ಷ್ಮೀ ಸ್ವಾಮಿನಾಥನ್ ಆಕಸ್ಮಿಕವಾಗಿ ಬದುಕುಳಿದರು. 1945 ರಲ್ಲಿ ಭಾರತಕ್ಕೆ ಹಿಂದಿರುಗಿದರು. ಆ ಸಂದರ್ಭದಲ್ಲೇ ನೇತಾಜಿಯವರ ಮಿಲಿಟರಿ ಕಾರ್ಯದರ್ಶಿಗಳಾಗಿದ್ದ ಕ್ಯಾಪ್ಟನ್ ಸೆಹಗಾಲ್ ಅವರನ್ನು ಲಕ್ಷ್ಮೀ ವಿವಾಹವಾದರು. ಅಂದಿನಿಂದ ಇಂದಿನವರೆಗೆ ಲಕ್ಷ್ಮೀ ಸೆಹಗಲ್ ಎಂದೇ ಪ್ರಸಿದ್ಧರಾಗಿದ್ದಾರೆ. ಭಾರತಕ್ಕೆ ಬಂದಮೇಲೆ ಅಪಾರವಾದ ಕಷ್ಟ ನಷ್ಟಗಳ ನಡುವೆಯೂ ತಮ್ಮ ವೈದ್ಯಕೀಯ ವೃತ್ತಿಯನ್ನು ಮುಂದುವರಿಸಿದರು. ಕ್ಯಾಪ್ಟನ್ ಲಕ್ಷ್ಮೀ ಈಗಲೂ ಕಾನ್ಪುರದಲ್ಲಿ ತಮ್ಮದೇ ಆದ ಒಂದು ಕ್ಲಿನಿಕ್ ಅನ್ನು ನಡೆಸುತ್ತಿದ್ದಾರೆ. ಓರ್ವ ಅಸಿಸ್ಟೆಂಟ್ ಅನ್ನು ನೇಮಕ ಮಾಡಿಕೊಂಡಿದ್ದಾರೆ. ಪ್ರತಿದಿನ ಕ್ಲಿನಿಕ್ ನಲ್ಲಿ 5 ಗಂಟೆಗಳ ಕಾಲ ಕೆಲಸ ಮಾಡುವುದಾಗಿ ಹೇಳಿದರು.

ಈ ಇಳಿವಯಸ್ಸಿನಲ್ಲಿಯೇ, ಆಯಾಸವರಿಯದ ಕ್ಯಾ।। ಲಕ್ಷ್ಮೀಯವರ ಚೈತನ್ಯ, ಉತ್ಸಾಹ ಎಂತವರನ್ನು ಬೆರಗುಗೊಳಿಸುತ್ತದೆ. ಸಾಮ್ರಾಜ್ಯಶಾಹಿ ಬ್ರಿಟಿಷರ ವಿರುದ್ಧ ಮಾರಣಾಂತಿಕ ಹೋರಾಟ ನಡೆಸಿದಾಕೆ. ಅವೆಲ್ಲಾ ಯೌವ್ವನದ ದಿನಗಳೆನ್ನಬಹುದು. ಅಂದು ಬ್ರಿಟಿಷರ ವಿರುದ್ಧ ಬಂಧೂಕನೆತ್ತಿ ಹೋರಾಡಿದ ಕೈಗಳು, ಸ್ವಾತಂತ್ರ್ಯ ನಂತರ ಮುಷ್ಟಿಯನ್ನೆತ್ತಿ ದೇಶಿ ಆಳರಸರ ಜನದ್ರೋಹಿ ನೀತಿಗಳ ವಿರುದ್ಧ ಮುಂದುವರಿದ ಹೋರಾಟ ಒಟ್ಟು ಅವರದು ಹೋರಾಟಮಯ ಜೀವನ ಬಹಳಷ್ಟು ಹೋರಾಟಗಳು ಈ ಮಹಿಳೆಯನ್ನು ಚಿರಯೌವ್ವನೆಯಾನ್ನಾಗಿಸುತ್ತವೆ ಎಂದೆನಿಸುತ್ತದೆ.

ಮಹಿಳೆಯರು ಸ್ವಾತಂತ್ರ ಹೋರಾಟದಲ್ಲಿ ವಹಿಸಿದ ಪಾತ್ರಗಳ ಬಗ್ಗೆ ಇತಿಹಾಸದ ಪುಟಗಳು ತೋರಿಸಿರುವ ನಿರ್ಲಕ್ಷತೆ ಬಗ್ಗೆ ಕೆಂಡಕಾರುವ ಕ್ಯಾಪ್ಟನ್ ಲಕ್ಷ್ಮೀಯವರು ಸ್ವತಂತ್ರ ಭಾರತದಲ್ಲಿ ಮಹಿಳೆಯರು ಎದುರಿಸುತ್ತಿರುವ ನೋವು-ಸಂಕಷ್ಟಗಳನ್ನು ತೊಲಗಿಸುವ ನಿಟ್ಟಿನಲ್ಲಿ ಮಹಿಳಾ ವಿಮೋಚನಾ ಹೋರಾಟದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) ಯ ರಾಷ್ಟ್ರ ನಾಯಕಿಯಾಗಿ ಮಹಿಳಾ ಚಳುವಳಿಯನ್ನು ಮುಂದುವರೆಸುತ್ತಿದ್ದಾರೆ. ಸ್ವತಂತ್ರ ಭಾರತದಲ್ಲೂ ಶೋಷಿತರಲ್ಲೂ ಅತ್ಯಂತ ಶೋಷಿತೆ ಮಹಿಳೆ. ಅವಳ ಸ್ಥಾನಮಾನಗಳು ಸಂಸ್ಕೃತಿಯ ಆಕ್ರಮಣಕ್ಕೆ ಬಲಿಯಾಗುವ ಆಕ್ರಮಣಕಾರಿ ಸೂಕ್ಷ್ಮ ಸವಾಲುಗಳು ಮಹಿಳಾ

ಪುಟ 11ಕ್ಕೆ



ಈ ಮಹಿಳೆಯರ ಪಾಲ್ಗೊಳ್ಳುವಿಕೆ ಇಂದಿನ ಆಧುನಿಕ ಮಹಿಳೆಯರ ಸೃಷ್ಟಿಯ ಮೂಲ. ಈ ಹೋರಾಟ ಮಹಿಳೆಯರ ಪ್ರಾತಿನಿಧ್ಯಕ್ಕೊಂದು ಹೊಸ ಆಯಾಮ. ಹೋರಾಟಕ್ಕೆ ನಿಜವಾದ ಅರ್ಥ ತಂದವರು ಕ್ಯಾಪ್ಟನ್ ಲಕ್ಷ್ಮೀ ಎಂದೇ ಪ್ರಸಿದ್ಧಿಯಾಗಿರುವ ಕ್ಯಾಪ್ಟನ್ ಲಕ್ಷ್ಮೀ ಸೆಹಗಾಲ್.

ಈ ವೀರ ವನಿತೆಯ ಜೀವನ ಚರಿತ್ರೆಯನ್ನು ಐಕ್ಯರಂಗ ಓದುಗರೊಂದಿಗೆ ಹಂಚಿಕೊಳ್ಳಲು ನಾನು ಇಚ್ಚಿಸುತ್ತೇನೆ. ಅದಮ್ಯ ಚೇತನ, ಕ್ರಾಂತಿಕಾರಿಣಿ, ಸ್ವಾತಂತ್ರ್ಯ ಸಮರದ ವೀರವನಿತೆ ಕ್ಯಾಪ್ಟನ್ ಲಕ್ಷ್ಮಿ ಸೆಹಗಾಲ್ ಅವರ ಜೊತೆ ವಿರಾಜ ಪೇಟೆಗೆ ಹೋಗಲು ಸಿಕ್ಕ ಅವಕಾಶ ಆಕಸ್ಮಿಕ ಅಷ್ಟೇ ಚಿರಸ್ಮರಣೀಯ. ಬದುಕಿನಲ್ಲೊಮ್ಮೆ ಸ್ವಾತಂತ್ರ್ಯ ಹೋರಾಟದ ವೀರವನಿತೆಯೊಂದಿಗೆ ಒಂದಿಷ್ಟು ಹೊತ್ತು ಕಾಲ ಕಳೆಯುವ ಸುವರ್ಣ ಅವಕಾಶ ಸಿಗಬಹುದು ಎಂದು ನಾನು ಕನಸು ಮನಸ್ಸಿನಲ್ಲೂ ಎಣಿಸಿರಲಿಲ್ಲ. ನಾಲ್ಕನೇ ಬಾರಿ ಅವರನ್ನು ಕಾಣುವ ಸೌಭಾಗ್ಯ ದೊರಕುವುದಲ್ಲ ಎಂದು ಆಶಿಸುತ್ತಿದ್ದ ನನಗೆ ಅವರೊಂದಿಗೆ ನಾಲ್ಕು ದಿನ ಇರುವ ಭಾಗ್ಯ ಸಿಕ್ಕಿದ್ದು ನನ್ನ ಸುದೈವವೇ ಸರಿ.

ಸ್ವಾತಂತ್ರ್ಯ ಹೋರಾಟದ ಆಶಯಗಳು ತನ್ನ ಕಣ್ಣೆದುರೇ ಮಣ್ಣು ಪಾಲಾಗುತ್ತಿರುವುದನ್ನು ದಿನೇ ದಿನೇ ಅನುಭವಿಸುತ್ತಿರುವ ಈ ಇಳೀ ಜೀವದಲ್ಲಿ ಚೈತನ್ಯವೆಂಬುದು ಇನ್ನೂ ಅಡಗಿಲ್ಲ. ಸ್ಫೂರ್ತಿಯ ಚಿಲುಮೆಯಾಗಿರುವ ಈ ಮಣ್ಣಿನ ಮಗಳು ಒಳ್ಳೆಯ ನಾಳೆಗಳ ನಿರೀಕ್ಷೆಯಲ್ಲಿ ಆ ನಾಳೆಗಳಿಗಾಗಿ ತನ್ನ ಪಾಲನ್ನು ನೀಡುತ್ತಾ ಲವಲವಿಕೆಯಿಂದ ಮುನ್ನಡೆಯುತ್ತಿದ್ದಾರೆ.

ವೈದ್ಯರು ವ್ಯಕ್ತಿಗಳ ರೋಗವನ್ನು ಮಾತ್ರವೇ ನಿವಾರಿಸಬಲ್ಲರು, ಸಮಾಜದ ರೋಗವನ್ನಲ್ಲ ಎಂದು ಸ್ಟೆತಾಸ್ಕೋಪ್‌ನ್ನು ಕಿತ್ತು ಬಿಸುಟು ಕಿಂಬಾವುಟವನ್ನು ಹಿಡಿದ ಮಹಾ ಕ್ರಾಂತಿಕಾರಿ, ಚೆಗುವಾರಾನ ಹಾದಿಯಲ್ಲೇ ಹೆಜ್ಜೆಯಿಟ್ಟಿದ್ದಾರೆ ಈ ಧೀರ ಮಹಿಳೆ.

ಸಾಮ್ರಾಜ್ಯಶಾಹಿ ಬ್ರಿಟಿಷರ ವಿರುದ್ಧ ಬರ್ಮಾ, ಸಿಂಗಪುರಗಳಲ್ಲಿ ಬಂದೂಕು ಹಿಡಿದು ಕಾಡುಗಳಲ್ಲಿ ಹೋರಾಟ ನಡೆಸಿದ ಈ ಸಮರ ಸೇನಾನಿ ನಿಮವಾಗಿ ಮನೆಮಂದಿಯೊಂದಿಗೆ ಕಳೆಯುವುದನ್ನು ಬಿಟ್ಟು ಈ ಇಳೀ ವಯಸ್ಸಿನಲ್ಲೂ ಹೋರಾಟದ ಬಾವುಟವನ್ನೆತ್ತಿಕೊಂಡು ದೇಶದ ಎಲ್ಲೆಡೆಯಲ್ಲೂ ಸಂಚರಿಸುವುದನ್ನು ನೋಡಿದರೆ ನಾವು

ಮಹಿಳೆಯರ ಕಣ್ಣೀರ ಕ್ಥೆ

ಮಹಿಳೆ ಜಗತ್ತಿನ ಪ್ರಥಮ ಶೋಷಿತೆ. ಜಗತ್ತಿನ ಎಲ್ಲೆಡೆ ಕಾಲದಿಂದ ಬ್ರಿಟಿಶ್ ಭಾರತದವರೆಗೆ ಆಕೆಯನ್ನು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿ ಬಾರಿಗೆ ವ್ಯಾಪಕವಾಗಿ ಆಕೆ ಸಾಮಾಜಿಕ, ರಾಜ ಹೆಜ್ಜೆಯಾಗಿತ್ತು. ಮಹಿಳೆಯರು ಶೋಷಣೆಯ ವಿರು ಘಟ್ಟವಾಗಿತ್ತು. ಐಎನ್‌ಎಯ ವೀರ ಸೇನಾನಿ ಕ್ಯಾ ರೆಜಿಮೆಂಟು ಅದರಲ್ಲೊಂದು ಉಜ್ವಲ ಅಧ್ಯಾಯ- ಭಾರತದಲ್ಲಿ ಮಹಿಳೆಯರ ವಿಮೋಚನಾ ಚಳುವ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳ ವಿರುದ ಚಳುವಳಿಯಲ್ಲಿ ಮುಂಚೂಣಿಯಲ್ಲಿರುವ ಸತ್ಯಾ ಮ ಈ ಎರಡೂ ಅನುಭವಗಳಲ್ಲಿ ಕಾಣುವಂತೆ 'ಮಹಿಳಾವಾದಿ'ಗಳು ಹೇಳುವಂತೆ ಪುರುಷರು ಮಡುಗಟ್ಟಿರುವ ಪಾಳೆಯಗಾರಿ ಸಿದ್ಧಾಂತ ಮ ಉರುಳಾಗುತ್ತಿರುವುದು ಸಾಮ್ರಾಜ್ಯಶಾಹಿ ಮತ್ತು ಜ ಗ್ರಾಹಕ-ಕೊಳ್ಳುಬಾಕ ಸಂಸ್ಕೃತಿ. ಪಾಳೆಯಗಾರಿ ಉತ್ತೇಜಿಸುವ ಬಂಡವಾಳಶಾಹಿ ಪದ್ಧತಿ ಕಿತ್ತೊ ಪಾಳೆಯಗಾರಿ ಮತ್ತು ಬಂಡವಾಳ ಶಾಹಿ ವಿರುದ್ಧ ತೊಡಗಿಸಿಕೊಳ್ಳುವುದು ಪೂರ್ಣ ವಿಮೋಚನೆಗೆ ಅ

- ಹೊಣೆ ಯಾರು?

ಕೆ ಭಾರತದಲ್ಲೂ ಇದು ನಿಜ. ಮನುಸ್ಮೃತಿಯ ಟ್ಟಿರುವುದು, ಕಟ್ಟುಪಾಡುಗಳ ಸರಮಾಲೆ. ಪಾಲುಗೊಂಡಿದ್ದು, ಭಾರತದಲ್ಲಿ ಮೊದಲ ಜೀವನದಲ್ಲಿ ಭಾಗವಹಿಸಿದ ಮೊದಲ ಹೋರಾಟದಲ್ಲಿ ಇದು ಒಂದು ನಿರ್ಣಾಯಕ ಲಕ್ಷ್ಮಿ ಸೆಹಗಲ್ ನಾಯಕತ್ವದ ಝಾನ್ಸಿರಾಣಿ ರದ ಅದನ್ನು ಪರಿಚಯಿಸಿದ್ದಾರೆ. ಸ್ವತಂತ್ರ ಂದುವರೆದಿದೆ. ಸಮಾಜದಲ್ಲಿ ಮಹಿಳೆಯ ರೋಧ ಚಳುವಳಿ ಮುಖ್ಯ ಅಂಶ. ಈ ಭಾ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಯರನ್ನು ಬಾಧಿಸುತ್ತಿರುವುದು ಕೆಲವು ಲ್ಲ - ಮಹಿಳೆಯರಲ್ಲೂ, ಪುರುಷರಲ್ಲೂ ಂಸ್ಕೃತಿ. ಅದರ ಜತೆ ಈಗ ಮಹಿಳೆಗೆ ಯ ಬೂರ್ಜ್ವಾ ವರ್ಗ ಹರಿಯಬಿಟ್ಟಿರುವ ಮತ್ತು ಗ್ರಾಹಕ-ಕೊಳ್ಳುಬಾಕ ಸಂಸ್ಕೃತಿ ಮಹಿಳೆಯರ ವಿಮೋಚನೆ ಸಾಧ್ಯವಿಲ್ಲ. ಟದಲ್ಲಿ ಮಹಿಳೆಯರು ನಿರ್ಣಾಯಕವಾಗಿ ಜ್ಞ.

ವಿಧಾನ ಸೌಧದಲ್ಲಿ ಪ್ರತಿಧ್ವನಿಸಿದ ಮಹಿಳಾ ದೌರ್ಜನ್ಯದ ಧ್ವನಿ

ಸತ್ಯಾ.ಎಸ್

ಸದಾ ರಾಜಕಾರಣಿಗಳ ಅಧಿಕಾರ ಹೊಯ್ದಾಟದಲ್ಲಿ ತೂಗಾಡುವ ಕಲ್ಲು ಕಟ್ಟಡ ವಿಧಾನ ಸೌಧದಲ್ಲಿ ಇತ್ತೀಚಿಗೆ ನೊಂದ ಒಡಲುಗಳ ಸಂಕಟ, ನಿಟ್ಟುಸಿರು, ಆಕ್ರಂದನ ತುಂಬಿ ಬಂದಿತ್ತು.

ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ತಡೆಗಟ್ಟಲು ಕಾನೂನುಗಳಿಗೆ ಸೂಕ್ತ ತಿದ್ದುಪಡಿ ಸೂಚಿಸುವ ಸಲುವಾಗಿ ಸರ್ಕಾರ ರಚಿಸಿರುವ ಮಹಿಳಾ ದೌರ್ಜನ್ಯ ವಿರೋಧಿ ಜಂಟಿ ಸದನ ಸಮಿತಿಯ ಮುಂದೆ ನೊಂದವರ ದುಃಖ ಕಡಲಾಗಿ ಹರಿದಿತ್ತು.

ಅವಳು ನನ್ನ ಮಗಳಾಗಿದ್ದಳು, ನನ್ನ ತಂಗಿಯಾಗಿದ್ದಳು, ನನ್ನ ಸ್ನೇಹಿತನ ಮಗಳು, ನೆರೆಮನೆಯ ಹುಡುಗಿ, ನನ್ನ ತಂಗಿಯ ಮಗಳು, ಅಣ್ಣನ ಮಗಳು, ನನ್ನದೇ ಅಕ್ಕ ಎನ್ನುವುದರಿಂದ ಹಿಡಿದು ಕೊನೆಗೆ 'ಅದು ನಾನೇ ಆಗಿದ್ದೇನೆ' ಎನ್ನುವವರೆಗೆ ಮಹಿಳೆಯರ ಬದುಕಿನ ನೋವಿಗೆ ಕನ್ನಡಿ ಹಿಡಿಯುವ ನೂರಾರು ಜನ ವಿಧಾನ ಸೌಧದ ಕಲ್ಲುಗಳ ನಡುವೆ ಕಣ್ಣೀರು ಸುರಿಸಿದರು. "ನಮ್ಮ ಮನೆಯ ಹೆಣ್ಣು ಜೀವವೊಂದಕ್ಕೆ ಅನ್ಯಾಯವಾಗಿದೆ. ನ್ಯಾಯ ಕೊಡಿ" ಎಂದು ಕೇಳಲು ಬಂದಿದ್ದ ಜನ, ಬಹುತೇಕ ಎಲ್ಲ ಮಹಿಳೆಯರ ಬದುಕಿನ ಪುಟಗಳೂ ಕರಾಳವಾಗಿರುವುದನ್ನು ಕಂಡು ದಂಗಾಗಿ ಹೋದರು. ಒಬ್ಬೊಬ್ಬರದೇ ಕಥೆ ಬಿಚ್ಚಿಕೊಳ್ಳುತ್ತಾ ಹೋದಂತೆ ಆಧುನಿಕ ಸಮಾಜದ ಹುಸಿ ಪೊರೆ ಕಳಚುತ್ತಾ ಬಿದ್ದಿತು. ಇಂದು ಮನೆಮನೆಯನ್ನೂ ಹೊಕ್ಕಿರುವ ಗ್ರಾಹಕ ಸಂಸ್ಕೃತಿ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಗಳು ಉಂಟುಮಾಡುತ್ತಿರುವ ತಲ್ಲಣಗಳ ದರ್ಶನವಾಯಿತು. ಅತೃಪ್ತ ಮನಸ್ಸುಗಳು, ಅಂಕೆ ಇಲ್ಲದ ದಾಹ ನಡೆಸಿರುವ ತಾಂಡವ ನೃತ್ಯ ಬಯಲಿಗೆ ಬಂತು. ಹಳ್ಳಿಯಿರಲಿ-ನಗರವಿರಲಿ, ಅಕ್ಷರಸ್ಥರಿರಲಿ - ಅನಕ್ಷರಸ್ಥರಿರಲಿ, ಬಡವರಾಗಿರಲಿ- ಶ್ರೀಮಂತರಾಗಿರಲಿ ಎಲ್ಲರದೂ ಒಂದೇ ಬಗೆಯ ಹೀನ ಮಾನಸಿಕ ಸ್ಥಿತಿ-ಬೇಕು, ಬೇಕು, ಬೇಕು.. ಅದು ಬೇಕು, ಇದು ಬೇಕು, ಎಲ್ಲವೂ ಬೇಕು. ಕೊನೆಯಿಲ್ಲದ ಬೇಡಿಕೆಗಳ ಪಟ್ಟಿ. ಪೂರೈಸಲಾಗದ ಈ ಬೇಡಿಕೆಗಳ ಬಾಲಕ್ಕೆ ನೂರಾರು ಮಹಿಳೆಯರ ತೋರಣ.

ಮಹಿಳೆಯರ ಬದುಕಿಗೆ ರಕ್ಷಣೆ ಒದಗಿಸುವ ಸಲುವಾಗಿ ಹಲವಾರು ಕಾಯಿದೆಗಳು ರೂಪಿತವಾಗಿವೆ. ಭ್ರೂಣಾವಸ್ಥೆಯಿಂದ ಹಿಡಿದು ಹೆಣ್ಣು ಸಾಯುವ ಹಂತದವರೆಗೆ ಆಕೆಯ ಹಿತ ರಕ್ಷಣೆಗೆ ಕಾಯಿದೆಗಳಿವೆ. ಹೆಣ್ಣು ಭ್ರೂಣ ಹತ್ಯೆ ನಿಷೇಧ ಕಾಯಿದೆ, ಅತ್ಯಾಚಾರ ನಿಷೇಧ ಕಾಯಿದೆ, ವರದಕ್ಷಿಣೆ ನಿಷೇಧ ಕಾಯಿದೆ, ಆಸ್ತಿಯ ಹಕ್ಕು ರಕ್ಷಣೆ ಕಾಯಿದೆ, ಅಶ್ಲೀಲ ಚಿತ್ರಣ ನಿಷೇಧ ಕಾಯಿದೆ, ಅನೈತಿಕ ಸಂಬಂಧ ನಿಷೇಧ ಕಾಯಿದೆ, ದ್ವಿಪತ್ನಿತ್ವ ನಿಷೇಧ ಕಾಯಿದೆ, ಜೀವನಾಂಶ ಕಾಯಿದೆ, ದುಡಿಯುವ ಮಹಿಳೆಯರ ಹಿತರಕ್ಷಿಸುವ ಕಾನೂನುಗಳು, ಸತಿ ನಿಷೇಧ ಕಾಯಿದೆ ಮುಂತಾದ ಅನೇಕ ಕಾನೂನುಗಳು ಮಹಿಳೆಯರನ್ನು ಪುರುಷರೊಂದಿಗೆ ಸಮಾನರನ್ನಾಗಿ ನಿಲ್ಲಿಸಲು ಯತ್ನಿಸುವ ಸಾಧನಗಳಾಗಿವೆ.

ಆದರೆ, ಇಷ್ಟೆಲ್ಲ ಸಂರಕ್ಷಣಾತ್ಮಕ ಕ್ರಮಗಳಿದ್ದರೂ ಅವುಗಳನ್ನು ಮೀರಿಸುವಷ್ಟು ದೌರ್ಜನ್ಯಗಳು ನಡೆಯುತ್ತಿವೆ. ಈ ದೌರ್ಜನ್ಯಗಳು ದಿನೇ ದಿನೇ ಹೆಚ್ಚುತ್ತಿರುವುದು ಇನ್ನೂ ಆತಂಕಕಾರಿಯಾಗಿದೆ.

ಬೆಂಗಳೂರು ನಗರ ಪೊಲೀಸರ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ನಗರದಲ್ಲಿ ದಾಖಲಾಗಿರುವ ಮಹಿಳಾ ದೌರ್ಜನ್ಯಗಳ ಸಂಖ್ಯೆ 1100. 1999ರಲ್ಲಿ ಕೇವಲ 4 ತಿಂಗಳಲ್ಲಿ ದಾಖಲಾಗಿರುವುದು 400 ಕ್ಕೂ ಹೆಚ್ಚು ಪ್ರಕರಣಗಳು. ಈ ಸಂಖ್ಯೆ 1998ನೇ ಸಾಲಿನಲ್ಲಿ ಇದೇ ಸಮಯದಲ್ಲಿ ದಾಖಲಾಗಿದ್ದಕ್ಕಿಂತಲೂ ಹೆಚ್ಚಾಗಿದೆ.

1996ರಲ್ಲಿ 1301 ಪ್ರಕರಣಗಳು ದಾಖಲಾಗಿದ್ದರೆ 1997 ರಲ್ಲಿ 1403 ಪ್ರಕರಣಗಳೂ, 1998ರಲ್ಲಿ 1442 ಪ್ರಕರಣಗಳೂ ದಾಖಲಾಗಿವೆ. ಇತ್ತೀಚಿನ ವರ್ಷಗಳಲ್ಲಿ ಬೆಂಕಿ ಅಪಘಾತಗಳಿಗೆ ಬಲಿಯಾಗುತ್ತಿರುವ ಮಹಿಳೆಯರ ಸಂಖ್ಯೆಯೂ ಹೆಚ್ಚುತ್ತಿದೆ.

1996-154, 1994-224, 1998-318 ಹಾಗೂ 1999(4 ತಿಂಗಳಲ್ಲಿ) - 163 ಪ್ರಕರಣಗಳು ಇವು ದಾಖಲಾದ ಪ್ರಕರಣಗಳ ಸಂಖ್ಯೆ ಮಾತ್ರ. ದಾಖಲಾಗದೆ ಇರುವ ಪ್ರಕರಣಗಳ ಸಂಖ್ಯೆ ಇದಕ್ಕೂ ಹೆಚ್ಚಿರಬಹುದು ಎಂಬ ಅಂದಾಜಿದೆ.

ಆಧುನಿಕತೆ ಎಂಬುದು ಬೌದ್ಧಿಕ ವಲಯದ ಹೊರಗೇ ಉಳಿದು, ಜೀವನ ಶೈಲಿಯ ಮೇಲೆ ಆಕ್ರಮಣ ಮಾಡಿರುವ ಪರಿಣಾಮ ಈ ದೌರ್ಜನ್ಯಗಳ ಹೆಚ್ಚಳಕ್ಕೆ ಒಂದು ಕಾರಣವಾದರೆ, ಕಾನೂನು- ಕಾಯಿದೆಗಳನ್ನು ಜಾರಿಗೆ ತರಬೇಕಾದ ಸಂಸ್ಥೆಗಳ ನಿರ್ಲಕ್ಷ್ಯ, ಕರ್ತವ್ಯ ಲೋಪ ಮತ್ತು ಸನಾತನ ಮನೋಭಾವ ಮತ್ತೊಂದು ಕಾರಣ. ಕಾಯಿದೆಗಳಲ್ಲಿರಬಹುದಾದ ಲೋಪ-ದೋಷಗಳು ಮತ್ತೂ ಒಂದು ಕಾರಣ. ಈ ಎಲ್ಲಕ್ಕೂ ಮಿಗಿಲಾಗಿ ಒಟ್ಟು ಸಮಾಜ ಮಹಿಳೆಯನ್ನು ಒಬ್ಬ ವ್ಯಕ್ತಿಯಾಗಿ ಪರಿಗಣಿಸದೆ ಭೋಗದ ವಸ್ತುವಾಗಿಯೇ ಗ್ರಹಿಸುವುದು ಪ್ರಮುಖ ಕಾರಣ.

ಜಂಟಿ ಸದನ ಸಮಿತಿ ನಡೆಸಿದ ಎರಡು ದಿನಗಳ (ಮೇ 3 ಮತ್ತು ಮೇ 11) ಸಭೆಯಲ್ಲಿ ಪ್ರತಿಧ್ವನಿಸಿದ್ದು ಈ "ಮೂಲಭೂತ ಮನೋಭಾವದ" ಸಮಸ್ಯೆಯೇ. ನೊಂದ ಜನರನ್ನು ಕರೆತಂದು, ದೃಷ್ಟಾಂತಗಳ ಮೂಲಕ ವ್ಯವಸ್ಥೆಯಲ್ಲಿರುವ ಲೋಪ-ದೋಷಗಳಿಗೆ ಕನ್ನಡಿ ಹಿಡಿದ ಮಹಿಳಾ ಸಂಘಟನೆಗಳು ಪ್ರಧಾನವಾಗಿ ದೂರಿದ್ದು ಪೊಲೀಸ್ ಇಲಾಖೆಯನ್ನು "ಮತ್ತಷ್ಟು, ಇನ್ನಷ್ಟು ಕಾಯಿದೆ ರೂಪಿಸುವುದರಿಂದ ಏನೂ ಪ್ರಯೋಜನವಿಲ್ಲ. ಇರುವ ಕಾನೂನುಗಳು ಸರಿಯಾಗಿ ಜಾರಿಗೆ ಬರಬೇಕು" ಎಂಬುದು ಬಹು ಜನರ ಅಭಿಪ್ರಾಯ.

"ಮಹಿಳೆಯೊಬ್ಬಳು ಪೊಲೀಸರಲ್ಲಿಗೆ ಹೋಗುವುದೆಂದರೆ ಆಕೆಯ ಎಲ್ಲ ಪ್ರಯತ್ನಗಳೂ ವಿಫಲಗೊಂಡು, ಕೊನೆಯ ಯತ್ನವಾಗಿ, ತನ್ನ ಜೀವ ರಕ್ಷಣೆಗಾಗಿ ಹೋಗಿದ್ದಾಳೆ ಎಂದೇ ಅರ್ಥ. ಆದರೆ ಮಹಿಳೆಯರ ಈ ಮನೋಭಾವವನ್ನು ಒಂದಿಷ್ಟೂ ಅರಿತುಕೊಳ್ಳದ ಪೊಲೀಸರು ಮತ್ತಷ್ಟು ಮಗದಷ್ಟು ಹಿಂಸಿಸುತ್ತಾರೆ" ಎನ್ನುವುದು ಪ್ರಧಾನ ದೂರಾಗಿತ್ತು.

"ಬೀದಿಯಲ್ಲಿ ಇಬ್ಬರು ಗಂಡಸರು ಹೊಡೆದಾಡುತ್ತಿದ್ದರೆ ಅಲ್ಲಿಗೆ ಧಾವಿಸಿ, ಹೊಡೆದವನಿಗೆ ಶಿಕ್ಷಿಸುವ ಪೊಲೀಸರು ಮನೆಯಲ್ಲಿ ಹೆಂಡತಿಯರಿಗೆ ನಿತ್ಯ ಹೊಡೆದು, ಕೊಲ್ಲುತ್ತಿರುವ ಗಂಡಸರನ್ನೇಕೆ ಶಿಕ್ಷಿಸುತ್ತಿಲ್ಲ? - ಇದು ನೊಂದವರ ಪ್ರಶ್ನೆ.

"ಪೊಲೀಸರು ರಾಜಿ ಮಾಡಿಸಿ, ಹೆದರಿಸಿ-ಬೆದರಿಸಿ, Counselling ಮಾಡುವುದು ಬೇಕಿಲ್ಲ. ಸಹಬಾಳ್ವೆಯ ಎಲ್ಲ ದಾರಿಗಳೂ ಮುಚ್ಚಿ ಹೋಗಿ ಜೀವದ ರಕ್ಷಣೆಗಾಗಿ ಬರುವ ಮಹಿಳೆಯರಿಗೆ ರಕ್ಷಣೆ ಒದಗಿಸಬೇಕು. ಎಂದು ಆಗ್ರಹಿಸಿದರು. ಇರುವ ಕಾಯಿದೆಗಳು ಸರಿಯಾಗಿ ಜಾರಿಗೆ ಬಂದು , ತಪ್ಪಿತಸ್ಥರಿಗೆ ಶಿಕ್ಷೆಯಾದರೆ ಮತ್ತದೇ ದೌರ್ಜನ್ಯಗಳು ಮರುಕಳಿಸುವುದು ಕಡಿಮೆಯಾಗು ತ್ತದೆ. ವರದಕ್ಷಿಣೆ ಸಾವಿನ ಪ್ರಕರಣಗಳಲ್ಲಂತೂ 'ಸಾಕ್ಷ್ಯಾಧಾರ ಗಳ ಕೊರತೆ' ಎನ್ನುವ ಒಂದೇ ಕಾರಣಕ್ಕೆ ಅಸಂಖ್ಯಾತ ಪ್ರಕರಣಗಳಲ್ಲಿ ತಪ್ಪಿತಸ್ಥರ ಖುಲಾಸೆಯಾಗುತ್ತಿದೆ. ಹಣ ಹಾಗೂ ಶಿಫಾರಸ್ಸುಗಳು ಪ್ರಕರಣಗಳನ್ನು ತಿರುಚಿಹಾಕುತ್ತಿವೆ. ಕಾಯಿದೆಗಳಲ್ಲಿರುವ ಲೋಪ ದೋಷಗಳನ್ನು ಬಳಸಿಕೊಂಡು ಮೊಕದ್ದಮೆ ನಿಲ್ಲದ ಹಾಗೆ ಮಾಡಲಾಗುತ್ತಿದೆ. ನೊಂದ ಮಹಿಳೆಯರನ್ನು ಮತ್ತಷ್ಟು ಜರ್ಜರಿತಗೊಳ್ಳುವಂತೆ ಅವರ 'ನಡತೆ'ಯ ಬಗ್ಗೆಯೇ ಸುಳ್ಳು ಸುದ್ದಿಗಳನ್ನು ಸೃಷ್ಟಿಸಲಾಗುತ್ತಿದೆ. ಇದೊಂದು ವಿಷವರ್ತುಲ. ಹಂತ ಹಂತದಲ್ಲೂ ಚಿಕಿತ್ಸೆಯ ಅಗತ್ಯವಿದೆ.

ನೂತನ ಆರ್ಥಿಕ ನೀತಿ ಜನರ ಅಗತ್ಯಗಳನ್ನೇ ಬದಲಾಯಿಸಿವೆ. ಐಷಾರಾಮದ ವಸ್ತುಗಳೆಲ್ಲ ಅಗತ್ಯಗಳಾಗಿ ಪರಿವರ್ತಿತವಾಗಿವೆ. 'ಈ ಅಗತ್ಯ'ಗಳ ಪಟ್ಟಿಗೆ ತಕ್ಕಂತೆ ಆದಾಯ ಹೊಂದಿಸುವುದು ಅಸಾಧ್ಯವಾಗಿದೆ. ನಿರುದ್ಯೋಗ ಹೆಚ್ಚುತ್ತಿದೆ. ವಿದ್ಯಾಭ್ಯಾಸವೂ ಉಳ್ಳವರ ಪಾಲಾಗುತ್ತಿದೆ. ಮೂಲಭೂತ ಅಗತ್ಯಗಳಾದ ಶಿಕ್ಷಣ, ಆಹಾರ, ವಾಸ್ತವ್ಯ, ಆರೋಗ್ಯ ಸೌಲಭ್ಯಗಳು ವಿಪರೀತ ತುಟ್ಟಿಯಾಗಿವೆ. ವಾಸ್ತವದ ಬದುಕಿಗೂ, ಕನಸಿನ ಬದುಕಿಗೂ ಇರುವ ಕಂದರದಂತಹ ಅಂತರವನ್ನು ಅರ್ಥೈಸಿಕೊಳ್ಳಲಾಗದ, ಅರ್ಥೈಸಿಕೊಂಡರೂ ಅರಗಿಸಿಕೊಳ್ಳಲಾಗದ ಜನ ದೋಚುವ ಪ್ರವೃತ್ತಿಗೆ ಇಳಿದಿದ್ದಾರೆ. ನೂತನ ಆರ್ಥಿಕ ನೀತಿಯ ಪರಿಣಾಮ ನಿಧಾನವಾಗಿ ಮಹಿಳೆಯರನ್ನು ಬಲಿ ತೆಗೆದುಕೊಳ್ಳುತ್ತದೆ. ಎಂದು ಅಂದಿನಿಂದ ಹೇಳುತ್ತಾ ಬಂದಿರುವುದು, ಇಂದು ನಮ್ಮ ಕಣ್ಣೆದುರು ಕಹಿ ಸತ್ಯವಾಗಿ ನಿಂತಿದೆ. ನಗರಗಳಿಗೆ ಸೀಮಿತವಾಗಿದ್ದ ಗ್ರಾಹಕ ಸಂಸ್ಕೃತಿಯ ಸಮಸ್ಯೆಗಳು ದೇಶದ ಉದ್ದಗಲವನ್ನು ವ್ಯಾಪಿಸಿದೆ. ವಿಧಾನ ಸೌಧದಲ್ಲಿ ಪ್ರತಿಧ್ವನಿಸಿದ್ದು ಇದೇ ಪರಿಸ್ಥಿತಿಯೇ.

ದುಃಖದ ಸಂಗತಿಯೆಂದರೆ ನೊಂದವರು ಹೊತ್ತು ಬಂದಿದ್ದ ಆಶಾ ಭಾವನೆಗಳು. ನಮ್ಮ ಆಡಳಿತ ವ್ಯವಸ್ಥೆಯ ಮೂಲಸ್ಥಾನವಾದ ವಿಧಾನಸೌಧದಲ್ಲಿ ಎಲ್ಲ ಬಗೆಹರಿಯುತ್ತದೆ ಎಂದು ಭಾವಿಸಿ ಬಂದಿದ್ದ ಜನರಿಗೆ ಸಮಸ್ಯೆಯ ಮೂಲ ಎಲ್ಲಿದೆ ಎಂಬುದು ತಿಳಿಯದಾಗಿತ್ತು. ಈ ಸಮಿತಿಯ ವ್ಯಾಪ್ತಿ ಸೀಮಿತವಾದದ್ದು. ಕಾಯಿದೆ ಗಳಲ್ಲಿರುವ ಹಾಗೂ ಕಾಯಿದೆಗಳನ್ನು ಜಾರಿಗೆ ತರುವ ಆಡಳಿತ ವ್ಯವಸ್ಥೆಯಲ್ಲಿನ ಕುಂದು-ಕೊರತೆಗಳನ್ನು ಗಮನಿಸಿ, ಸುಧಾರಣೆಗೆ ಅಗತ್ಯವಾದ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡುವುದು ಈ ಸಮಿತಿಯ ಕೆಲಸ. ಕಾಯಿದೆಗಳಿಗೆ ತಿದ್ದುಪಡಿ ಮಾಡುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದಾದರೂ, ಕಾಯಿದೆ ಕಟ್ಟುನಿಟ್ಟಾಗಿ ಜಾರಿಗೆ ತರುವಂತಹ ವ್ಯವಸ್ಥೆ ರೂಪಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ.



ಇಂದಿನ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯ ಸರ್ಕಾರ ತನ್ನ ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದರೂ ಹೆಚ್ಚುತ್ತಿರುವ ದೌರ್ಜನ್ಯಗಳಿಗೆ ಕಡಿವಾಣ ಹಾಕಬಹುದು. ತಪ್ಪಿತಸ್ಥರಿಗೆ ಶಿಕ್ಷೆಯಾದರೆ ಮತ್ತೊಬ್ಬರು ಅದನ್ನೇ ಪುನರಾವರ್ತಿಸಲು ಹಿಂಜರಿಯ ಬಹುದು. ರಾಜ್ಯ ಸರ್ಕಾರ ಇಷ್ಟನ್ನೂ ಮಾಡದೆ ಹೋದರೆ ಅದು ಅದರ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗುತ್ತದೆ.

ದೀಪದ ನೆರಳಿನಲ್ಲಿ.......

ಬೆಂಗಳೂರು ನಗರ ಹತ್ತಾರು ದೊಡ್ಡ ಆಸ್ಪತ್ರೆಗಳಿಂದ, ನೂರಾರೇಕೆ ಸಾವಿರಾರು ಖಾಸಗಿ ನರ್ಸಿಂಗ್ ಹೋಂಗಳಿಂದ ತುಂಬಿ ತುಳುಕುತ್ತಿದೆ. ಆದರೆ ಅದರ ನೆರೆಯಲ್ಲಿ ಕೆಲವೇ ಕಿ.ಮೀ. ದೂರ ಇರುವ ಒಂದು ಹಳ್ಳಿಯಲ್ಲಿ ವಾಸಿಸುವ ಮಹಿಳೆ ಯರಿಗೆ ಅದರ ಅನುಕೂಲ ಲಭ್ಯವಿಲ್ಲ.

ಕನಕಪುರ ತಾಲ್ಲೂಕಿನ ವಡೇರಹಳ್ಳಿ ಎಂಬ ಕುಗ್ರಾಮದಲ್ಲಿ ಒಂದು ದಲಿತ ಕುಟುಂಬದ ಹಿರಿಯಳಾದ ಬೋರಮ್ಮ ಮಗ ಶಿವಯ್ಯ ಕೂಲಿನಾಲಿ ಮಾಡಿ ಕೊಂಡು ಜೀವಿಸುತ್ತಿದ್ದರು. ಬೋರಮ್ಮ ತನಗೆ ವಯಸ್ಸಾಯಿತೆಂದು ಮಗನಿಗೆ ಮದುವೆ ಮಾಡಿದಳು. ಕುಟುಂಬದ ಮೂವರು ಪ್ರತಿ ದಿನ ಭೂಮಾಲಿಕನ ಅಡಿಯಲ್ಲಿ ಕೊಟ್ಟಷ್ಟು ಕೂಲಿ ಪಡೆದು ತಮ್ಮ ಜೀವನ ಸಾಗಿಸುತ್ತಿದ್ದರು. ಕಾಲ ಕ್ರಮೇಣ ಶಿವಯ್ಯನ ಹೆಂಡತಿ ಗರ್ಭಿಣಿ ಯಾಗಿ ಆರು ತಿಂಗಳನಂತರ ಆಗಾಗ ಹೊಟ್ಟೆನೋವ ಕಾಣಿಸತೊಡಗಿತ್ತು, ಶಿವಯ್ಯನ ತಾಯಿ ಸೊಸೆಯನ್ನು ಆಸ್ಪತ್ರೆಗೆ ಕರೆದೊಯ್ಯದೆ ದೇವಸ್ಥಾನಗಳಿಗೆ ಹೋಗುವುದು, ಹರಕೆ ಮಾಡಿಕೊಳ್ಳುವುದು, ಹುಟ್ಟುವ ಮಗುವಿನ ತಲೆ ಮುಡಿ ಕೊಡುತ್ತೇನೆಂದು, ಪೂಜೆ ಪುರಸ್ಕಾರಗಳ ಮೊರೆ ಹೋದಳು. ಶಿವಯ್ಯನ ಹೆಂಡ್ತಿ ಚೊಚ್ಚಲ ಗರ್ಭಿಣಿ ಯಾದ್ದರಿಂದ ಅವಳ ದೇಹ ದೈಹಿಕವಾಗಿ ಆರೋಗ್ಯಕರವಾಗಿರದೇ ಇರುವುದರಿಂದ ಜೊತೆಗೆ ಎಳೆವಯಸ್ಸಿನಲ್ಲೇ ಮದುವೆಯಾದುದರಿಂದ ಈ ಹೊಟ್ಟೆ ನೋವು ಬಂದಿದೆಯೆಂದು ಅನಕ್ಷರಸ್ಥ ಬೋರಮ್ಮನಿಗೆ ಹೇಗೆ ಗೊತ್ತಾಗಬೇಕು? ಆಗಾಗ ಬರುತ್ತಿದ್ದ ಹೊಟ್ಟೆನೋವು ಪ್ರತಿದಿನ ಬರಲಾಗಿ ಹೊಟ್ಟೆಗೆ ಏನೂ ತಿನ್ನದೆ ಸುಸ್ತಾಗಿ ಅಸ್ತವ್ಯಸ್ತಗೊಂಡಳು. ಮಾತಾಡಲಾರದೆ ಉಸಿರು ಕಟ್ಟಿ ಪ್ರಜ್ಞೆ ತಪ್ಪಿದರೂ ಆಸ್ಪತ್ರೆಗೆ ಕರೆದೊಯ್ಯದೆ ಊರ ಮಾರಿಗುಡಿಯ ಪೂಜಾರಿಯ ಹತ್ತಿರ ಹೋದರು. ಪೂಜಾರಿ ದೆವ್ವ ಹಿಡಿದಿದೆಯೆಂದು ಜ್ಞಾನ ತಪ್ಪಿದ ಗರ್ಭಿಣಿಯ ಮೇಲೆ ತಣ್ಣೀರೆರಚಿ ಬೇವಿನ ಸೊಪ್ಪಿನಿಂದ ಮಂತ್ರಹಾಕುತ್ತಾ, ಬಡಿಯುತ್ತಾ ಮಾರಿ ಮೈ ಮೇಲೆ ಬಂದವ ನಂತೆ ನಟಿಸಿ ದೆವ್ವ ಹಿಡಿದಿದೆಯೆಂದು ಗರ್ಭಿಣಿ ಹೊಟ್ಟೆಯ ಮೇಲೆ ತನ್ನ ಕಾಲಿನಿಂದ ಒದೆಯಲಾರಂಭಿಸಿದ. ಮೊದಲೇ ಏಳೆಂಟು ದಿನ ಗಳಿಂದ ಹೊಟ್ಟೆಗಿಲ್ಲದೆ ಸುಸ್ತಾದ ಬರಿ ಉಸಿರಿದ್ದ ದೇಹವಾಗಿದ್ದ ಅವಳು ಒದೆದ ಹೊಡೆತಕ್ಕೆ ಸಿಲುಕಿ ಅಸು ನೀಗಿದಳು. ಕೊನೆಗೆ ಪೂಜಾರಿ ಸಮಯ ಮೀರಿ ಹೋಗಿತ್ತೆಂದು ತಪ್ಪಿಸಿಕೊಂಡನು. ಬೋರಮ್ಮ ಮತ್ತು ಮಗ ಏನು ಅರಿಯದ ಮುಗ್ಧ ಹೆಣ್ಣನ್ನು ಬಲಿಕೊಟ್ಟರು. ಇದು ಕೇವಲ ಮೂಢ ನಂಬಿಕೆಯಿಂದಲೋ? ಅಥವಾ ಈ ಆಸ್ಪತ್ರೆ, ನರ್ಸಿಂಗ್ ಹೋಂಗಳ ದುಬಾರಿ ವೆಚ್ಚವನ್ನು ನೆನೆಸಿಕೊಂಡೆ ಹೆದರಿ ಊರ ಮಾರಮ್ಮನಿಗೆ ಮೊರೆ ಹೋದರೋ? ಇದು ಬಗೆಹರಿಯದ ಪ್ರಶ್ನೆ.

ಅದೊಂದು ತೊರೆಸಾಲು ಅಂದರೆ ಸದಾ ಹರಿಯುವ ಸಣ್ಣ ನದಿ ಪ್ರದೇಶ. ಆ ನದಿಯ ನೀರಿಗೆ ಹತ್ತಾರು ಹಳ್ಳಿಯ ಭೂಮಾಲೀಕರ ರೈತರ ಜಮೀನು ಅವರ ಮಧ್ಯದಲ್ಲೊಂದು ದಲಿತರ ಹಳ್ಳಿ. ಆ ದಲಿತರೆಲ್ಲಾ ಭೂಹೀನರು, ಭೂ ಮಾಲೀಕರ ಅಡಿಯಲ್ಲಿ ಆ ಊರ ಹದಿನೈದು ಇಪತ್ತು ದಲಿತ ಕೂಲಿ ಹೆಂಗಸರು ಸುಮಾರು ನೂರಾರು ಎಕರೆ ಗದ್ದೆಗಳಿಗೆ ನಾಟಿ ಮಾಡುವುದು, ಕಳೆ ಕೀಳುವದು, ಗದ್ದೆ ತುಳಿಯುವುದು, ಬೆಳೆದ ಭತ್ತವನ್ನು ಕುಯ್ಯುವುದು, ಕಣಕ್ಕೆ ತಲೆ ಮೇಲೆ ಹೊರುವುದು ಒಟ್ಟಿನಲ್ಲಿ ಬೀಜ ಬಿತ್ತಿ ಬೆಳೆದ ಭತ್ತವನ್ನು ಸ್ವಚ್ಛ ಮಾಡಿ ಭೂಮಾಲೀಕರ ಕಣಜಕ್ಕೆ ಸೇರಿಸುವ ಜವಬ್ದಾರಿ ಇವರದ್ದಾಗಿರುತ್ತದೆ. ಈ ಕೆಲಸದ ಮಧ್ಯದಲ್ಲಿ ಗರ್ಭಿಣಿಯ ರಾಗಲಿ, ಅನಾರೋಗ್ಯವಾಗಿರಲಿ, ಮಕ್ಕಳಿಗೆ ಹಾಲುಣಿಸುವ ಬಾಣಂತಿಯರಾಗಲಿ ಅಥವಾ ಇನ್ನಾವುದೇ ಅನಾಹುತ ಆಗಿರಲಿ ಈ ಯಾವುದಕ್ಕೂ ವಿರಾಮವಿಲ್ಲದೆ ಭೂ ಮಾಲೀಕರ ಕೆಂಗಣ್ಣುಗಳಿಗೆ, ದರ್ಪಕ್ಕೆ, ಹೆದರಿ ಹೊತ್ತು ಗೊತ್ತು ಎನ್ನದೆ ದುಡಿಯುತ್ತಿದ್ದಾರೆ. ಯಾವುದೋ ಆಪತ್ತಿಗೆ ಎಷ್ಟೋ ದಿನಗಳ ಹಿಂದೆ ಕೊಟ್ಟ ಹಣದ ಬಡ್ಡಿಗೆ, ಇನ್ನಾವುದೇ ಕಾರಣಕ್ಕೆ ಕೂಲಿ ಇಲ್ಲದೇ ದುಡಿಯುವ ಅದೆಷ್ಟೋ ದಲಿತ ಕೂಲಿ ಹೆಂಗಸರು ಮಣ್ಣಿನಲ್ಲಿ ಮಣ್ಣಾಗಿ ಅನ್ನ ಬೆಳೆಯುತ್ತಾರೆ. ಮಾಲೀಕರಿಗೆ ಬೇಡವಾದ ಜೊಳ್ಳು ಭತ್ತವನ್ನು ತಂದು ಮನೆಯಲ್ಲಿ ಕುಟ್ಟಿ ತಿನ್ನುವ ಪ್ರಸಂಗ ಆ ದಲಿತ ಮಹಿಳೆಯರ ಬದುಕಾಗಿದೆ. ಒಟ್ಟಾರೆ ಪ್ರತಿ ವರ್ಷ ಎರಡೆರಡು ಭತ್ತದ ಬೆಳೆಯನ್ನು ಬೆಳೆಯುವ ತಾಯಂದಿರುಗಳಿಗೆ ವಾಸಿಸಲು ಸರಿಯಾಗಿ ಮನೆ ಇಲ್ಲ, ಹೊದಿಯಲು ಬಟ್ಟೆ ಇಲ್ಲ. ತಮ್ಮ ಆಸೆ ಆಕಾಂಕ್ಷೆಗಳಿಗೆ ಅಲ್ಲಿ ಜಾಗವೇ ಇಲ್ಲ.

-[illegible]

ಉ.ಕನ್ನಡದಲ್ಲಿ ಬಲಗೊಂಡ ಮೇ ಬಾವುಟ

ಹೊನ್ನಾವರ: ಉತ್ತರ ಕನ್ನಡದಲ್ಲಿ ಪ್ರತಿವರ್ಷ ಮೇ. 1 ರಂದು ಹಾರಾಡುವ ಬಾವುಟದ ಗೊಂಚಲಿಗೆ ಒಂದೊಂದೇ ಹೊಸ ಬಾವುಟ ಬಂದು ಸೇರಿಕೊಳ್ಳುತ್ತಿದೆ. ವರ್ಷದಿಂದ ವರ್ಷಕ್ಕೆ ಮೆರವಣಿಗೆಯ ಸಾಲು ಉದ್ದವಾಗುತ್ತಿದೆ. ಕೆಂಬಾವುಟ ಹಿಡಿಯುವ ಕೈಗಳು ಮುನ್ನುಗ್ಗುತ್ತಿವೆ. "ಕ್ರಾಂತಿ ಪಥದಲ್ಲಿ ಮುನ್ನಡೆಯುವ ಕಾರ್ಮಿಕ ವರ್ಗ ತನ್ನ ಶಕ್ತಿಯನ್ನು ತಪಾಸಣೆಮಾಡುವ ವಾರ್ಷಿಕ ದಿನ ಇದಾಗಿದೆ" ಎನ್ನುವ ಎಂಗೆಲ್ಸರ ಮಾತಿಗೆ



ಹಿಡಿದ ಕನ್ನಡಿ ಇದು.

ಉತ್ತರ ಕನ್ನಡದ ಮುರ್ಡೇಶ್ವರ ಹೊನ್ನಾವರ, ಅಗಸೂರು, ಶಿರಸಿ ದಾಂಡೇಲಿಗಳಲ್ಲಿ ಮೇ ದಿನ ಹೊಸ ಹುರುಪಿನಿಂದ ನಡೆಯಿತು. ಬಿಸಿಲ ಜಳ ಜೋರಾಗಿದ್ದರೂ ಬಿಜೆಪಿ ನಾಯಕತ್ವದ ಸರ್ಕಾರ ಉದುರಿ ಬಿದ್ದ ತಂಪು ಹೊಸ ಉಲ್ಲಾಸ ತಂದಿತ್ತು. ಪ್ರತಿಯೊಂದು ಕಡೆ 13 ತಿಂಗಳ ಬಿಜೆಪಿ ಸರ್ಕಾರದ ದಿವಾಳಕೋರ ನೀತಿಯನ್ನು ವಿಶ್ಲೇಷಿಸಲಾಯಿತು. ಇದು ದೇಶದ ಸಾರ್ವಭೌಮತೆಗೆ ಸಂಸ್ಕೃತಿಕ ವೈವಿಧ್ಯತೆಗೆ ಹೇಗೆ ಅಪಾಯಕಾರಿ ಎನ್ನುವುದನ್ನು ವಿವರಿಸಲಾಯಿತು.

ಮೇ ದಿನ ಉತ್ತರ ಕನ್ನಡದ ಎಡಪಂಥಿಯ ವೈಚಾರಿಕತೆಯ ಮುನ್ನಡೆಯ ಪ್ರದರ್ಶನದ ದಿನ ಎನ್ನಲು ಯಾವ ಅಳುಕೂ ಇಲ್ಲ. ದಾಂಡೇಲಿಯಲ್ಲಿ ಮತ್ತು ಹಂಚಿನ ಕಾರ್ಖಾನೆಯ ಕಾರ್ಮಿಕರು ಮಾತ್ರ ಪಾಲ್ಗೊಳ್ಳುವ ದಿನವೊಂದಿತ್ತು. ಆದರೆ ಈ ವರ್ಷ ಅನೇಕ ಸಂಘಟನೆಗಳು ಜಿಲ್ಲೆಯಾದ್ಯಂತ ಪಾಲ್ಗೊಂಡವು. ಮುಖ್ಯವಾಗಿ ಅಂಗನವಾಡಿ ನೌಕರರ ಸಂಘಟನೆ ಪಂಚಾಯತ್ ನೌಕರರ ಸಂಘಟನೆ ಗಣ್ಯ ಕೆಮಿಕಲ್ ಕಾರ್ಮಿಕರ ಸಂಘಟನೆ ಡಿ.ವೈ.ಎಫ್.ಐ., ಎಸ್.ಎಫ್.ಐ. ಈ ವರ್ಷ ಉತ್ಸಾಹದಿಂದ ಮೆರವಣಿಗೆಯಲ್ಲಿ, ಸಭೆಯಲ್ಲಿ ಪಾಲ್ಗೊಂಡಿದ್ದವು.

ಹೊನ್ನಾವರದ ಮೆರವಣಿಗೆಯಂತೂ ಸಾವಿರಾರು ಜನರ ಗಮನ ಸೆಳೆಯಿತು. ಆಕರ್ಷಕ ಬೇಂಡ್ ವಾದ್ಯದ ತಂಡ ಮೆರವಣಿಗೆಯ ಮುಂದಿದ್ದರೆ ಕ್ರಮಬದ್ಧವಾಗಿ ಘೋಷಣೆ ಹೇಳುವ ತಂಡ ಹಿಂದೆ ಅವರ ಹಿಂದೆ ಕೆಂಬಾವುಟ ಎತ್ತರಿಸಿ ಹಿಡಿದ ನೂರಾರು ಕಾರ್ಮಿಕರು. ಇದು ಈ ವರ್ಷದ ವಿಶೇಷ ಕೂಡ "ಸೂರ್ಯನನ್ನೇ ಕಾಣದ ಜನ ಹೋರಾಟದ ಮೂಲಕ ಅವನನ್ನು ಕಾಣಲು ಮುಂದಾದ ದಿನ ಇದು" ಎಂದು ಕಾರ್ಮಿಕರ ಹಬ್ಬದ ದಿನ ಅಲ್ಲ ಅವರ ಬೇಡಿಕೆಯನ್ನು ಒತ್ತಾಯಿಸುವ ದಿನ ಇದು" ಎಂದರು ಕಾರ್ಮಿಕ ಮುಖಂಡ ತಿಲಕ ಗೌಡ. ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು, ಮಹಾಲಕ್ಷ್ಮಿ ಪಟಗಾರ, ಯಮುನಾ ಗಾಂವ್ಕರ, ವಿಠ್ಠಲ ಬಂಡಾರಿ, ಅಣ್ಣಪ್ಪ ಮೊದಲಾದವರು ಮಾತನಾಡಿದರು.

ಸಿರ್ಸಿಯಲ್ಲಿ ವಿಮಾ ನೌಕರರ ಸಂಘಧ ನೇತೃತ್ವದ ಸಭೆಯಲ್ಲಿ ಬ್ಯಾಂಕ್, ವಿಮಾ, ಸಾರಿಗೆ ಅಂಗನವಾಡಿ, ಗ್ರಾಮಪಂಚಾಯತ್ ನೌಕರರು, ಎಸ್.ಎಫ್.ಐ, ಡಿ.ವೈ.ಎಫ್.ಐ. ಸದಸ್ಯರುಗಳು ಭಾಗವಹಿಸಿದರು. ಮಾತನಾಡಿದ ಎಲ್ಲರೂ ಸಾಮೂಹಿಕ ಸಂಘಟನೆಗಳ ಸಮನ್ವಯ ಸಮಿತಿಯನ್ನು ಬಲಪಡಿಸುವ ಅಗತ್ಯದ ಕುರಿತು ಚರ್ಚಿಸಿದರು.

ಅಂಕೋಲಾ ತಾಲೂಕಿನ ಅಗಸೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಮೆರವಣಿಗೆ ಮತ್ತು ಸಭೆ ನಡೆಯಿತು. ಹಂಚು ಕಾರ್ಮಿಕರು (ಸಿಐಟಿಯು) ಮತ್ತು ಡಿ.ವೈ.ಎಫ್.ಐ. ನವರು ಸೇರಿ ಸಂಘಟಿಸಿದ ಈ ಸಭೆಯಲ್ಲಿ ಶಾಂತಾರಾಮನಾಯಕ್, ಬೀರಣ್ಣ, ಅನಂತ, ರಮೇಶ್ ಮೊದಲಾದವರು ಭಾಗವಹಿಸಿ ಮಾತನಾಡಿದರು

ಹೊನ್ನಾವರ ತಾಲೂಕಿನ ಮಾಳ್ಕೋಡು ಎಂಬ ಹಳ್ಳಿಯಲ್ಲಿ ಡಿ.ವೈ.ಎಫ್.ಐ. ಸಂಗಾತಿಗಳು ಅರ್ಥಪೂರ್ಣವಾಗಿ ಮೇ ದಿನವನ್ನು ಮೊದಲ ಬಾರಿಗೆ ಆಚರಿಸಿದರು. ಇದರ ಅಂಗವಾಗಿ ಸಾಂಸ್ಕೃತಿಕ ಸ್ಪರ್ಧೆಗಳು ನಡೆದವು. ರೈತರು ಯುವಜನರು, ಮಹಿಳೆಯರು ಮೇ ದಿನದಲ್ಲಿ ಪಾಲ್ಗೊಳ್ಳಬೇಕು ಎಂದು ಎಸ್.ಎಫ್.ಐ.ನ ಕೆ.ಎನ್. ಉಮೇಶ್, ಪಿ.ಎಸ್.ಐ ಶ್ರೀಧರ, ಜನತಾದಳದ ಪಿ.ಜಿ.ಭಟ್ಟ ಡಿ.ವೈ.ಎಫ್.ಐ.ನ ವಿಠ್ಠಲ ಬಂಡಾರಿ, ಸಿ.ಐ.ಟಿ.ಯುವಿನ ತಿಲಕಗೌಡ ಸಭೆಯಲ್ಲಿ ವಿವರಿಸಿದರು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ಕೊಡಲಾಯಿತು. ಜಗದೀಶ್ ದಾವೆ ನಾಗರಾಜ ಮೊದಲಾದವರು ಕಾರ್ಯಕ್ರಮ ಸಂಯೋಜಿಸಿದ್ದರು.

ದಿನಕಳೆದಂತೆ ಚಿಕ್ಕತೊರೆಗೆ ಅಲ್ಲಲ್ಲಿ ಅನೇಕ ಹಳ್ಳಗಳು ಬಂದು ಸೇರಿ ನದಿಯಾಗಿ ನದಿಯ ಪಾತ್ರ ಆಗಲವಾಗುವಂತೆ ಬೊರ್ಗರೆಯುವಂತೆ ಮೇ ದಿನದ ರೂಪ ಜಗತ್ತಿನ ಯಾವುದೋ ಮೂಲೆಯಲ್ಲಿ ಪ್ರಾರಂಭದ ಈ ದಿನ ಇಂದು ಕಾರ್ಮಿಕರಿಗೆ ದುಡಿವ ಜನಕ್ಕೆ ಸ್ವಾಭಿಮಾನದ ದಿನ ಆಗಿದೆ ಇದು ಉ.ಕನ್ನಡದಲ್ಲೂ ಕೂಡ ಸತ್ಯ. ಇನ್ನು ಮುಂದಿನ ದಿನಗಳೂ ಇನ್ನಷ್ಟು ಶಕ್ತಿಯನ್ನು ಗಳಿಸಿ ಕೊಳ್ಳುವಲ್ಲಿ ಪ್ರಯತ್ನ ಸಾಗಬೇಕಾಗಿದೆ.

- ನಿಸರ್ಗ

ಸಾರಿಗೆ ಕಛೇರಿ ಎದುರು ಆಟೋಚಾಲಕರ ಧರಣಿ

ಬೆಂಗಳೂರು ನಗರಕ್ಕೆ ಮತ್ತೆ 15 ಸಾವಿರ ಆಟೋರಿಕ್ಷಾಗಳಿಗೆ ಹೊಸದಾಗಿ ಪರ್ಮಿಟ್ ಕೊಡುವ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ ಸಿ.ಐ.ಟಿ.ಯು.ಗೆ ಸೇರಿದ ಆಟೋರಿಕ್ಷಾ ಚಾಲಕರ ಸಂಘದ ಕಾರ್ಯಕರ್ತರು ಪ್ರಾದೇಶಿಕ ಸಾರಿಗೆ ಕಛೇರಿ ಎದುರು ದರಣಿ ನಡೆಸಿದರು.

ಮೇ 13 ರಂದು ನಡೆದ ಈ ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು ಸರ್ಕಾರದ ನೀತಿಯನ್ನು ಖಂಡಿಸಿ, ಚಾಲಕರ ಬಲವಾದ ವಿರೋಧ ವಿದ್ದಾಗ್ಯೂ ಹೊಸ ಪರ್ಮಿಟ್ ಕೊಡಲು ಸಾರಿಗೆ ಇಲಾಖೆ ಯೋಜಿಸುತ್ತಿದೆ. ಸರ್ಕಾರ ಅಂಥಹ ನಿರ್ಧಾರ ಕೈಗೊಂಡರೆ ಅನಿರ್ಧಿಷ್ಟ ಕಾಲದ ಮುಷ್ಕರಕ್ಕೆ ಚಾಲಕರು ಸಿದ್ದರಾಗಬೇಕೆಂದು ಕರೆ ನೀಡಿದರು.

ಆಟೋಗಳಿಗೆ ಹೊಸ ಪರ್ಮಿಟ್ ನೀಡಬಾರದು. ಬೆಲೆ ಏರಿಕೆಗೆ ಅನುಗುಣವಾಗಿ ಮೀಟರ್ ದರ ಪರಿಷ್ಕರಿಸಬೇಕು. ಕಾನೂನು ಬಾಹಿರವಾಗಿ ಪ್ರಯಾಣಿಕರನ್ನು ಕರೆದೊಯ್ಯುತ್ತಿರುವ ಮ್ಯಾಕ್ಸಿಕ್ಯಾಬ್ ಮತ್ತು ಕಾರ್ಖಾನೆ ಬಸ್ಸುಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಅವಶ್ಯವಿರುವ ಎಲ್ಲಾ ಕಡೆ ಆಟೊ ನಿಲ್ದಾಣಗಳ ವ್ಯವಸ್ಥೆಯಾಗಬೇಕು ಮತ್ತು ಪೊಲೀಸರ ದೌರ್ಜನ್ಯ ನಿಲ್ಲಬೇಕೆಂಬ ಐದು ಪ್ರಮುಖ ಬೇಡಿಕೆಗಳನ್ನಿಟ್ಟು ಸಂಘವು ಕಳೆದ ಏಪ್ರಿಲ್ 20 ರಂದು ಒಂದು ದಿನದ ಯಶಸ್ವಿ ಮುಷ್ಕರ ನಡೆಸಿ ಸರ್ಕಾರಕ್ಕೆ 15 ದಿನಗಳ ಗಡುವು ನೀಡಿತ್ತು. ಇದುವರೆವಿಗೂ ಸಂಬಂಧಪಟ್ಟ ಮಂತ್ರಿ ಅಥವಾ ಅಧಿಕಾರಿಳು ಮಾತುಕತೆಗೆ ಆಹ್ವಾನಿಸಿಲ್ಲ.

ಸರ್ಕಾರವು ಸಂಘದ ಮುಖಂಡರನ್ನು ತಕ್ಷಣ ಮಾತುಕತೆಗೆ ಆಹ್ವಾನಿಸಿ ಚಾಲಕರ ಸಮಸ್ಯೆ ಪರಿಹರಿಸಲು ಮುಂದಾಗ ಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಶ್ರೀನಿವಾಸಮೂರ್ತಿ ಉಪಾಧ್ಯಕ್ಷರಾದ ಎ.ಕೆ. ಕುಪ್ಪುಸ್ವಾಮಿ, ಎ.ಎಸ್.ಟಿ. ಅರಸು, ಖಜಾಂಚಿ ಸಿ.ಸಿದ್ದಯ್ಯ ಈ ಸಂದರ್ಭದಲ್ಲಿ ಮಾತನಾಡಿದರು.

ಮುಳವಾಡ ಏತ ನೀರಾವರಿ ಯೋಜನೆ ಜಾರಿಗಾಗಿ ರೈತರ ಧರಣಿ

ಬಿಜಾಪುರದ ಬಸವನ ಬಾಗೇವಾಡಿ ತಾಲೂಕು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನೂರಾರು ರೈತರು ಮುಳವಾಡ ಏತ ನೀರಾವರಿ ಯೋಜನೆಯನ್ನು ಶೀಘ್ರವೆ ಜಾರಿ ಗೊಳಿಸುವಂತೆ 9 ದಿನಗಳ ಕಾಲ ಧರಣಿ ಸತ್ಯಾಗ್ರಹ ನಡೆಸಿದರು.

ಧರಣಿ ಸತ್ಯಾಗ್ರಹದಲ್ಲಿ ಜಿಲ್ಲಾ ಕಾರ್ಯದರ್ಶಿ ಭೀಮಶಿ ಕಲಾದಗಿ ತಾಲೂಕು ಅಧ್ಯಕ್ಷರಾದ ರಾಮಚಂದ್ರ ರೂಡಗಿ, ಸಾಯಬಣ್ಣ ಹಂದಿಗನೂರು, ಸಬೀಸಾಬ ದವಳಗಿ, ಸುಭಾಸಗೌಡ ಪಾಟೀಲ್ ಚನ್ನ ಬಸವಯ್ಯ ಹಿರೆಮಠ ಮುಂತಾದವರು ಭಾಗವಹಿಸಿದ್ದರು ಸತ್ಯಾಗ್ರಹ ಸ್ಥಳಕ್ಕೆ ಆಗಮಿಸಿದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ವಾಲ್ಮಿ ಕಾರ್ಯನಿರ್ವಾಹಕ ಅಭಿಯಂತರ ಜೋಶಿ ಹಾಗೂ ಚಂದ್ರಶೇಖರ್, ತಹಶೀಲ್ದಾರರು, ಪಿ.ಎಸ್.ಐ. 2000 ರ ದೊಳಗೆ ಯೋಜನೆಯನ್ನು ಪೂರ್ಣಗೊಳಿಸುತ್ತೇವೆಂಬ ಭರವಸೆ ನೀಡಿ ಧರಣಿ ಸತ್ಯಾಗ್ರಹ ನಿಲ್ಲಿಸುವಂತೆ ಮನವಿ ಮಾಡಿದರು.

ಧರಣಿ ನಿಲ್ಲಿಸಿದ ರೈತ ಮುಖಂಡರು ಕೊಟ್ಟ ಭರವಸೆಯಂತೆ ಯೋಜನೆ ಜಾರಿ ಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.



ಕೋಡಿಯಾಗಿ ಹರಿಯುತ್ತಿದೆ ಮಹಿಳೆಯರ ಕಣ್ಣೀರು

ಪುಟ 4 ರಿಂದ

ಯಾರದು?

ಪೌರುಷದ ಹುಸಿಗರ್ವಕ್ಕೆ ದೊಡ್ಡ ಬಳ್ಳಾಪುರ ತಾಲ್ಲೂಕಿನ ಹಳ್ಳಿಯೊಂದರ ಕವಿತ ತೆತ್ತ ಬೆಲೆ ಎಷ್ಟು?

ಕವಿತ ಏಟಿಏ ಕಲಿತ ವಿದ್ಯಾವಂತೆ, ಸೂಕ್ಷ್ಮಮತಿ. ಊರಿನ ಹಿರಿಯರೆಲ್ಲರ ಮೆಚ್ಚುಗೆ ಗಳಿಸಿದ ಹುಡುಗಿ. ಅದೇ ತಾಲ್ಲೂಕಿನ ಮತ್ತೊಂದು ಹಳ್ಳಿಯ ಹಣವಂತರೊಬ್ಬರು ಕವಿತ ಮನೆಹೊಕ್ಕರು. ತಮ್ಮ ಮನೆತನದ ಬಗ್ಗೆ ಜಂಬ ಕೊಚ್ಚಿದ್ದರು. ಒಬ್ಬಳೇ ಸೋದರಿ ಕವಿತಳನ್ನು "ಸುಸಂಸ್ಕೃತ" ರೆಂದು ಪೋಸ್ ನೀಡಿದ ಆ ಮನೆಗೆ ಕೊಡಬೇಕೆಂದು ಆಕೆಯ ಅಣ್ಣಂದಿರು ನಿರ್ಧರಿಸಿದರು. ಮದುವೆ ಅದ್ದೂರಿಯಿಂದ ನಡೆಯಿತು. ಸಾಕಷ್ಟು ಉಪಚಾರ ಗಂಡಿಗೂ ಗಂಡಿನ ಮನೆಯವರಿಗೂ ಸಂದಿತು. (ಒಟ್ಟು ಖರ್ಚು ಎರಡೂವರೆ ಲಕ್ಷ)

ಕವಿತ ಮದುವೆಯ ಮಾರನೆ ದಿನ ಗಂಡನ ಮನೆ ಸೇರಿದಳು ಅಂದು ರಾತ್ರಿ ಗಂಡ ಜಗಳ ತೆಗೆದ ನಿಮ್ಮಪ್ಪ ಜರಿ ರೇಷ್ಮೆ ಪಂಚೆ ಕೊಡಲಿಲ್ಲ ನೀನು ನನಗೆ ಬೇಕಾಗಿಲ್ಲವೆಂದು ಹೊರ ನಡೆದ. ಅಂದು ಆ ಕೋಣೆಯಿಂದ ಹೊರ ನಡೆದವನು ಒಂದು ವರ್ಷಕಾಲ ಆ ಕೋಣೆಗೆ ಒಂದು ದಿನವೂ ಹಿಂದಿರುಗಲಿಲ್ಲ. ಈ ಒಂದು ವರ್ಷಕಾಲ ಕವಿತಳಿಗೆ ಅತ್ತೆಯ ಮನೆ ಕಬ್ಬಿಣದ ಸರುಳುಗಳಂತೆ ಜೈಲಾಗಿತ್ತು. ಆಕೆಯ ತೌರಿನ ಜನ ಬಂದರೆ ಅವಳೇ ಸಿಡಿಮಿಡಿಗೊಂಡು ಅವರನ್ನು ಕೂಡಲೇ ಓಡಿಸುವಂತೆ ಮಾಡುವಲ್ಲಿ ಗಂಡನ ಮನೆಯವರೆಲ್ಲಾರೂ ಯಶಸ್ವಿಯಾಗಿದ್ದರು. ಈ ಅವಧಿಯಲ್ಲಿ ಎರಡು ಲಕ್ಷ ವರದಕ್ಷಿಣೆಯನ್ನು ತರುವಂತೆ ಒತ್ತಾಯಿಸಿ ಅಪಾರ ಕಿರುಕುಳ ನೀಡಲಾಯಿತು.

ಈ ಹಿಂಸೆ ತಾಳಲಾರದೆ ಕವಿತ ತೌರಿಗೆ ವಾಪಸ್ಸಾಗುವಳೆಂದು ಅತ್ತೆ-ಮಾವ ಲೆಕ್ಕ ಹಾಕಿದ್ದರು. ಆದರೆ ಕವಿತ ಒಳ್ಳೆಯ ದಿನಗಳ ನಿರೀಕ್ಷೆಯಲ್ಲಿಯೇ ಒಂದು ವರ್ಷ ತಾಳ್ಮೆಯಿಂದ ಎಲ್ಲವನ್ನು ಸಹಿಸಿಕೊಂಡಳು. ಕೊಲೆ ಬೆದರಿಕೆ ಹಾಕಿದರು. ಆಗಲೂ ಕವಿತ ಮೌನವಾಗಿಯೇ ಇದ್ದಳು.

ಪಾಪ ಮುಗ್ಧ ಕವಿತಾ ಇದನ್ನು ವರದಕ್ಷಿಣೆ ಕಿರುಕುಳವೆಂದೆ ಭಾವಿಸಿ ಸ್ವಲ್ಪ ಸಮಯ ಕಳೆದರೆ ಎಲ್ಲವೂ ಸರಿ ಹೋಗುವುದೆಂದು ಅಂದಾಜು ಮಾಡಿದ್ದಳು. ಹೀಗಾಗಿ ಸಹನಾಶೀಲೆಯಾದಳು.

ಆದರೆ ತನ್ನ ಸೊಕ್ಕಿನ ಮಾವ ತನ್ನ ಮಗನ ದೌರ್ಬಲ್ಯವನ್ನು ಮುಚ್ಚಿಡಲು "ಸಹಜವೆನ್ನುವಂತೆ" ಲಕ್ಷಾಂತರ ಹಣ ಪಡೆದು ವಿವಾಹ ಮಾಡಿಸಿರುತ್ತಾನೆ, ತನ್ನ ಮಗನ "ಷಂಡ" ತನವನ್ನು ಮುಚ್ಚಿಡುವ ಸಲುವಾಗಿ ನನ್ನೊಂದಿಗೆ ವಿವಾಹ ಮಾಡಿಸಿ ವಾಪಸ್ಸು ಅಟ್ಟುವ ತಂತ್ರ ರೂಪಿಸಿದ್ದಾನೆಂದು ತಿಳಿಯಲು ಕವಿತಾಗೆ ಹೆಚ್ಚು ದಿನ ಹಿಡಿಯಲಿಲ್ಲ.

ಚಾಣಾಕ್ಷ ಮಾವ ಕೊನೆಗೆ ಮಗನನ್ನೇ ಬಚ್ಚಿಟ್ಟು ಕಳೆದುಹೋದನೆಂದು ನಾಟಕವಾಡಿದ. ಪೊಲೀಸರು ಅವನ ಹಣದೊಂದಿಗೆ ಶಾಮಿಲಾದರು. ಆಕೆ ಕೊನೆಗೆ ಬೇರೆ ದಾರಿಯಿಲ್ಲದೆ ತೌರಿಗೆ ಹಿಂದಿರುಗಿದ್ದಾಳೆ. "ಪ್ರಜ್ಞಾ" ದ ನೆರವನ್ನು ಪಡೆದು ತನ್ನ ಒಡವೆ-ವಸ್ತುಗಳನ್ನು ವಾಪಸ್ಸು ಪಡೆದಿದ್ದಾಳೆ. ಮುಂದೇನು? ಎನ್ನುವ ಪ್ರಶ್ನೆಯೊಂದಿಗೆ ಮರುಗುತ್ತಿದ್ದಾಳೆ. "ಪೌರುಷದ ಹುಸಿ ಮೌಲ್ಯ"ಗಳು ಇಂತಹ ಎಷ್ಟು ಮಹಿಳೆಯರನ್ನು ವಂಚಿಸುತ್ತಿರಬಹುದು.

ಯಾವ ಕಾರಣಕ್ಕೆ ಬೇಕಾದರೂ ಮಹಿಳೆಯನ್ನು ಬಲಿತೆಗೆದುಕೊಳ್ಳುವುದು ಯಾವ ನ್ಯಾಯ? ಇಂತಹ ಅಕ್ರಮಗಳ ವಿರುದ್ಧ ಮಹಿಳೆಯರನ್ನು ಸಂಘಟಿಸಿ ನಾನೂ ಸಹ ಹೋರಾಡುತ್ತೇನೆಂದು ಕವಿತಾ ನುಡಿಯುತ್ತಾಳೆ. ಮಹಿಳಾ ಸಂಘಟನೆಯ ಕಡೆ ಹೆಜ್ಜೆ ಹಾಕಿದ್ದಾಳೆ.

ಇವುಗಳು ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಕೆಲವು ಉದಾಹರಣೆಗಳಷ್ಟೇ. ಆದರೆ ಇದರಿಂದ ತಿಳಿಯುತ್ತದೆ ಪುರುಷ ಮತ್ತು ಮಹಿಳೆಯ ನಡುವಿನ ಸಂಬಂಧಗಳು ಸಂಕೀರ್ಣಗೊಳ್ಳುತ್ತಿರುವ ಬಗ್ಗೆ.

ಇಂತಹ ಸಂಕಷ್ಟಗಳಿಂದ ಮಹಿಳೆ ಹೊರಬರಬೇಕಾದರೆ ಬಲಿಷ್ಠ ಚಳುವಳಿ ಹಾಗೂ ಹೋರಾಟವೊಂದೆ ಉಳಿದಿರುವ ದಾರಿ ಬಡವರು ಶ್ರೀಮಂತರ ನಡುವಿನ ಅಂತರ ಹೆಚ್ಚಾಗುತ್ತಿರುವ ದಿನಗಳಲ್ಲಿಯೇ ಮಹಿಳೆಯರು ಮತ್ತು ಪುರುಷರ ನಡುವಿನ ಅಂತರವೂ ಹೆಚ್ಚಾಗುತ್ತಿರುವುದು ಈ ಉದಾಹರಣೆಗಳಿಂದಾಗಿ ಸ್ಪಷ್ಟವಾಗುತ್ತದೆ. ಮಹಿಳೆಯರನ್ನು ಸಮಾಜದಿಂದ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ. ಸಾಮಾಜಿಕ ಸಮತೋಲನ ಉಳಿಯಬೇಕಾದರೆ ಮಹಿಳೆಯರನ್ನು ಸಮಾನರೆಂದು ಪರಿಗಣಿಸಲೇಬೇಕಾಗುತ್ತದೆ.

ಎರಡನೆ ದರ್ಜೆಯ ಪ್ರಜೆಯನ್ನಾಗಿ ಗುರುತಿಸುವ ಸ್ಥಾಪಿತ ಮೌಲ್ಯಗಳು ಬದಲಾಗಬೇಕಿದೆ. ಆರೋಗ್ಯಕರ ಸಮಾಜದ ನಿರ್ಮಾಣ ಈ ಸಮಾಜದ ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ.

(ಇಲ್ಲಿ ಪ್ರಸ್ತಾಪಗೊಂಡಿರುವ ಹೆಸರುಗಳು ಬದಲಾಗಿವೆ)

ಎರಡನೇ ಮಹಾಯುದ್ಧಾನಂತರ ಸಾಮ್ರಾಜ್ಯಶಾಹಿಗಳು ಗರಿಗೆದರಿಕೊಳ್ಳುತ್ತಿದ್ದಂತೆ ಅದಕ್ಕೆ ಸವಾಲಾಗಿ ಸಮಾಜವಾದಿ ದೇಶಗಳು ಬೆಳೆಯುತ್ತಿದ್ದಂತೆ, ಮೂರನೇ ಜಗತ್ತಿನಲ್ಲೂ ಅದಕ್ಕೆ ಪ್ರತಿರೋಧ ಬರುತ್ತಿತ್ತು, ಇದು ಹಲವು ದೇಶಗಳಲ್ಲಿ ಬಂದರೂ ಪ್ರತಿ ಅವಧಿಯಲ್ಲಿ ಒಂದು ದೇಶದ ಪ್ರತಿರೋಧ ಸಾಮ್ರಾಜ್ಯಶಾಹಿ-ವಿರೋಧದ ಪ್ರತೀಕವಾಗುತ್ತಿತ್ತು, ೬೦-೭೦ ರ ದಶಕದಲ್ಲಿ ಕ್ಯೂಬಾ, ವಿಯೆಟ್ನಾಂ ಆದರೆ, ೮೦ ರ ದಶಕದಲ್ಲಿ ನಿಕರಾಗುವ ಆಗಿತ್ತು, ಈಗ ೯೦ ರ ದಶಕದಲ್ಲಿ ಈ ಸ್ಥಾನವನ್ನು ಚಿಯಾಪಾಸ್ ಪಡೆದಿದೆ. ಇಂತಹ ಪ್ರತೀಕವಾದ ದೇಶದ ಸಾಮ್ರಾಜ್ಯಶಾಹಿ-ವಿರೋಧಿ ಚಳುವಳಿ ಯಾವಾಗಲೂ ಸಮಾಜವಾದಿ ಧೋರಣೆಯಾಗಿತ್ತು ಎನ್ನುವುದು ಆಕಸ್ಮಿಕವಲ್ಲ. ಇಂತಹ ಚಳುವಳಿಗಳಿಗೆ ಅಂತರ್ರಾಷ್ಟ್ರೀಯವಾಗಿ ಭಾರೀ ಬೆಂಬಲ ದೊರಕಿದ್ದು ಅಲ್ಲದೆ, ಇವುಗಳ ಜತೆ ಸೌಹಾರ್ದತೆ ಅಭಿವೃದ್ಧ ದೇಶಗಳಲ್ಲಿ ಸಮಾಜವಾದಿ ಚಳುವಳಿಯ ಕೇಂದ್ರಬಿಂದುಗಳಾಗಿದ್ದವು. ಸಾಮ್ರಾಜ್ಯಶಾಹಿಗಳ ಎದೆಯಲ್ಲಿ ನಡುಕ ತರುತ್ತಿರುವ ಮೆಕ್ಸಿಕೊದ ಚಿಯಾಪಾಸ್‌ನ ಇಂತಹ ಝಪಾಟಿಸ್ಟಾಗಳ ಬಗ್ಗೆ ಓದಿ

ನಿನ್ನೆ ನಿಕರಾಗುವ, ಇಂದು ಚಿಯಾಪಾಸ್

ಸಾಮ್ರಾಜ್ಯಶಾಹಿಗಳ ಎದೆಯಲ್ಲಿ ನಡುಕ ತರುವ

ಝಪಾಟಿಸ್ಟಾಗಳು

1995 ಜನವರಿ 1, ಹೊಸ ವರ್ಷ ಉದಯವಾಗುವ ದಿನ. ಉತ್ತರ ಅಮೆರಿಕಾದ ಜನತೆಗೆ ಅದೊಂದು ಕರಾಳ ದಿನವಾಗಿತ್ತು. ಅಂದು ನಾಫ್ತಾ (NAFTA - ಉತ್ತರ ಅಮೆರಿಕಾ ಮುಕ್ತ ವ್ಯಾಪಾರ ಪ್ರದೇಶ) ಜಾರಿಗೆ ಬರುವ ದಿನ. ಅದರಲ್ಲೂ ನಾಫ್ತಾಗೆ ಸೇರಿದ ಮೂರು ದೇಶಗಳಲ್ಲಿ ಅತೀ ಬಡ ದೇಶವಾದ ಮೆಕ್ಸಿಕೊ ಜನರಿಗೆ ನಿಜವಾಗಿಯೂ ಕರಾಳ ದಿನ. ಆದರೆ ಎಲ್ಲರಿಗೂ ಅಚ್ಚರಿ ಕಾದಿತ್ತು.

ಸಾನ್ ಕ್ರಿಸ್ಟೊಬಾಲ್ ಎಂಬ ಮೆಕ್ಸಿಕೊದ ದೂರದ ಪಟ್ಟಣ. ಮುನ್ಸಿಪಲ್ ಅಧ್ಯಕ್ಷರ ಬಾಲ್ಕನಿಯಿಂದ ಕಮಾಂಡರ್ ಮಾರ್ಕೊಸ್ ಘೋಷಿಸುತ್ತಿದ್ದಾರೆ. ನಾವು ಮೆಕ್ಸಿಕೊದ ಸರ್ಕಾರಿ ಸೈನ್ಯದ ಮೇಲೆ ಯುದ್ಧ ಘೋಷಿಸಿದ್ದೇವೆ. ಚಿಯಾಪಾಸ್‌ನ ನಾಲ್ಕು ಪಟ್ಟಣಗಳನ್ನು ವಶಪಡಿಸಿಕೊಂಡಿದ್ದೇವೆ. ಮಾರ್ಕೊಸ್ ಜತೆ ಇನ್ನು ಹಲವು ಗೆರಿಲ್ಲಾಗಳಿದ್ದಾರೆ. ಎಲ್ಲಾ ಗೆರಿಲ್ಲಾ ನಾಯಕರಿಗೆ ಸಾಮಾನ್ಯವಾಗಿ ಕಂಡು ಬರುವ ಅಂಶವೆಂದರೆ ಮುಖ ಮುಚ್ಚುವಂತೆ (ಕಣ್ಣು ಬಿಟ್ಟು) ಶಾಲುಗಳನ್ನು ಹೊದ್ದಿದ್ದಾರೆ. ನಾಲ್ಕು ನೂರಕ್ಕೂ ಹೆಚ್ಚು ಗೆರಿಲ್ಲಾ ಪಡೆಗಳನ್ನು ಉದ್ದೇಶಿಸಿ ಈ ಘೋಷಣೆ ಮಾಡುತ್ತಿದ್ದರು.

ನಾಫ್ತಾದ ಜಾರಿ ಆರಂಭ ಅಂದರೆ ಮೆಕ್ಸಿಕೊದ ಆದಿವಾಸಿ ಇಂಡಿಯನ್ನರಿಗೆ ಮರಣದಂಡನೆ ಇದ್ದಂತೆ. ಕೊಲಂಬಸ್ ಬಂದಾಗಿನಿಂದ 500 ವರ್ಷಗಳ ವಸಾಹತುಶಾಹಿ ದಬ್ಬಾಳಿಕೆ, 70 ವರ್ಷಗಳ ಮೆಕ್ಸಿಕೊದ ಬೂರ್ಜ್ವಾ ಭೂಮಾಲಕರ ಸರ್ವಾಧಿಕಾರದಿಂದ ಬಸವಳಿದಿದ್ದೇವೆ. ಸಾಕಪ್ಪ ಸಾಕು ಎಂದು ನಾವು ದಂಗೆ ಎದ್ದಿದ್ದೇವೆ. ನಾವು ಉಪವಾಸ ಸಾಯಲು ತಯಾರಿಲ್ಲ. ಮೆಕ್ಸಿಕೊವನ್ನು ವಿಮೋಚನೆ ಮಾಡಲು ಮೆಕ್ಸಿಕೊದ ಎಲ್ಲ ಜನತೆಗೆ ಕಮಾಂಡರ್ ಮಾರ್ಕೊಸ್ ಮನವಿ ಮಾಡಿಕೊಂಡರು. ಮೆಕ್ಸಿಕೊ ರಾಜಧಾನಿ ಮೆಕ್ಸಿಕೊ ನಗರವನ್ನು ಹಿಡಿಯುವುದು ನಮ್ಮ ಗುರಿ.

ಈತ ಕಮಾಂಡರ್ ಮಾರ್ಕೊಸ್, ಈತನ ಫೋಟೋ ಎಲ್ಲೂ ಲಭ್ಯವಿಲ್ಲ. ಸದಾ ಮುಸುಕಿನೊಳಗೆ ಇರುವವನು - ಸಾರ್ವಜನಿಕವಾಗಿ ಕಾಣಿಸಿಕೊಂಡಾಗಲೆಲ್ಲ, ಈತ ಮೆಕ್ಸಿಕೊದ ಚಿಯಾಪಾಸ್ ಪ್ರಾಂತ್ಯದ 'ಝಪಾಟಿಸ್ಟಾ ರಾಷ್ಟ್ರೀಯ ವಿಮೋಚನಾ ರಂಗ'ದ ನಾಯಕ ಸ್ಪಾನಿಷ್‌ನಲ್ಲಿ ಇದಕ್ಕೆ EZIN ಎನ್ನುತ್ತಾರೆ. ಜನ ಅವರನ್ನು ಝಪಾಟಿಸ್ಟಾಗಳು ಎನ್ನುತ್ತಾರೆ. ಮಿಂಚಿನ ವೇಗದ ಝಪಾಟಿಸ್ಟರ ಈ ದಂಗೆ ಮೆಕ್ಸಿಕೊ ಸರ್ಕಾರ ಮತ್ತು ಅವರ ದೊರೆಗಳಾದ ಅಮೆರಿಕಾದ ಸಾಮ್ರಾಜ್ಯಶಾಹಿಗಳ ಎದೆಯಲ್ಲಿ ನಡುಕ ತಂದಿತ್ತು. ಚಿಯಾಪಾಸ್, ಮೆಕ್ಸಿಕೊ, ಉತ್ತರ ಅಮೆರಿಕ ಯಾಕೆ - ಇಡೀ ಜಗತ್ತಿನ ಸಾಮಾನ್ಯ ಜನತೆಗೆ ರೋಮಾಂಚನ ತಂದಿತ್ತು. ಅಂದಿನಿಂದ ಸಾಮ್ರಾಜ್ಯ-ವಿರೋಧಿ ಜನ-ಪರ ಸಶಸ್ತ್ರ ಹೋರಾಟದ ಪ್ರತಿರೋಧಕ್ಕೆ ಇನ್ನೊಂದು ಹೆಸರು ಚಿಯಾಪಾಸ್ ಮತ್ತು ಝಪಾಟಿಸ್ಟಾ.

ಏನಿದು ಚಿಯಾಪಾಸ್, ಝಪಾಟಿಸ್ಟಾ?

ಮೆಕ್ಸಿಕೊ ಅಮೆರಿಕದ ಸಂಯುಕ್ತ ಸಂಸ್ಥಾನಗಳ(USA) ದಕ್ಷಿಣಕ್ಕಿರುವ ದೇಶ. ಚಿಯಾಪಾಸ್ ಮೆಕ್ಸಿಕೊದ ದಕ್ಷಿಣ-ಪೂರ್ವದಲ್ಲಿರುವ ಪ್ರಾಂತ್ಯ. ಮೆಕ್ಸಿಕೊದ 11 ಪ್ರಾಂತ್ಯಗಳಲ್ಲೊಂದು. ಮೂರುವರೆ ಕೋಟಿ ಜನಸಂಖ್ಯೆ ಇರುವ 75 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಪ್ರದೇಶ. ಮೆಕ್ಸಿಕೊದಲ್ಲಿ ಬಹುಸಂಖ್ಯಾತರೆಂದರೆ ಇಲ್ಲಿನ ಮೂಲ ನಿವಾಸಿಗಳು. ಬಿಳಿಯರಿಗೆ ಅಮೆರಿಕವನ್ನು 'ಶೋಧಿಸಿದ' ಕೊಲಂಬಸ್ ಇವರನ್ನು ಕರೆದದ್ದು ಇಂಡಿಯನ್ನರೆಂದು. ಇವರನ್ನು ಬಿಟ್ಟರೆ ಸ್ಪಾನಿಷ್ ಮತ್ತು ಇಂಡಿಯನ್ನರ ಮಿಶ್ರ ಸಂತತಿಯವರು, ಸ್ಪಾನಿಷ್ ಮೂಲದ ಬಿಳಿಯರು. ಚಿಯಾಪಾಸ್‌ನಲ್ಲೂ ಅಷ್ಟೆ. ಆದರೆ ಇಲ್ಲಿ ಮೂಲ ನಿವಾಸಿಗಳು ಇನ್ನೂ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಝಪಾಟಿಸ್ಟಾಗಳು ತೆಗೆದುಕೊಂಡಿರುವುದು ಶತಮಾನದ ಹಾದಿಯ ಇಂಡಿಯನ್ನರ ಮೂಲ ನಿವಾಸಿಗಳ ಕ್ರಾಂತಿಕಾರಿ ನಾಯಕ ಝಪಾಟಾನ ಹೆಸರನ್ನು. ಝಪಾಟಾ ಮೆಕ್ಸಿಕೊದಲ್ಲಿ 1877 ರಿಂದ 1919 ರವರೆಗೆ ಜೀವಿಸಿದ್ದ ಮೂಲ ನಿವಾಸಿ.



ಇಂಡಿಯನ್ನರಿಗೆ ಹೋರಾಡಿದ್ದ ಕ್ರಾಂತಿಕಾರಿ ನಾಯಕ. ಇಂಡಿಯನ್ನರ ಭೂಮಿ, ಜೀವನೋಪಾಯಗಳನ್ನೆಲ್ಲಾ ಕಸಿದು ಅವರನ್ನು ಗುಲಾಮಗಿರಿಗೆ ಒಳಪಡಿಸಿದರ ವಿರುದ್ಧ ಆತನ ಹೋರಾಟ. ಶತಮಾನದ ಆದಿಯಲ್ಲೇ ಆತನ ಕ್ರಾಂತಿಕಾರಿ ಕರೆ 'ಭೂಮಿ ಮತ್ತು ವಿಮೋಚನೆ'. ಆತ ಶತಮಾನದ ಆದಿಯಲ್ಲಿ ಮೆಕ್ಸಿಕೊದಲ್ಲಿದ್ದ ಡಯಾಜ್ ಸರ್ವಾಧಿಕಾರಿ ವಿರುದ್ಧ ದಂಗೆ ಎದ್ದಿದ್ದ. ಡಯಾಸ್ ಮೂಲ ನಿವಾಸಿ ಇಂಡಿಯನ್ನರ ಭೂಮಿ ಕಸಿದು ದೊಡ್ಡ ಎಸ್ಟೇಟ್ ಮಾಲೀಕರನ್ನು ಬೆಳೆಸುತ್ತಿದ್ದ. ಝಪಾಟಾ ನಾಯಕತ್ವದ ಇಂಡಿಯನ್ ದಂಗೆ ಬೇರೆ ವಿಭಾಗಗಳ ಜತೆ ಈ ಸರ್ವಾಧಿಕಾರಿಯನ್ನು ಉರುಳಿಸಿತ್ತು. ಝಪಾಟಾ ನಾಯಕತ್ವದ ಇಂಡಿಯನ್ನರ ಗೆರಿಲ್ಲಾ ಸೈನ್ಯ ಹಲವು ವರ್ಷಗಳ ಕಾಲ ಇಂಡಿಯನ್ನರ ಭೂಮಿಗಾಗಿ ಹೋರಾಟ ಮಾಡಿತು. ಝಪಾಟಾ ತಯಾರಿಸಿದ 'ಅಯಾಲಾ ಯೋಜನೆ' ಇಂಡಿಯನ್ನರಲ್ಲಿ ಭೂಮಿ ಮರುಹಂಚಿಕೆಯ ಯೋಜನೆಯಾಗಿತ್ತು. ಅದರ ಜಾರಿಗೆ ಆತ ಹೋರಾಡಿದ. 1919 ರಲ್ಲಿ ಆತನನ್ನು ಸರ್ಕಾರಿ ಪಡೆಗಳು ಕೊಲೆ ಮಾಡಿದವು. ಅಂದಿನಿಂದ ಆತನ ವೀರಗಾಥೆ ನೂರಾರು ಜನಪದ ಕಥೆ, ಕವಿತೆಗಳಿಗೆ ಗ್ರಾಸವಾಗಿದೆ. ಆತ ಮೆಕ್ಸಿಕೊ ಇಂಡಿಯನ್ನರ ಜನಪರ ಹೀರೊ.

ಚಿಯಾಪಾಸ್ ಏಕೆ ಹತ್ತಿ ಉರಿಯುತ್ತಿದೆ?

1991 ರಲ್ಲಿ ಇಡೀ ಜಗತ್ತಿನ ಗಮನ ಸೆಳೆದ ಝಪಾಟಿಸ್ಟಾರು ತೆಲಂಗಾಣ ಹೋರಾಟವನ್ನು ನೆನಪಿಗೆ ತರುತ್ತಾರೆ. ಆರುವರೆ ವರ್ಷಗಳಲ್ಲಿ ಮೂಲ ನಿವಾಸಿಗಳಲ್ಲಿ ಭದ್ರ ನೆಲೆ ಹೂಡಿ ಬೆಳೆಯುತ್ತಿದ್ದಾರೆ. ಭೂಸುಧಾರಣೆ, ಸ್ವಯಮಾಡಳಿತ, ಮುಂತಾದ ಸಾಧನೆಗಳನ್ನು ಗೆರಿಲ್ಲಾ ಹೋರಾಟದಲ್ಲಿ ಕಾಪಾಡಿಕೊಂಡಿದ್ದಾರೆ. ಸರ್ಕಾರ ದಮನ ಸವಲತ್ತುಗಳ ಆಮಿಶಗಳಿಂದ ಮೂಲ ನಿವಾಸಿಗಳನ್ನು ಗೆದ್ದುಕೊಳ್ಳುವುದು ಸಾಧ್ಯವಾಗಿಲ್ಲ. ಚಿಯಾಪಾಸ್‌ನ ಝಪಾಟಿಸ್ಟಗಳ ಈ ಹೋರಾಟದ ಹಾದಿ ಎಲ್ಲಾರಿಗೂ ಸ್ಫೂರ್ತಿ ನೀಡುವಂತದ್ದು ಮಾರ್ಗದರ್ಶಿಯಾದಂತದ್ದು. ("ಝಪಾಟಿಸ್ಟರ ಹೋರಾಟದ ಹಾದಿಯಲ್ಲು" ಬಾಕ್ಸ್ ನೋಡಿ)

ಚಿಯಾಪಾಸ್ ಮೆಕ್ಸಿಕೊದ ಮುಖ್ಯ ಆರ್ಥಿಕ ಉತ್ಪನ್ನಗಳಾದ ಕಾಫಿ, ಪೆಟ್ರೋಲಿಯಂ, ವಿದ್ಯುತ್ ಶಕ್ತಿ, ತಂಬಾಕು ಉತ್ಪಾದಿಸುತ್ತಾರೆ. ದೇಶದ ಶೇಖಡ

ಪುಟ 11 ಕ್ಕೆ

ಝಪಾಟಿಸ್ಟಾಗಳ ಹೋರಾಟದ ಹಾದಿಯ ಮೈಲಿಗಲ್ಲುಗಳು....

- **ಜನವರಿ 1994** - ಝಪಾಟಿಸ್ಟಾಗಳು ಮೆಕ್ಸಿಕೊದ ಚಿಯಾಪಾಸ್ ಪ್ರಾಂತ್ಯದ ನಾಲ್ಕು ಪಟ್ಟಣಗಳನ್ನು ವಶಪಡಿಸಿಕೊಳ್ಳುತ್ತಾರೆ. ಮೆಕ್ಸಿಕೊ ಸೈನ್ಯಕ್ಕೂ ಝಪಾಟಿಸ್ಟಾಗಳಿಗೂ ಯುದ್ಧ ನಡೆಯುತ್ತದೆ. ಝಪಾಟಿಸ್ಟ್ ಗಳಿಂದ ಚಿಯಾಪಾಸ್‌ನ ಮಾಜಿ ಗವರ್ನರ್ ಜನರಲ್ ಕ್ಯಾಸ್ಟೆಲಾನೊಸ್ ಬಂದಾಗ ಆತನ ಎಸ್ಟೇಟಿನಿಂದ ಸರ್ಕಾರಿ ಪಡೆಗಳು ಚಿಯಾಪಾಸ್‌ನ ಪಟ್ಟಣಗಳಲ್ಲಿ ಜನವಸತಿ ಇರುವ ಪ್ರದೇಶಗಳ ಮೇಲೂ ಬಾಂಬ್ ದಾಳಿ ಶುರು ಮಾಡುತ್ತಾರೆ. ದೇಶದ ಕೆಲವು ಕಡೆ ರಾಜಧಾನಿಯು ಸೇರಿದಂತೆ ಬಾಂಬ್ ದಾಳಿ, ವಿದ್ಯುತ್ ವಿತರಣಾ ಲೈನ್‌ಗಳ ನಾಶ - ಇತ್ಯಾದಿ ಕೃತ್ಯಗಳು ಝಪಾಟಿಸ್ಟಾಗಳ ಜತೆ ಹೋರಾಟದ ಸೌಹಾರ್ದತೆಯಲ್ಲಿ ಮಾಡಲಾಗಿದೆ ಎಂದು ಕೆಲವು ಎಡ ದುಸ್ಸಾಹಸವಾದಿ ಗುಂಪುಗಳು ಹೇಳಿಕೊಳ್ಳುತ್ತವೆ. ಈ ಗುಂಪುಗಳಿಗೂ ತಮಗೂ ಏನೂ ಸಂಬಂಧವಿಲ್ಲವೆಂದು ಝಪಾಟಿಸ್ಟಾರು ಹೇಳುತ್ತಾರೆ. ಮೆಕ್ಸಿಕನ್ ಶೇರು ಮಾರುಕಟ್ಟೆ ಕುಸಿಯುತ್ತದೆ. ಚಿಯಾಪಾಸ್ ಪ್ರಾಂತ್ಯದ ಗವರ್ನರ್‌ನ್ನು ಅಧ್ಯಕ್ಷರು ವಜಾ ಮಾಡುತ್ತಾರೆ. ಝಪಾಟಿಸ್ಟಾಗಳು, ಜನರ ಮೇಲೆ ಸರ್ಕಾರಿ ಪಡೆಗಳ ದಮನ ಚಕ್ರ ಪ್ರತಿಭಟಿಸಿ ಮೆಕ್ಸಿಕೋ ನಗರದಲ್ಲಿ ಭಾರಿ ಪ್ರದರ್ಶನ. 12 ದಿನಗಳ ತೀವ್ರ ಹೋರಾಟದ ನಂತರ ಸರ್ಕಾರದಿಂದ ಕದನ ವಿರಾಮ ಘೋಷಣೆ. ಬಿಷಪ್ ರುಮೆರ್‌ಝು ಮಧ್ಯಸ್ಥಿಕೆಯಲ್ಲಿ ಶಾಂತಿ ಮಾತುಕತೆಗಳು.
- **ಫೆಬ್ರವರಿ 94 :** ಮಾನವ ಹಕ್ಕುಗಳ ಗುಂಪುಗಳ ತನಿಖೆಯಿಂದ ಸಾಮೂಹಿಕ ಕೊಲೆಯ ಬಗ್ಗೆ ಪತ್ತೆ, ಸರ್ಕಾರದ ಮೇಲೆ ನರಮೇಧದ ತೀವ್ರ ಆಪಾದನೆ. ಝಪಾಟಿಸ್ಟಾಗಳ ಹೋರಾಟದ ಹೊಸ ಮಜಲು ಆರಂಭ. ಚಿಯಾಪಾಸ್ ಪ್ರಾಂತ್ಯದ ತುಂಬಾ ಭೂಹೀನ ಆದಿವಾಸಿಗಳಿಂದ ಭೂ ಆಕ್ರಮಣ. ಭೂಮಿ ಧಾರಣೆಗೆ ಭಾರಿ ರ್‍ಯಾಲಿ, ಮೆರವಣಿಗೆಗಳು. ಝಪಾಟಿಸ್ಟಾ - ಸರ್ಕಾರಗಳ ನಡುವೆ ಬಿಷಪ್ ರುಮೆರ್‌ಝು ಮಧ್ಯಸ್ಥಿಕೆಯಲ್ಲಿ ಮಾತುಕತೆ ಆರಂಭ. ಸರ್ಕಾರದಿಂದ ಭೂಸುಧಾರಣೆ, ಸ್ಥಳೀಯ ಸರ್ಕಾರ, ಆದಿವಾಸಿಗಳ ಪರಿಸ್ಥಿತಿಯ ಸುಧಾರಣೆಗೆ ಸಲಹೆಗಳು. ಸಲಹೆಗಳ ಬಗ್ಗೆ ಜನರ ಅಭಿಪ್ರಾಯ ಸಂಗ್ರಹಿಸಲು ಯತ್ನ.

ಮಾರ್ಚ್ 94, ಆದಿವಾಸಿಗಳ ಸಾಮೂಹಿಕ ಸಂಘಟನೆ CEOIC ರಚನೆ. ಅದರ ನಾಯಕರುಗಳ ಕೊಲೆ. CEOICಯಿಂದ ಝಪಾಟಿಸ್ಟಾ ಪರ ಭಾರಿ ರ್‍ಯಾಲಿ. ಆಳುವ ಪಕ್ಷ PRI ಅಧ್ಯಕ್ಷೀಯ ಅಭ್ಯರ್ಥಿಯ ಕೊಲೆ. ಆ ನೆಪ ಬಳಸಿ ಝಪಾಟಿಸ್ಟಾ ಹತೋಟಿಯ ಪ್ರದೇಶಗಳ ಮೇಲೆ ಬಾಂಬ್, ಶೇರು ಮಾರುಕಟ್ಟೆ ಕುಸಿತ ಪುನ:

- **ಜೂನ್ 94,** ಸರ್ಕಾರದ ಸಲಹೆಗಳ ತಿರಸ್ಕಾರ - ಝಪಾಟಿಸ್ಟಾಗಳು ಆದಿವಾಸಿಗಳ ನಡುವೆ ನಡೆಸಿದ ಅಭಿಪ್ರಾಯ ಸಂಗ್ರಹಣೆಯ ಆಧಾರದ ಮೇಲೆ.
- **ಡಿಸೆಂಬರ್ 94-ಫೆಬ್ರವರಿ 95** , ನಾಫ್ತಾದ ಪರಿಣಾಮವಾಗಿ ಮೆಕ್ಸಿಕೊದ ಪೆಸೊ ಮತ್ತು ಆರ್ಥಿಕ ಕುಸಿತ. ಅಮೆರಿಕನ್ ಬ್ಯಾಂಕುಗಳಿಂದ ಝಪಾಟಿಸ್ಟಾಗಳನ್ನು ನಾಶ ಮಾಡದೆ ಅಮೆರಿಕನ್ ಬಂಡವಾಳಕ್ಕೆ ಮೆಕ್ಸಿಕೊದಲ್ಲಿ ಭದ್ರತೆ ಇಲ್ಲ ಎಂಬ ವರದಿ. ಮೆಕ್ಸಿಕೊ ಸರ್ಕಾರದಿಂದ ಝಪಾಟಿಸ್ಟಾಗಳ ಮೇಲೆ ಪೂರ್ಣ ಪ್ರಮಾಣದ ದಾಳಿ -ಬ್ಯಾಂಕುಗಳ ಆದೇಶದಂತೆಯೊ ಎಂಬಂತೆ.

1995-96 - ಚಿಯಾಪಾಸ್ ಪ್ರಾಂತ್ಯದ ತುಂಬಾ ಹಲವು ಹಳ್ಳಿಗಳು, ಪಟ್ಟಣಗಳಲ್ಲಿ ಝಪಾಟಿಸ್ಟಾ ನೆರವಿನಿಂದ ಸ್ವಯಮಾಡಳಿತ. ವಿಮೋಚನೆಗೊಂಡ ಪ್ರದೇಶಗಳಂತೆ ಅಲ್ಲಿ ಝಪಾಟಿಸ್ಟಾ ಆಡಳಿತ. ಈ ಪ್ರದೇಶಗಳ ಹತೋಟಿಗೆ ಸರ್ಕಾರದ ಸೈನ್ಯದ ಜತೆ ಆಗಾಗ ಘರ್ಷಣೆಗಳು. ಸರ್ಕಾರದ ಸೈನ್ಯಗಳಿಂದ ಬತ್ತಳಿಕೆಯಲ್ಲಿರುವ ದಬ್ಬಾಳಿಕೆಗಳ ಪ್ರಯೋಗ - ಫೆಬ್ರವರಿ 96 ರಲ್ಲಿ ಭೂಸುಧಾರಣೆ, ಆದಿವಾಸಿಗಳ ಹಕ್ಕು ರಕ್ಷಣೆ, ಸ್ವಯಮಾಡಳಿತ ಮುಂತಾದ ಅಂಶಗಳನ್ನೊಳಗೊಂಡ ಶಾಂತಿ ಒಪ್ಪಂದ. ಶಾಂತಿ ಒಪ್ಪಂದದ ಪ್ರಾಮಾಣಿಕ ಜಾರಿ ಬರಲು ಕದನ ವಿರಾಮದ ಆಗಾಗ ಉಲ್ಲಂಘನೆ ಸರ್ಕಾರಿ ಪಡೆಗಳಿಂದ ವರ್ಷದ ಕೊನೆ ಹೊತ್ತಿಗೆ ಶಾಂತಿ ಒಪ್ಪಂದ ಬಿದ್ದು ಹೋಗಿರುತ್ತದೆ.

1997-98 - ಆಕ್ರಮಿತ ಭೂಮಿ, ವಿಮೋಚನ ಹಳ್ಳಿ - ಪಟ್ಟಣಗಳ ಸ್ವಯಮಾಡಳಿತಗಳನ್ನು ಕಾಪಾಡಿಕೊಳ್ಳಲು ಸರ್ಕಾರಿ ಸೈನ್ಯದೊಂದಿಗೆ ಝಪಾಟಿಸ್ಟಾಗಳ ಗೆರಿಲ್ಲಾ ಘರ್ಷಣೆ ಮುಂದುವರಿಕೆ. ಪುನಃ ಝಪಾಟಿಸ್ಟಾಗಳು ಶಾಂತಿ ಮಾತುಕತೆಗೆ ಬರುವಂತೆ ಮಾಡಲು ಸರ್ಕಾರದಿಂದ ಮಿಲಿಟರಿ ಒತ್ತಡದ ಬಳಕೆ. ಪ್ರಾಂತ್ಯದ ತುಂಬಾ ಆಳುವ ಪಕ್ಷ PRI ಬೆಂಬಲಿಗರಿಂದ ಗೂಂಡಾಪಡೆಗಳ ರಚನೆ - ಝಪಾಟಿಸ್ಟಾಗಳ ಜತೆ ಘರ್ಷಣೆ. ಕ್ರಿಸ್‌ಮಸ್ ದಿನ ಝಪಾಟಿಸ್ಟಾ ಹಳ್ಳಿಯೊಂದರಲ್ಲಿ 45 ಆದಿವಾಸಿ ಇಂಡಿಯನ್ನರ ನರಮೇಧ. ವ್ಯಾಪಕ ಖಂಡನೆ. ಅಮೆರಿಕದಲ್ಲಿ ವಿಶೇಷವಾಗಿ ಗೆರಿಲ್ಲಾ-ವಿರೋಧಿ ಕಾರ್ಯಾಚರಣೆಯಲ್ಲಿ ತರಬೇತಿ ಆದ ಮೆಕ್ಸಿಕೊ ಪಡೆಗಳಿಂದ ವ್ಯಾಪಕವಾಗಿ ಮಾನವ ಹಕ್ಕುಗಳ ದಮನ.

ಕೇಂದ್ರ ಸರ್ಕಾರದ ಅಸಭ್ಯವರ್ತನೆ
ಪಶ್ಚಿಮ ಬಂಗಾಳದ ಗೌವರ್ನರ್ ವಜಾ

ಪಶ್ಚಿಮ ಬಂಗಾಳದ ಗವರ್ನರ್ ಡಾ|| ಎ.ಆರ್. ಕಿದ್ವಾಯಿಯವರನ್ನು ಕೇಂದ್ರ ಸರ್ಕಾರ ವಜಾ ಮಾಡಿದ್ದು ಪ್ರಜಾತಂತ್ರದ ನೀತಿಗಳ ತೀವ್ರ ಉಲ್ಲಂಘನೆ ಮಾತ್ರವಲ್ಲ, ಈ ಸರ್ಕಾರಕ್ಕೆ ಸಭ್ಯತೆಯ ವರ್ತನೆಯೂ ಗೊತ್ತಿಲ್ಲ ಎಂದು ಇನ್ನೊಮ್ಮೆ ರುಜುವಾತು ಮಾಡಿದೆ. ಕೇಂದ್ರ ಸರ್ಕಾರದ ಈ ಕ್ರಮಕ್ಕೆ ಪಶ್ಚಿಮ ಬಂಗಾಳದಲ್ಲಿ ಮತ್ತು ದೇಶದ ಇತರೆಡೆ ಬಂದ ಕೋಪದ ಪ್ರತಿಕ್ರಿಯೆ ಪ್ರತಿಭಟನೆಗಳಿಂದ ಹಿಂಜರಿದ ಕೇಂದ್ರ ಸರ್ಕಾರ ಇನ್ನೂ 5-6 ಗವರ್ನರುಗಳನ್ನು ಬದಲಾಯಿಸಿ ಸಂಘ ಪರಿವಾರದ ಭಟ್ಟಂಗಿಗಳನ್ನು ಹಲವು ರಾಜ್ಯಗಳಲ್ಲಿ ಚುನಾವಣೆ ಮೊದಲು ಗವರ್ನರುಗಳಾಗಿ ಕೂಡಿಸುವ ತಾತ್ಕಾಲಿಕ ಸರ್ಕಾರದ ಹುನ್ನಾರಕ್ಕೆ ತಡೆಯೊಡ್ಡಿದೆ. ಪಶ್ಚಿಮ ಬಂಗಾಳದಲ್ಲೂ ರಾಜ್ಯದ ಮುಖ್ಯ ನ್ಯಾಯಾಧೀಶರನ್ನು ತಾತ್ಕಾಲಿಕ ಗವರ್ನರ್ ಆಗಿ ನೇಮಕ ಮಾಡಲಾಗಿದೆ. ಆದರೂ ಈ ಅಸಭ್ಯ ಸರ್ಕಾರ ಪುನಃ ಚುನವಣೆ ಮೊದಲು ಇನ್ನೊಂದು ಪ್ರಯತ್ನ ಮಾಡುವುದಿಲ್ಲ ಎನ್ನುವಂತಿಲ್ಲ.

ಡಾರ್ಜಿಲಿಂಗ್‌ನಲ್ಲಿ ರಜದ ಮೇಲೆ ಹೋಗಿದ್ದ ಗವರ್ನರ್‌ಗೆ ಕೇಂದ್ರ ಸರ್ಕಾರದ ಯಾವನೋ ಕಾರ್ಯದರ್ಶಿ ಫೋನ್ ಮಾಡಿ ರಾಜೀನಾಮೆ ಕೊಡಬೇಕು ಎಂದು ಕೇಳಿದ್ದು ಬಿಜೆಪಿಯ ಕೀಳು ಮಟ್ಟದಲ್ಲೂ ಅಸಭ್ಯತೆಯ ಪರಮಾವಧಿ. ರಾಜ್ಯದ ಮುಖ್ಯ ಮಂತ್ರಿಗೂ ಈ ಬಗ್ಗೆ ಸುದ್ದಿ ಗೊತ್ತಿರಲಿಲ್ಲ. ಆ ದಿನವೇ ಲಂಡನ್‌ಗೆ ಹೊರಟಿದ್ದ ಮುಖ್ಯಮಂತ್ರಿ ಜ್ಯೋತಿ ಬಸು ಇದನ್ನು ತೀವ್ರವಾಗಿ ಖಂಡಿಸಿ ಬಿಜೆಪಿ ಸರ್ಕಾರ ಪುನಃ ಅಧಿಕಾರಕ್ಕೆ ಬಂದರೆ ಪ್ರಜಾತಂತ್ರಕ್ಕೆ ಆಗುವ ಗತಿಯ ಮುನ್ಸೂಚನೆ ಎಂದಿದ್ದಾರೆ. ಡಾ|| ಎ.ಆರ್. ಕಿದ್ವಾಯಿ ಬಿಜೆಪಿಯಂತಲ್ಲದೆ 'ಜಂಟಲ್‌ಮನ್' ಆದ್ದರಿಂದ ತತಕ್ಷಣವೇ ರಾಜೀನಾಮೆ ಕೊಟ್ಟಿದ್ದಾರೆ. ಹಲವು ತಿಂಗಳುಗಳ ಹಿಂದೆ ಅವರ ಅವಧಿ ಮುಗಿದಿತ್ತು ಎಂದು ಅಡ್ವಾಣಿ ಹೇಳಿದ ನೆಪಕ್ಕೆ ರಾಜ್ಯ ಸರ್ಕಾರ ಉತ್ತರಿಸುತ್ತಾ ಅದಾಗ್ಯೂ ಆಗಲೇ ಈ ನಿರ್ಧಾರ ರಾಜ್ಯ ಸರ್ಕಾರದ ಜತೆ ಮಾತುಕತೆ ನಡೆಸಿ ತೆಗೆದುಕೊಳ್ಳಬಹುದಿತ್ತು. ಎಂದು ಖಂಡಿಸಿದೆ. ರಾಜ್ಯದ ತಾತ್ಕಾಲಿಕ ಮುಖ್ಯಮಂತ್ರಿ ಬುದ್ಧದೇವ ಬಸು, ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಈ ಬರ್ಬರ ಕೃತ್ಯವನ್ನು ಖಂಡಿಸಿದ್ದಾರೆ. ಎಡರಂಗದ ಅಧ್ಯಕ್ಷ ಶೈಲೆನ್ ದಾಸ್‌ಗುಪ್ತಾ ಸಹ ಬಿಜೆಪಿ ಎಷ್ಟು ಪ್ರಜಾಪ್ರಭುತ್ವ-ವಿರೋಧಿ ಎಂದು ಇದು ತೋರಿಸಿದೆ ಎಂದಿದ್ದಾರೆ.

ಡಾರ್ಜಿಲಿಂಗ್ ಕಲ್ಕತ್ತಾ ಮತ್ತು ಪಶ್ಚಿಮ ಬಂಗಾಳದ ಹಲವೆಡೆ ಎಡರಂಗದ ಸಮಿತಿಗಳು ಭಾರಿ ಪ್ರತಿಭಟನಾ ಮೆರವಣಿಗೆ ಪ್ರದರ್ಶನಗಳು ನಡೆಸಿದವು. ಹಲವಾರು ಟ್ರೇಡ್ ಯೂನಿಯನ್‌ಗಳು ಪ್ರಜಾಸತ್ತಾತ್ಮಕ ಸಂಘದ ಪ್ರತ್ಯೇಕ ಹೇಳಿಕೆಗಳಲ್ಲಿ ಕೇಂದ್ರದ ತಾತ್ಕಾಲಿಕ ಸರ್ಕಾರದ ಈ ಅಸಭ್ಯ ಕ್ರಮವನ್ನು ಖಂಡಿಸಿದೆ.

ಪಶ್ಚಿಮ ಬಂಗಾಳ, ಕೇರಳದಲ್ಲಿ ಎಲ್ಲೆಲ್ಲೂ ಇಳಿದಿರೂ ಇಲ್ಲಿ ಏರಿದೆ

ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ ಇತ್ತೀಚೆಗೆ ಭಾರತದ ಜನ ಎಷ್ಟು ಆಹಾರ ಸೇವಿಸುತ್ತಾರೆ, ಅವರುಗಳಲ್ಲಿ ಪೋಷಕಾಂಶ ಎಷ್ಟು ಎಂಬ ಬಗ್ಗೆ ಹೊಸ ಮಾಹಿತಿ ಕಲೆ ಹಾಕಿ ಪ್ರಕಟಿಸಿದ್ದಾರೆ. ಈ ಪ್ರಮಾಣವನ್ನು ಕ್ಯಾಲೊರಿಗಳಲ್ಲಿ ಅಳೆಯಲಾಗುತ್ತದೆ. ಈ ಹೊಸ ಮಾಹಿತಿಯ ಪ್ರಕಾರ ಭಾರತದ ಜನಗಳ ತಲಾ ಕ್ಯಾಲರಿ ಬಳಕೆ 1972-73 ರಿಂದ 1993-94 ರ ನಡುವೆ ಸತತವಾಗಿ ಕಮ್ಮಿಯಾಗುತ್ತಾ ಬಂದಿದೆ. ನಗರ ಪ್ರದೇಶಗಳಲ್ಲಿ ಕ್ಯಾಲರಿ ಸೇವನೆ ಗ್ರಾಮೀಣ ಪ್ರದೇಶಗಳಿಗಿಂತ ಕಮ್ಮಿ ಎಂಬುದು ಇನ್ನೊಂದು ಗಮನಾರ್ಹ ಸಂಗತಿ. ಆದರೆ ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಆಹಾರ ಸೇವನೆಯಲ್ಲಿ ಕಡಿತ ಹೆಚ್ಚಿನ ಪ್ರಮಾಣದಲ್ಲಿ ಆಗಿರುವುದು ಗ್ರಾಮೀಣ ಪ್ರದೇಶಗಳಲ್ಲೇ.

ದೇಶದಲ್ಲೆಲ್ಲಾ ಈ ರೀತಿ ಆಹಾರ ಸೇವನೆಯ ಪ್ರಮಾಣ ನಿರಂತರವಾಗಿ ಕಮ್ಮಿಯಾಗುತ್ತಿದ್ದರೂ ಕೇರಳ ಮತ್ತು ಪಶ್ಚಿಮ ಬಂಗಾಳ ಇವಕ್ಕೆ ಅಪವಾದ. ಇಲ್ಲಿ ಈ ಪ್ರಮಾಣ ಹೆಚ್ಚುತ್ತಾ ಬಂದಿದೆ. ಪಶ್ಚಿಮ ಬಂಗಾಳದಲ್ಲಿ 1972-73 ರಲ್ಲಿ ಇದು ರಾಷ್ಟ್ರೀಯ ಸರಾಸರಿಗಿಂತ ಕಮ್ಮಿ ಇತ್ತು. ಈಗ 1992-93 ರ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ. ಗ್ರಾಮೀಣ ಮತ್ತು ನಗರ ಎರಡೂ ಪ್ರದೇಶಗಳಲ್ಲಿ ಈ ಪ್ರಮಾಣ ಹೆಚ್ಚಿರುವುದು ಮತ್ತೊಂದು ಗಮನಾರ್ಹ ಸಂಗತಿ. ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಮಾಣ ಹೆಚ್ಚಿರುವ ಇತರ ರಾಜ್ಯಗಳೆಂದರೆ ಕೇರಳ, ಕರ್ನಾಟಕ, ಒರಿಸ್ಸಾ, ಹಾಗೂ ಮಹಾರಾಷ್ಟ್ರ; ನಗರ ಪ್ರದೇಶಗಳಲ್ಲಿ ಕೇರಳವಲ್ಲದೆ, ಒರಿಸ್ಸಾದಲ್ಲೂ ಈ ಸರಾಸರಿ ಹೆಚ್ಚಿದೆ. ಕೇರಳದಲ್ಲಿ ತಲಾ ಆಹಾರ ಬಳಕೆಯ ಪ್ರಮಾಣದಲ್ಲಿ ಹೆಚ್ಚಳ ಎಲ್ಲಕ್ಕಿಂತ ಹೆಚ್ಚು. ಆದರೂ ಈಗಲೂ ಅಲ್ಲಿಯ ತಲಾ ಬಳಕೆ ರಾಷ್ಟ್ರೀಯ ಸರಾಸರಿಗಿಂತ ಕಮ್ಮಿಯಿದೆ. ಆದರೆ ಕುಟುಂಬ ಆರೋಗ್ಯ ಸರ್ವೆಯ ಪ್ರಕಾರ ಕೇರಳದ ಜನ ಇತರ ಎಲ್ಲಾ ರಾಜ್ಯಗಳಿಗಿಂತ ಹೆಚ್ಚು ಪೋಷಕಾಂಶ ಪಡೆಯುವವರು.. ಇವೆರಡು ಮಾಹಿತಿಗಳು ಮೇಲ್ನೋಟಕ್ಕೆ 'ವಿರೋಧಾಭಾಸ' ದಂತೆ ಕಾಣುತ್ತದೆ. ಕೇರಳದಲ್ಲಿ ಪೋಷಕಾಂಶಗಳನ್ನು ಕಡಿಮೆ ಪ್ರಮಾಣದಲ್ಲಿದ್ದರೂ ಹೆಚ್ಚು ಉತ್ತಮ ರೀತಿಯಲ್ಲಿ ಬಳಸುತ್ತಿರುವುದು ಹಾಗೂ ಆರೋಗ್ಯ ಸೇವೆಗಳು ಉತ್ತಮವಾಗಿರುವ ಇದಕ್ಕೆ ಕಾರಣವಾಗಬಹುದು ಎಂಬುದು ಒಬ್ಬ ಪರಿಣತರ ವಿವರಣೆ.

ಅದೇನೇ ಇರಲಿ, ಇತರೆಡೆ ಆಹಾರ ಬಳಕೆ ಕಮ್ಮಿಯಾಗುತ್ತಿರುವ ಕೇರಳ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಅದು ಹೆಚ್ಚುತ್ತಾ ಸಾಗಿದೆಯೆಂಬುದಂತೂ ನಿರ್ವಿವಾದ. ಇದಕ್ಕೆ ಕಾರಣಗಳೂ ಸ್ಪಷ್ಟ. ಈ ಎರಡೂ ರಾಜ್ಯಗಳಲ್ಲಿ ಎಡಶಕ್ತಿಗಳ ಮುತುವರ್ಜಿಯಿಂದ ಆರಂಭವಾದ ಸಾರ್ವಜನಿಕ ನೀತಿಗಳು ಜನಗಳ ಬದುಕನ್ನು 'ತುಸು ಉತ್ತಮ' ಗೊಳಿಸಿವೆ ಎಂಬುದಕ್ಕೆ ಇದೀಗ ಇನ್ನೊಂದು ಪುರಾವೆ. ಈ ಎರಡೂ ರಾಜ್ಯಗಳ ತಲಾ ಆದಾಯ ಬೇರೆ ಹಲವು ರಾಜ್ಯಗಳಿಗಿಂತ ಕಮ್ಮಿಯಾದರೂ ಜೀವನ ಮಟ್ಟ ಇತರೆಡೆಗಳಿಗಿಂತ ವಿತರಣಾ ವ್ಯವಸ್ಥೆ ಅಥವಾ ರೇಷನ್ ವ್ಯವಸ್ಥೆಯನ್ನು ಪರಿಣಾಮಗೊಳಿಸಿರುವುದರಿಂದ ಹಾಗೂ ಪಂಚಾಯತು ವ್ಯವಸ್ಥೆಯಿಂದಾಗಿ ಇರುವ ಆದಾಯ, ಅನುಕೂಲಗಳನ್ನು ಹೆಚ್ಚು ನ್ಯಾಯಯುತವಾಗಿ ಬಳಸಲು ಸಾಧ್ಯವಾಗಿದೆ ಎಂಬುದು ಸ್ವಯಂವಿದಿತ.

ಪಶ್ಚಿಮ ಬಂಗಾಳದಲ್ಲಿ ಬಡಜನರನ್ನು ಪ್ರತಿನಿಧಿಸುವ ಪಂಚಾಯತು ವ್ಯವಸ್ಥೆಯಿಂದಾಗಿ 1980 ಹಾಗೂ 1990 ರ ದಶಕದಲ್ಲಿ ದೇಶದಲ್ಲೇ ಅತಿ ಹೆಚ್ಚು ಕೃಷಿ ಬೆಳವಣಿಗೆಯನ್ನು ಕಂಡಿರುವುದಲ್ಲದೆ ಇಲ್ಲಿ ಆದಾಯ ಬಡತನವೂ ಇಳಿಮುಖವಾಗುತ್ತಿದೆ ಎಂದು ಕಂಡುಬಂದಿದೆ. ಅರ್ಥಶಾಸ್ತ್ರಜ್ಞರಾದ ಸಿ.ಪಿ.ಚಂದ್ರಶೇಖರ್ ಹಾಗೂ ಅಭಿಜಿತ್ ಸೆನ್ ನಡೆಸಿದ 15 ಅತ್ಯಂತ ಹೆಚ್ಚು ಜನಸಂಖ್ಯೆಯ ರಾಜ್ಯಗಳ ಅಧ್ಯಯನದ ಪ್ರಕಾರ ಬಡತನದ ರೇಖೆಯ ಕೆಳಗಿನ ಗ್ರಾಮೀಣ ಜನಗಳ ಪ್ರಮಾಣ ಇಳಿಮುಖವಾಗಿರುವ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳದು ಮೊದಲ ಸ್ಥಾನ. ಇದರ ಪರಿಣಾಮ ಈಗ ಆಹಾರ ಬಳಕೆಯ ವಲಯದಲ್ಲೂ ಕಂಡು ಬರುತ್ತಿದೆ ಎಂಬುದು ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಹೊಸ ಮಾಹಿತಿಯಿಂದ ಬೆಳಕಿಗೆ ಬಂದಿವೆ.

(ಕೃಪೆ: ಗಣಶಕ್ತಿ ಆನ್‌ಲೈನ್)

ಅಸ್ಸಾಮ್‌ನಲ್ಲಿ ಮೂರು ಮಹಿಳಾ ಟ್ರೇಡ್‌ಯೂನಿಯನ್ ಕಾರ್ಯಕರ್ತರ ಕೊಲೆ

ಸೀತಾ ಮರಂದಿ ನಾಮೋನಿ ಅಸ್ಸಾಂ ಚಹಾ ಮಜದೂರ ಸಂಘದ ಪ್ರಮುಖ ನಾಯಕಿ ತಾವ್‌ಲಿಂಗ್ ಮತ್ತು ಫಾಗುರಿಯೂ ಅದೇ ಸಂಘದ ಕಾರ್ಯಕರ್ತೆಯರು. ಈ ಮೂವರನ್ನು ಮೇ 16 ರ ರಾತ್ರಿ ಎಸ್ಟೇಟ್ ಬಳಿ ಕೊಲೆ ಮಾಡಲಾಗಿದೆ. ಕೊಲೆಯಲ್ಲಿ ಎಸ್ಟೇಟ್‌ನ ಮ್ಯಾನೇಜ್‌ಮೆಂಟ್ ಅವರ ಚಮಚಾ ಇಂಟಕ್ ಯೂನಿಯನಿನ ಕೈವಾಡವಿದೆ. ಈ ಸಂಘ ಸಿಐಟಿಯುಗೆ ಸೇರಿದ್ದು ಚಹಾ ಕಾರ್ಮಿಕರ ಹಕ್ಕುಗಳಿಗೆ ಹೋರಾಡುತ್ತಾ ಮ್ಯಾನೇಜ್‌ಮೆಂಟ್ ಇಂಟಕ್‌ಗೆ ಕಂಟಕವಾಗಿತ್ತು. ಇದೇನು ಬಿಡಿ ಘಟನೆಯ ಕಳೆದ ಹಲವು ವರ್ಷಗಳಿಂದ ಈ ಕೊಲೆಗಡುಕ ಗ್ಯಾಂಗ್ ಸಕ್ರಿಯವಾಗಿದೆ 1996, ಮತ್ತು 1998 ಇದೇ ರೀತಿ ಎರಡು ಬಾರಿ ಪ್ರಮುಖ ನಾಯಕರ ಕಾರ್ಯಕರ್ತರ ಕೊಲೆ ನಡೆದಿದೆ.




ಇ.ಎಂ.ಎಸ್. ಭವನ ನಿಧಿ

ಹಿಂದಿನ ಮೊತ್ತ	**10,80,286.50**
ಸಿ.ಪಿ.ಐ.(ಎಂ) ಮಂಡ್ಯ ಪ್ರಾದೇಶಿಕ ಸಮಿತಿ	
ತಳಗವಾದಿ ಶಾಖೆ - ಸದಸ್ಯರು	
ಹನುಮಂತು-ಪ್ರಾ.ಸ.ಸದಸ್ಯರು -	1000
ರಮೇಶ್-ಶಾಖಾ ಕಾರ್ಯದರ್ಶಿ -	1000
ರಾಮಲಿಂಗಯ್ಯ-	1000
ಬಿ.ಟಿ. ರಾಮಲಿಂಗಯ್ಯ-	1000
ನಾಗೇಗೌಡ -	200
ಟಿ.ಎಸ್. ವಿಶ್ವನಾಥ್ -	500
ಜೆ.ವಿ. ಶಿವಕುಮಾರ-	200
ಸುರೇಶ -	200
ಟಿ.ಹೆಚ್. ಆನಂದ, ಕಾರ್ಯದರ್ಶಿ	500
ಹನುಮಂತು, (ಕೊಡಗು) -	500
ಚೆಲುವಯ್ಯ-(ಚೀಣಿ)-	500
ಚೆಲುವಯ್ಯ-(ಕೊಂಡ್ಯ)-	300
ಸಿಂಗಣ್ಣ-	100
ಸಿಂಗರಾಜು-	50
ಬಾಲರಾಜು-	125
ಜವರಶೆಟ್ಟಿ-	100
ಸಿದ್ದಯ್ಯ-(ಮಸಣಿ)	100

ಸಿಪಿಐ(ಎಂ) ಶಿವಮೊಗ್ಗಾ ಜಿಲ್ಲಾ ಪ್ರಾದೇಶಿಕ ಸಮಿತಿ	
ಕೆ. ಲಕ್ಷ್ಮಿನಾರಾಯಣರಾವ್ - ಎರಡನೇ ಕಂತು-	2500
ಹೆಚ್.ಆರ್. ರುದ್ರಾರಾಧ್ಯ -	200
ಕೊಡಗು ಜಿಲ್ಲೆ - ಹಿತೈಷಿ	2500
ಬಳ್ಳಾರಿ ಜಿಲ್ಲಾ ಸಮಿತಿ-	
ಎಂ. ಜಂಬಯ್ಯನಾಯಕ್- ಎರಡನೇ ಕಂತು -	500
ರುದ್ರಗೌಡ-	500
ಲೋಕೇಂದ್ರ	500
ಚಂದ್ರಪ್ಪ-	500
ಪ್ರಸನ್ನಕುಮಾರ್-	500
ವೇಣುಗೋಪಾಲ-	500
ಬಿ.ಎಂ. ಪ್ರದಿಪ್‌ಕುಮಾರ್-	3000
ಅಚ್ಚುತನ್-	1000
ಗುರುಮೂರ್ತಿ-	200
ಹೆಚ್. ನಾಗಭೂಷಣರಾವ್	1100
ಬಿಜಾಪುರ ಜಿಲ್ಲಾ ಸಮಿತಿ	***6000***
ಎ.ಎ. ಮುಲ್ಲಾ ಹುಬ್ಬಳ್ಳಿ	50-00
ನಾಗರಾಜಕದರ ಮಂಡಲಗಿ, ಹುಬ್ಬಳ್ಳಿ	51-00
ಹನುಮಂತಪ್ಪ ಬಾಚಿನಹಳ್ಳಿ, ಹುಬ್ಬಳ್ಳಿ	51-00
ಸಹದೇವಪ್ಪ ಶರಬಣ್ಣನವರ, ಬಾಳಂಬೀಡು	51-00
ಮೋಹನ ನಾಗಮ್ಮನವರ, ಧಾರವಾಡ	150-00
ತಿರಕಪ್ಪ ಗಂಗಂಪ್ಪಬಾರ್ಕಿ, ಬಾಳಬೀಡು	50-00
ಚಂದ್ರಶೇಖರಪ್ಪ, ಬಿಂಗಾಪುರ	50.00
ಮುರಾರಿ ಕೃಷ್ಣಪ್ಪ ಡಾಂಗೆ, ಬಿಂಗಾಪುರ	25.00
ಮಲ್ಲಪ್ಪ ಮೋಡೇರ ಗೊಂದಿ	50.00
ರುದ್ರಪ್ಪ ಜಾಬೀನ್, ಗೊಂದಿ	101.00
ಜೀವವಿಮಾ ಅಧಿಕಾರಿ ಮಿತ್ರರು; ಧಾರವಾಡ	820.00
ಪ್ರೊ. ಶಿವಾನಂದ ಶೆಟ್ಟರು, ಕ.ವಿ.ವಿ.ಧಾರವಾಡ	100.00
ಮಹಾಬೂಬ್ ಸಾಬ್ ಬಡೇ ಸಾಬ್, ನರೇಂದ್ರ	101.00
ಬಸವರಾಜ ಎನ್ ಕೆಂಗನೂರ ಅಂಬೇಡ್ಕರ ನಗರ	50.00
ಪರಶುರಾಮ ಪಿ. ಈಳಿಗೇರ	300.00
ಶ್ರೀಮತಿ ಸುನಿತಾ ಪಿ ಈಳಿಗೇರ, ಧಾರವಾಡ	200.00
ವೀರಭದ್ರಪ್ಪ ಕಿಳ್ಳೇರ್, ತುಮಿನ ಕಟ್ಟೆ	50.00
ಶಿವರುದ್ರಪ್ಪ ಈಶ್ವರಪ್ಪ ಬಡಿಗೇರ	25.00
ಎಸ್.ಎಫ್.ಕ್ಯಾದಗಿ	50.00
ವಿರೂಪಾಕ್ಷಯ್ಯ ಬಗನ ಕಟ್ಟೆ	25.00
ಬೀಮಪ್ಪ ಮಸೂರ	50.00
ಎಸ್.ಬಿ.ಅಕ್ಕಣ್ಣನವರ	50.00
ಮುಲ್ಲಸಾಬ್ ಗೌಡಗೆರೆ	50.00
ಜೀತೇಂದ್ರ ಗೌಡ ಪಾಟೀಲ್, ಗೌಡಶೆಟ್ಟಿ ಹಳ್ಳಿ, ಹಾನಗಲ್	51.00
ಸಿ.ಎಂ.ಪಾಟೀಲ, ಕಾಡಶೆಟ್ಟಿ ಹಳ್ಳಿ	51.00
ಕೊಟ್ರೆಮ್ಮ ರುದ್ರಪ್ಪ ಜಾಬೀನ್	101.00
ಶ್ಯಾನಬಾಗ ರೆಸ್ಟೊರೆಂಟ್	501.00
ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿ ಮೂಲಕ	1,32,500
ರಾಯಚೂರು ಜಿಲ್ಲಾ ಸಮಿತಿ,	1500.00
ಕಾರ್ಯದರ್ಶಿ-ಬಿ.ಲಿಂಗಪ್ಪ	100.00
ಕಾಂ. ಎನ್.ಕೆ. ಮೂಲಕ	
ಫಾರ್ಮಸ್ಯುಟಿಕಲ್ಸ್ ಡಿಸ್ಟ್ರಿಬ್ಯೂಟರ್ಸ್	
ಅಸೋಸಿಯೇಷನ್, ಬಿಜಾಪುರ	**5000**
ಕಾಂ. ರವೀಂದ್ರ ರಾವ್, ಬೆಂಗಳೂರು	**500**
ಬೆಂಗಳೂರು ಜಿಲ್ಲಾ ಸಮಿತಿ - ಕೆ.ಎಲ್.ಸೈಮನ್	
ಹೆಚ್.ಎ.ಎಲ್. ಮೂಲಕ ಸಂಗ್ರಹ	**7500**
ವೀರಭದ್ರಪ್ಪ ಎಂ.ಪತ್ತರ್ ಯಾದಗೀರ್	**300**
ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಮೂಲಕ	
ಹಿರೇಮಠ, ವಕೀಲರು, ಹಾವೇರಿ	251
ಶುಭದಾ.ಸಿ.	1000
ಎಂ.ಬಿ.ಕಟ್ಟಿ	250
ಶಿವಾಜಿ ಹವಾಲ್ದಾರ್	101
ಪ್ರೊ. ಎಸ್.ಆರ್.ತೊಂಟದಾರ್ಯ	1000
ಪಟ್ಟೆ ತ್ರೀಶೂಲ	1700
"	750
"	744
ಸಿಪಿಐ(ಎಂ) ಮೈಸೂರು ಪ್ರಾದೇಶಿಕ ಸಮಿತಿ	3350
ಒಟ್ಟು	12,66,611-50

ಇಸ್ರೇಲಿ ಲೇಬರ್ ಪಾರ್ಟಿಗೆ ಭಾರಿ ವಿಜಯ

ಪ್ಯಾಲೆಸ್ಟೈನ್-ಇಸ್ರೇಲಿನಲ್ಲೊಂದು ಶಾಂತಿಯ ಹೊಸ ಭರವಸೆ



ಇಸ್ರೇಲಿನಲ್ಲಿ ಲೇಬರ್ ಪಾರ್ಟಿಯ ಪ್ರಧಾನ ಮಂತ್ರಿ ಅಭ್ಯರ್ಥಿ ಬರಾಕ್‌ರ ಭಾರಿ ವಿಜಯ ಈ ಪ್ರದೇಶದಲ್ಲೊಂದು ಗಮನಾರ್ಹ ಬೆಳವಣಿಗೆ. ಹಿಂದಿನ ಬಲಪಂಥೀಯ ಲಿಕುಡ್ ಪ್ರಧಾನಿ ನೆತ್‌ನ್ಯಾಹು ದೇಶದೊಳಗೂ ಇತರ ದೇಶಗಳೊಂದಿಗೆ ಸಂಬಂಧಗಳಲ್ಲೂ ಉನ್ಮಾದಕಾರಿ ನಿರ್ಧಾರಗಳನ್ನು ನಮ್ಮ ಬಿಜೆಪಿ ಸರ್ಕಾರದಂತೆ ತೆಗೆದುಕೊಂಡು ಆಗಲೇ ನಾಜೂಕಾದ ಪರಿಸ್ಥಿತಿಯನ್ನು ತೀರಾ ಹದಗೆಡಿಸಿದ್ದ. ಆತನ ಅವಮಾನಕಾರಿ ಸೋಲು ಜನರ ಸ್ಪಷ್ಟ ತೀರ್ಪಿನ ಸಂಕೇತ. ಪ್ಯಾಲೆಸ್ಟೇನ್ ಜತೆ ಶಾಂತಿ ಒಪ್ಪಂದವನ್ನು ಜಾರಿ ಮಾಡದೆ, ದೇಶದೊಳಗೂ ಬೇರೆ ಬೇರೆ ಮೂಲದ ಜನರ ನಡುವೆ ವೈಷಮ್ಯಗಳನ್ನು ಹೆಚ್ಚಿಸಿದ ನೆತನ್ಯಾಹುವನ್ನು ಜನ ಪೂರ್ಣವಾಗಿ ತಿರಸ್ಕರಿಸಿದ್ದಾರೆ. ಪ್ಯಾಲೆಸ್ಟೇನ್ ಜತೆ ಶಾಂತಿ ಒಪ್ಪಂದವನ್ನು ಪ್ರಾಮಾಣಿಕವಾಗಿ ಜಾರಿ ಮಾಡುವ, ದೇಶದೊಳಗೆ ವೈಷಮ್ಯ ಕಡಿಮೆ ಮಾಡುವ ಘೋಷಣೆಯ ಮೇಲೆ ಲೇಬರ್ ಪಾರ್ಟಿಯ ಅಭ್ಯರ್ಥಿಯನ್ನು ಜನ ದೊಡ್ಡ ಪ್ರಮಾಣದಲ್ಲಿ ಬೆಂಬಲಿಸಿದ್ದಾರೆ.

ಇಸ್ರೇಲಿನಲ್ಲಿ ಪ್ರಧಾನಮಂತ್ರಿಯನ್ನು ನೇರ ಚುನಾವಣೆ ಮೂಲಕ ಆರಿಸಲಾಗುತ್ತದೆ. ನೆಸೆಟ್ ಎಂಬ ಅಲ್ಲಿನ ಪಾರ್ಲಿಮೆಂಟಿನ ಸದಸ್ಯರನ್ನು ಆರಿಸಲಾಗುತ್ತದೆ. ಪಾರ್ಲಿ ಮೆಂಟು ಚುನಾವಣೆಗಳಲ್ಲಿ ಲೇಬರ್ ಪಾರ್ಟಿ ತನ್ನ ಶೇಕಡವಾರು ಉಳಿಸಿಕೊಂಡಿದ್ದರೆ, ಲಿಕುಡ್ ಪಕ್ಷ ತನ್ನ ಸದಸ್ಯರ ಬಲವನ್ನು ಮೂರನೇ ಒಂದರಷ್ಟು ಕಳೆದುಕೊಂಡಿದೆ. ಲೇಬರ್ ಪಕ್ಷ ಎಡ ಮತ್ತು ಮಧ್ಯ ಪಂಥೀಯ ಪಕ್ಷಗಳ ಕೂಟಕ್ಕೆ ಬಹುಮತ ಬೆಂಬಲವಿದ್ದು ಸರ್ಕಾರ ರಚಿಸಲು ಅಡಚಣೆಗಳಿಲ್ಲ.

ಈಗ ಚುನಾಯಿತ ಪ್ರಧಾನಿ ಬಾರಾಕ್ ಇಸ್ರೇಲಿನ ಮಾಜಿ ಪ್ರಧಾನ ದುಂಡನಾಯಕನಾಗಿದ್ದು, ಹಿಂದಿನ ಲೇಬರ್ ಪ್ರಧಾನಿ ರಾಬಿನ್ ಸರ್ಕಾರದಲ್ಲಿ ಗೃಹಮಂತ್ರಿಯಾಗಿದ್ದವರು. ಜನರಲ್ ಆಗಿದ್ದಾಗ ಪ್ಯಾಲೆಸ್ಟೇನ್‌ನ ಹಲವು ನಾಯಕರ ಹತ್ಯೆಯ ಯೋಜನೆಯಲ್ಲಿ ವೈಯುಕ್ತಿಕವಾಗಿ ಭಾಗ ವಹಿಸಿದ್ದು ಪ್ಯಾಲೆಸ್ಟೇನ್ ಜನರಲ್ಲಿ ಆತಂಕ ಉಂಟು ಮಾಡಿದರೂ ರಾಜಕಾರಣಿಯಾಗಿ ಶಾಂತಿಗೆ ಆತನ ಬೆಂಬಲ ಪ್ರಾಮಾಣಿಕ ಎನಿಸಿದೆ. ಪ್ಯಾಲೆಸ್ಟೇನ್‌ಗೊಂದು ತಾಯ್ನಾಡು, ಪ್ಯಾಲೆಸ್ಟೇನ್-ಇಸ್ರೇಲ್‌ನ ನಡುವೆ ಶಾಂತಿ, ಇಸ್ರೇಲ್ ಒಳಗೂ ಶಾಂತಿಗೆ ಆತನ ಬೆಂಬಲ ಹಿಂದಿನ ಯಾವುದೇ ಪ್ರಧಾನಿಗಿಂತ ನೇರವಾದದ್ದು. ಪ್ರಾಮಾಣಿಕ ಎನಿಸುವಂತದ್ದು.

ಇಸ್ರೇಲಿನ ಈ ರಾಜಕೀಯ ಬೆಳವಣಿಗೆ ಆ ಪ್ರದೇಶದಲ್ಲಿ ಶಾಂತಿ ತರುವುದು. ಪ್ಯಾಲೆಸ್ಟೇನ್‌ಗೊಂದು ತಾಯ್ನಾಡು ರಚಿಸಲು ಅನುಕೂಲ ಮಾಡಿಕೊಡುವುದು ಎಂದು ಆಶಿಸಬೇಕಾಗಿದೆ. ○

ಯೆಲ್ಸಿನ್ ದೋಷಾರೋಪಣೆ ಪ್ರಯತ್ನ ವಿಫಲ

ಯೆಲ್ಸಿನ್ ಮೇಲೆ ದೋಷಾರೋಪಣೆ ಮಾಡಿ ಪದಚ್ಯುತಿಗೊಳಿಸುವ ಪ್ರಯತ್ನ ಆರಂಭದ ಹಂತದಲ್ಲೇ ವಿಫಲವಾಗಿದೆ. ಮೊದಲ ಹಂತವಾಗಿ ಕೆಳ ಮನೆಯಲ್ಲಿ ಈ ನಿರ್ಣಯಕ್ಕೆ ಬರಬೇಕಿದ್ದ ಮೂರನೇ ಎರಡು ಬಹುಮತಕ್ಕೆ 20-30 ಮತಗಳ ಕೊರತೆಯಿಂದ ಅದು ಬಿದ್ದು ಹೋಗಿದೆ. ಯೆಲ್ಸಿನ್ ನೇಮಿಸಿದ ಹೊಸ ಪ್ರಧಾನಿ ಯನ್ನು ಪಾರ್ಲಿಮೆಂಟು ಅನುಮೋದಿಸಿದೆ.

.....ಸಾಮ್ರಾಜ್ಯಶಾಹಿಗಳಿಗೆ ನಡುಕ ತರುವ ಝುಪಾಟಿಸ್ಟಾಗಳು

ಪುಟ 9 ರಿಂದ

35 ಕಾಫಿ ಇಲ್ಲಿ ಬೆಳೆಯುತ್ತದೆ. ಇಲ್ಲಿ ಕಾಫಿ ಬೆಳೆಗಾರರಿಗೆ ಕೊಡುವ ಮೂರು ಪಟ್ಟು ಬೆಲೆಗೆ ಕಾಫಿ ಹೊರಗೆ ಮಾರಲಾಗುತ್ತದೆ.

ದೇಶದ ಜಲವಿದ್ಯುತ್ ಶಕ್ತಿಯಲ್ಲಿ ಅರ್ಧಕ್ಕಿಂತ ಹೆಚ್ಚು ಇಲ್ಲಿಂದ ಆದರೆ ಇಲ್ಲಿ ಮೂರರಲ್ಲಿ ಎರಡು ಮನೆಯಲ್ಲಿ ವಿದ್ಯುತ್ ಇಲ್ಲ. ಅರ್ಧಕ್ಕಿಂತ ಹೆಚ್ಚು ಮನೆಗಳಿಗೆ ನೀರೇ ಇಲ್ಲ. ಮೂರರಲ್ಲಿ ಎರಡು ಮನೆಯಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಶಿಕ್ಷಣದಲ್ಲೂ ಇಲ್ಲಿ ಹಿಂದೆ. ನೂರು ಮಕ್ಕಳಲ್ಲಿ 72 ಮಕ್ಕಳು ಪ್ರಾಥಮಿಕ ಶಾಲೆ ದಾಟುತ್ತಿಲ್ಲ. ಐದು ಸಾವಿರ ಜನರಿಗೆ ಒಂದು ಕ್ಲಿನಿಕ್ ಇದೆ. ಮೆಕ್ಸಿಕೊದ ಸರಾಸರಿಗಿಂತ ಐದು ಪಟ್ಟು ಕಡಿಮೆ. ಹತ್ತು ಸಾವಿರ ಚಿಯಾಪಾಸ್‌ರಿಗೆ ಮೂರು ಆಸ್ಪತ್ರೆ ಹಾಸಿಗೆ ಇದೆ. ಇದು ಮೆಕ್ಸಿಕೊದ ಸರಾಸರಿಗಿಂತ ಮೂರು ಪಟ್ಟು ಕಡಿಮೆ.

ಮೆಕ್ಸಿಕೊ ಒಂದು ದೇಶವಾಗಿ ನಾಫ್ಟಾ ಕೂಟದಲ್ಲಿ ಆರ್ಥಿಕವಾಗಿ ಹಿಂದುಳಿದ ದೇಶ. ಇಲ್ಲಿನ ಕಚ್ಚಾ ವಸ್ತುಗಳನ್ನು ಬಳಸಿ, ಅಗ್ಗದ ಶ್ರಮ ಬಳಸಿ ರಫ್ತಿಗೆ ಸರಕುಗಳನ್ನು ಉತ್ಪಾದಿಸಲಾಗುತ್ತದೆ. 1988-1993 ರ ವರೆಗೆ ತಂದ 'ಹೊಸ ಆರ್ಥಿಕ' ನೀತಿ ಮೆಕ್ಸಿಕೊದ ಆರ್ಥಿಕವನ್ನು ಹಾಳುಗೆಡವಿದೆ. ಈ ಅವಧಿಯಲ್ಲಿ ಈ ದೇಶದ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ ಶೇಕಡಾ 80 ನ್ನು ಖಾಸಗೀಕರಿಸಲಾಯಿತು. ಅಂದರೆ ವಿದೇಶಿ ಅಮೆರಿಕನ್ ಕಂಪನಿಗಳಿಗೆ ಮಾರಲಾಯಿತು. ಈ ಬಡ ದೇಶದ ಬಡ ಪ್ರಾಂತ್ಯ ಚಿಯಾಪಾಸ್. ಅಲ್ಲಿನೂ ಮೂಲನಿವಾಸಿ ಇಂಡಿಯನ್ನರು ದಟ್ಟದರಿದ್ರರು. ಶೋಷಣೆಯ ಪರಾಕಾಷ್ಟೆ ಅಲ್ಲಿ ಮುಟ್ಟಿದೆ. ಸಾಮ್ರಾಜ್ಯಶಾಹಿ ಶೋಷಣೆ ಅಲ್ಲಿ ಮರಗಟ್ಟಿದೆ. ಮೂಲ ನಿವಾಸಿಗಳ ಐದು ಶತಮಾನಗಳ ಗೋಳು, ತಳಮಳ ಸಿಡಿಯುತ್ತಿದೆ.

ಝುಪಾಟಿಸ್ಟಾರ ದಂಗೆ ರಾತ್ರೋರಾತ್ರಿ ಆದದ್ದಲ್ಲ. ಇದಕ್ಕೆ ಹತ್ತು ವರ್ಷಗಳ ಗಂಭೀರ ತಯಾರಿ, ಸಂಘಟನೆ, ಸೈದ್ಧಾಂತಿಕ ಕೆಲಸ ನಡೆದಿದೆ. 1968 ರ ವಿದ್ಯಾರ್ಥಿ ದಂಗೆಯು ದಬ್ಬಾಳಿಕೆಯಿಂದ ಬೆಂದ ವಿದ್ಯಾರ್ಥಿ ಗುಂಪುಗಳು ಗೆರಿಲ್ಲಾ ಗುಂಪುಗಳಾಗಿ ಹೋರಾಡಲು ದೂರದ ಪರ್ವತಗಳಿಗೆ ತೆರಳಿದ್ದು ಝುಪಾಟಿಸ್ಟರ ಮೂಲ ಎನ್ನಲಾಗಿದೆ. ಶಸ್ತ್ರಾಸ್ತ್ರ ಸಂಗ್ರಹ, ಗೆರಿಲ್ಲಾ ತರಬೇತಿ ನಡೆದಿದೆ. ಇವೆಲ್ಲದರ ಫಲವಾಗಿ ಝುಪಾಟಿಸ್ಟರು ಜಗತ್ತಿನ ಎಲ್ಲಾ ಹೋರಾಟಗಾರರಿಗೆ ಮಾದರಿಯಾಗಿಸಿದೆ. ಅದು ಇಂದಿನ ಏಕಛತ್ರಾಧಿಪತಿಯ ಹಿತ್ತಲಲ್ಲೇ ಅವರ ಗದ್ದಲ ಎಲ್ಲರಿಗೂ ರೋಮಾಂಚನಗೊಳಿಸಿದೆ.

ಮೆಕ್ಸಿಕೊದ ಪ್ರತಿಗಾಮಿ ಆಳುವ ಕೂಟ - ಅಮೆರಿಕದ ಸಾಮ್ರಾಜ್ಯಶಾಹಿ ಅವರನ್ನು ಹೊಸಕಿ ಹಾಕಲು ಶತಪ್ರಯತ್ನ ಮಾಡುತ್ತಿದೆ. ಅದಕ್ಕೆ ಮೂಲನಿವಾಸಿ ವಿವಿಧ ಪಂಗಡಗಳ ನಡುವೆ ಕಲಹ, ಮೂಲ ನಿವಾಸಿಗಳಿಗೂ ಇತರರಿಗೂ ನಡುವೆ ಕಲಹ ಇತ್ಯಾದಿ ಆಳುವ ವರ್ಗದ ಬತ್ತಳಿಕೆಯ ಎಲ್ಲಾ ಬಾಣಗಳನ್ನು ಬಳಸಲಾಗುತ್ತಿದೆ. ಝುಪಾಟಿಸ್ಟರನ್ನು ಭಯೋತ್ಪಾದಕರು, ಡಕಾಯಿತರು, ಮಾದಕ ದ್ರವ್ಯಗಳ ವ್ಯಾಪಾರಿಗಳು ಎಂದೆಲ್ಲಾ ಆಪಾದಿಸಲಾಗುತ್ತಿದೆ. ಆದರೆ ಝುಪಾಟಿಸ್ಟರು ಇದಕ್ಕೆಲ್ಲಾ ಸೊಪ್ಪು ಹಾಕದೆ, ಮೆಕ್ಸಿಕೊದ ದಟ್ಟ ದರಿದ್ರರ ಹೃದಯಗಳನ್ನು ಆಳುತ್ತಿದ್ದಾರೆ. ಪ್ರತ್ಯೇಕವಾದ, ಜನಾಂಗವಾದದ ಎಲ್ಲಾ ತಪ್ಪುಗಳನ್ನು ಮಾಡದೆ ಸಾಮ್ರಾಜ್ಯಶಾಹಿಗಳಿಗೆ ಸವಾಲಾಗಿದ್ದಾರೆ.

ಯೆಪ್ಪಾ! ಯೆಪ್ಪಾ! ಅಂದಾಲೆ, ಅಂದಾಲೆ! ಅರಿಬಾ, ಅರಿಬಾ!... ನೀ.. ನನ್ನ ಹಿಡಿಯಲಾರೆ....

ಝುಪಾಟಿಸ್ಟಾ ನಾಯಕ ಮಾರ್ಕೋಸ್ ಭೂಗತ ಕೇಂದ್ರದಿಂದ ಬರುವ ಬುಲೆಟಿನ್‌ಗಳು ಮೊನಚು, ಐದು ಶತಮಾನಗಳ ಮೂಲನಿವಾಸಿಗಳ ರೊಚ್ಚು ಕಾರುತ್ತವೆ. ವ್ಯಂಗ್ಯ ಸೂಸುತ್ತವೆ.

ಈ ಮೇಲಿನ ಬುಲೆಟಿನ್ ಆತ ಅಧ್ಯಕ್ಷರ ಶಾಂತಿ ಮಾತುಕತೆಗೆ ಪ್ರತಿಕ್ರಿಯೆಯಾಗಿ ಕಳಿಸಿದ್ದು, ಈ ರೀತಿ ಹೇಳುವುದು ಡಿಸ್ನಿಯ ಕಾರ್ಟೂನ್ ಫಿಲಂನಲ್ಲಿ ಬರುವ ವೇಗದ ಗೊನ್‌ಸಾಲಿಸ್ ಎಂಬ ಇಲಿಯಂತೆ - 'ನೀ ನನ್ನ ಹಿಡಿಯಲಾರೆ' ಅಂತ. ಝುಪಾಟಿಸ್ಟ್‌ಗಳನ್ನು ಹಿಡಿಯಲಾರದೆ ಶಾಂತಿ ಮಾತನಾಡುತ್ತಿದ್ದೀಯ ಅಂತ.

ಮಾರ್ಕೋಸ್‌ನ ಇತರ ಕೆಲವು ಹೇಳಿಕೆಗಳು

- **"ಹೇಗಿತ್ತು ಕ್ರಿಸ್‌ಮಸ್ ಊಟ? ರಕ್ತದ ರುಚಿ ಇರಲಿಲ್ಲವೇ?"**

  - ಡಿಸೆಂಬರ್ 97 ರ ಕ್ರಿಸ್‌ಮಸ್ ನರಮೇಧದ ನಂತರ ಮೆಕ್ಸಿಕೋ ಸರ್ಕಾರಕ್ಕೆ ಪ್ರಶ್ನೆ.

- **ಬಂಡವಾಳಶಾಹಿ ಚಿಯಾಪಾಸ್ ಮೇಲೆ ವಿಧಿಸಿರುವ ಶುಲ್ಕ ಹಲವು ಶತಮಾನಗಳಿಂದ ರಕ್ತ ಮತ್ತು ಕೆಸರು ಬಸಿಯುತ್ತಿದೆ.**

  - ಚಿಯಾಪಾಸ್‌ನ ದಾರುಣ ಸ್ಥಿತಿ ಬಗ್ಗೆ ವ್ಯಂಗ್ಯಾತ್ಮಕ ಚಿತ್ರಣ, ಚಿಯಾಪಾಸ್‌ಗೆ ಒಂದು ಟೂರಿಸ್ಟ್ ಸೈಡ್' ಎಂಬ 1991 ಮಧ್ಯಭಾಗ ಲೇಖನದಲ್ಲಿ

- **ಮೂರು ಮೆಕ್ಸಿಕೊಗಳಿವೆ - ಒಂದು ಪ್ರಬಲರ ಮೆಕ್ಸಿಕೊ, ಇನ್ನೊಂದು ಪ್ರಬಲರಾಗಬೇಕೆಂದಿರುವವರು, ಮೂರನೆಯದು ಯಾರಿಗೂ ಬೇಡದವರು. ಚಿಯಾಪಾಸ್‌ನಲ್ಲಿ ಮೂಲನಿವಾಸಿಗಳು ಈ ಯಾರಿಗೂ ಬೇಡದವರು. ಬೇರೆ ಪ್ರಾಂತ್ಯಗಳಲ್ಲಿ ಅವರಿಗೆ ಬೇರೆ ಹೆಸರುಗಳಿವೆ.**

  - 1994 ರಲ್ಲಿ ಸಂದರ್ಶನವೊಂದರಲ್ಲಿ

- **ಇಲ್ಲಿ ಯಾರಿಗಾದರೂ ಕಾಯಿಲೆಯಾದರೆ ಡಾಕ್ಟರ ಬಳಿ ಹೋಗುತ್ತೇನೆ. ಆತ ಔಷಧಿ ಬರೆದು ಕೊಟ್ಟರೆ ಔಷಧಿ ತರುವುದು ಅಗ್ಗವೋ? ಶವ ಪೆಟ್ಟಿಗೆ ಅಗ್ಗವೋ ಎಂದು ಲೆಕ್ಕ ಹಾಕುತ್ತೇನೆ.**

.... ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್

ಪುಟ 7 ರಿಂದ

ಹೋರಾಟದ ಮುಂದಿದೆ ಎಂಬುದನ್ನು ಅರಿತಿರುವ ಕ್ಯಾಪ್ಟನ್ ಲಕ್ಷ್ಮೀ ಮಹಿಳೆಯರ ಹಾಗೂ ಇಡೀ ದೇಶದ ಆಮೂಲಾಗ್ರ ಬದಲಾವಣೆಗಾಗಿ ಈ ಇಳೀ ವಯಸ್ಸಿನಲ್ಲೂ ದುಡಿಯುತ್ತಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಆ ಸಂದರ್ಭದಲ್ಲಿ ನಾವು ನಮ್ಮ ಶತ್ರುಗಳನ್ನು ಸುಲಭವಾಗಿ ಗುರುತಿಸಿ ಕೊಂಡು ಹೋರಾಡುತ್ತಿದ್ದೆವು ಆದರೆ ನಿಜವಾದ ಹೋರಾಟ ಆರಂಭವಾಗುವುದು ಸ್ವಾತಂತ್ರ್ಯ ಲಭಿಸಿದ ನಂತರವೇ. ಭಾರತ ಬಹುಮುಖಿ ಸಂಸ್ಕೃತಿಗಳ ರಾಷ್ಟ್ರ, ಈ ರಾಷ್ಟ್ರದಲ್ಲಿ ಜಾತಿ, ಭಾಷೆ, ಧರ್ಮಗಳನ್ನೇ ಮುಂದಿಟ್ಟುಕೊಂಡು ಜನರ ಐಕ್ಯತೆಯಲ್ಲಿ ಒಡಕನ್ನುಂಟು ಮಾಡುವ ಪ್ರಯತ್ನಗಳು ನಡೆಯುತ್ತಲಿವೆ. ಇವುಗಳ ವಿರುದ್ಧ ಹೋರಾಟ ಸ್ವಾತಂತ್ರ್ಯ ಹೋರಾಟಕ್ಕಿಂತ ಕ್ಲಿಷ್ಟಸಾಧ್ಯವಾಯಿತು. ಇಂದು ನಮ್ಮ ದೇಶ ಅತ್ಯಂತ ಗಂಭೀರವಾದ ಸವಾಲುಗಳನ್ನು ಎದುರಿಸುತ್ತಿವೆ. ಒಂದು ಕಡೆ ಆರ್ಥಿಕ ಸಂಕಷ್ಟದಿಂದ ಜನತೆ ನರಳುತ್ತಿದ್ದರೆ ಮತ್ತೊಂದು ಕಡೆ ಕೋಮುವಾದಿಗಳ ಅಟ್ಟಹಾಸ ಎಲ್ಲೆ ಮೀರಿದೆ. 14-04-99 ರಂದು ಮೈಸೂರಿನ ಜಗನ್ ಮೋಹನ್ ಪ್ಯಾಲೇಸ್‌ನಲ್ಲಿ ಫ್ರೆಂಡ್ಸ್ ಸ್ಟಡೀ ಸರ್ಕಲ್‌ನವರು ಮತ್ತು ವಾಸ್ತವ (Indian Freedom Dreams and Realities) ಎಂಬ ಸಂವಾದದಲ್ಲಿ ಮಾತನಾಡುತ್ತಾ ತಮ್ಮ ಮನದಾಳದ ಈ ನೋವನ್ನು ತೋಡಿಕೊಂಡರು.

ನೇತಾಜಿಯವರ ಒಡನಾಡಿಯಾದ ಕ್ಯಾಪ್ಟನ್ ಲಕ್ಷ್ಮೀಯವರು ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತೆಯೊಬ್ಬರ ಮಗಳಾಗಿ ಕಾಂಗ್ರೆಸ್ ಪಕ್ಷ ಸೇರದೆ ಸ್ವಾತಂತ್ರ್ಯ ಬಂದ ಮೇಲೆ ಭಾರತ ಸಾಗುತ್ತಿದ್ದ ದಿಕ್ಕನ್ನು ನೋಡಿ ಭಾರತದ ಜನತೆಯ ವಿಮೋಚನೆ ಸಿಪಿಎಂ(ಎಂ) ನಂತಹ ರಾಜಕೀಯ ಪಕ್ಷದಿಂದ ಮಾತ್ರ ಸಾಧ್ಯವೆಂದು ಮನಗಂಡು 1970ರಲ್ಲಿ ಪಕ್ಷವನ್ನು ಸೇರಿದುದು ಪಕ್ಷದ ಘನತೆಯನ್ನು ಹೆಚ್ಚಿಸಿ ಈಗ ಅವರು ಉತ್ತರ ಪ್ರದೇಶದ ಪಕ್ಷದ ರಾಜ್ಯಸಮಿತಿ ಸೆಕ್ರೇಟೇರಿಯಟ್ ಸದಸ್ಯೆಯಾಗಿದ್ದಾರೆ.

ಇಂತಹ ಸ್ವಾತಂತ್ರ್ಯ ಜ್ವಾಲೆಯೊಂದು ಈಗಲೂ ನಮ್ಮೊಂದಿಗಿರುವುದು ನಮ್ಮ ಭಾಗ್ಯ. ಈ ದೇಶದ ಜನರು ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಿ ನಡೆಸುವ ಹೋರಾಟಗಳಲ್ಲಿ ಕ್ಯಾಪ್ಟನ್ ಲಕ್ಷ್ಮೀ ನಮ್ಮೊಂದಿಗಿದ್ದಾರೆ ಎನ್ನುವುದೇ ನಮ್ಮ ಹೋರಾಟಕ್ಕೆ ಬಹಳಷ್ಟು ಸ್ಫೂರ್ತಿಯನ್ನು ನೀಡಬಲ್ಲದು.

"ಐಕ್ಯತೆ ವಿಶ್ವಾಸ ಹಾಗೂ ಬಲಿದಾನ" ಧ್ಯೇಯ ಮಂತ್ರವಾಗಿದ್ದ ಆಜಾದ್ ಹಿಂದ್ ಫೌಜ್‌ನ ಝಾನ್ಸಿ ರೆಜಿಮೆಂಟ್‌ನ ಸೇನಾನಿ ಕ್ಯಾಪ್ಟನ್ ಲಕ್ಷ್ಮೀ ಸಹಗಲ್ ಬಾಯಿ ಮಾತಿನ ಸಂವಿಧಾನಾತ್ಮಕ ಸಮಾನತೆ ನೀಡುವ ನಮ್ಮ ಸರ್ಕಾರಗಳು ಪ್ರಾಯೋಗಿಕ ವಾಗಿ ಈ ಸಮಾನತೆಯನ್ನು ಎತ್ತಿ ಹಿಡಿದಿಲ್ಲ. ಆದುದರಿಂದ ಮಹಿಳೆಯರಾದ ನಾವು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ನಮ್ಮ ಹೋರಾಟವನ್ನು ಮುಂದುವರಿಸಬೇಕು ಎಂದು ಮಹಿಳಾ ಕುಲಕ್ಕೆ ಕರೆ ನೀಡುತ್ತಾರೆ.

ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ಪುಟವಿಟ್ಟ ಚಿನ್ನದಂತೆ ಹೋರಾಟದಿಂದ ಹೋರಾಟಕ್ಕೆ ಪ್ರಜ್ವಲಿಸುತ್ತಾ ಹೋಗುತ್ತಾರೆ.

ಕೋಮುವಾದಿಗಳ ಅಟ್ಟಹಾಸ ಎಲ್ಲೆ ಮೀರುತ್ತಿರುವಂತಹ ಇಂತಹ ಸಂದರ್ಭದಲ್ಲಿ ಕ್ಯಾಪ್ಟನ್ ಲಕ್ಷ್ಮೀ ಯವರು ನಮ್ಮ ಮಧ್ಯೆ ಇರುವುದರಿಂದ ಎಂತಹ ಸವಾಲನ್ನು ಎದುರಿಸಲು ಚೈತನ್ಯ ನೀಡುತ್ತದೆ. ಅವರ ರೋಮಾಂಚಕ ಜೀವನ ಚರಿತ್ರೆ ನಮಗೆ ಸ್ಫೂರ್ತಿ, ಅವರ ಪಾದರಸದಂತಹ ಚಟುವಟಿಕೆ ನಮಗೊಂದು ಮಾರ್ಗದರ್ಶನ.

ಇಂತಹ ವೀರವನಿತೆ ಹಾಕಿಕೊಟ್ಟಿರುವ ದಾರಿ ನಮಗೆ ಸದಾ ಸ್ಫೂರ್ತಿ ನೀಡಲಿ. ನಮ್ಮ ಹೋರಾಟ ಬಲಿಷ್ಠಗೊಳ್ಳಲು ನಾವೆಲ್ಲಾ ಒಂದಾಗಿ ದುಡಿಯೋಣ. ನಿಜವಾದ ಅರ್ಥದಲ್ಲಿ ಮಹಿಳಾ ಸಮಾನತೆ, ಸ್ವಾತಂತ್ರ್ಯವನ್ನು ಸಾಧಿಸುವಲ್ಲಿ ನಮ್ಮ ಮುಂದಿರುವ ಅಡ್ಡಿ ಆತಂಕಗಳನ್ನು ಮಹಿಳೆಯರೆಲ್ಲರೂ ಒಟ್ಟಾಗಿ ಐಕ್ಯ ಹೋರಾಟದ ಮೂಲಕ ತಡೆಯೋಣ ವೈರಿಗಳನ್ನು, ವಿರೋಧಿಗಳನ್ನು ಬಗ್ಗು ಬಡಿಯಲು ನಮ್ಮ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳೋಣ. ಬಲಿಷ್ಠ ಮಹಿಳಾ ಚಳುವಳಿ ಕಟ್ಟಲು, ಐಕ್ಯ ಭಾರತ ಕಟ್ಟಲು ಪುರುಷ -ಮಹಿಳೆಯರೆಲ್ಲರೂ ಒಟ್ಟಾಗಿ ಶ್ರಮಿಸೋಣ. ಇದು ಇಂದಿನ ಕಾಲದ ಕರೆಯಾಗಲಿ.

ಸ್ಫೂರ್ತಿಯ ಕಿರಣ ಕ್ಯಾಪ್ಟನ್ ಲಕ್ಷ್ಮೀಯವರಿಗೆ ಅನಂತಾನಂತ ವಂದನೆಗಳು. ○

ಪ್ರಸಕ್ತ ರಾಜಕೀಯ ಪರಿಸ್ಥಿತಿಯ ಬಗ್ಗೆ ಪ್ರಕಾಶ್ ಕಾರತ್

ಸ್ವತಂತ್ರ ಭಾರತದ ಅತ್ಯಂತ ವಿದೇಶಿ-ಪರ ಸರ್ಕಾರ ಇದು

ಮೇ ೨೧ ರಂದು ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೊ ಸದಸ್ಯ ಪ್ರಕಾಶ್ ಕಾರತ್ ಬೆಂಗಳೂರಲ್ಲಿ ಇದ್ದರು. ಬೆಂಗಳೂರು ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ಏರ್ಪಡಿಸಿದ್ದ ಸಭೆಯಲ್ಲಿ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ಸಿ.ಪಿ.ಐ.(ಎಂ) ನಿಲುವುಗಳ ಬಗ್ಗೆ ವಿವರ ನೀಡಿದರು. ಈ ಬಗ್ಗೆ ಸಿ.ಪಿ.ಐ(ಎಂ) ಸದಸ್ಯರು, ಹಿತೈಷಿಗಳು, ಜನ, ಮಾಧ್ಯಮಗಳು ಎತ್ತುತ್ತಿರುವ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು-ಖಚಿತವಾಗಿ, ಸ್ಪಷ್ಟವಾಗಿ ನಿಖರವಾಗಿ ಅಂತಹ ಪ್ರಶ್ನೆಗಳು ಹಾಗೂ ಉತ್ತರಗಳನ್ನು ಕೆಳಗೆಕೊಡಲಾಗಿದೆ.

ಸಿಪಿಐ(ಎಂ)ನ ಚುನಾವಣಾ ಘೋಷಣೆ ಏನು?

ಈ ಚುವಾನಣೆಯ ಕೇಂದ್ರ ಪ್ರಶ್ನೆ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರಬೇಕೆ ಎಂಬುದು. ಸಿಪಿಐ(ಎಂ)ಗೆ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಅಧಿಕಾರಕ್ಕೆ ಬರದಂತೆ ತಡೆಯುವುದು ಮುಖ್ಯ ಗುರಿ. ಎಲ್ಲಾ ಚುನಾವಣಾ ತಂತ್ರಗಳು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳನ್ನು ಸೋಲಿಸುವತ್ತ ಇರುತ್ತದೆ. ಬಿಜೆಪಿಯ ಮಿತ್ರಪಕ್ಷಗಳು ಹಲವು ರಾಜ್ಯಗಳಲ್ಲಿ ಬಿಜೆಪಿಯ 'ಪ್ರಾಕ್ಸಿ'ಯಾಗಿವೆ. ಅವನ್ನು ಸೋಲಿಸುವುದೂ ಅಷ್ಟೇ ಮುಖ್ಯ. ತಮಿಳುವಾಡಿನಲ್ಲಿ ಡಿಎಂಕೆ, ಆಂಧ್ರದಲ್ಲಿ ತೆಲುಗುದೇಶಂ ಸೋಲಿಸುವುದು ಈ ಸರ್ಕಾರದ ದುರಾಡಳಿತ, ಕೋಮುವಾದ, ಸಂವಿಧಾನದ ಬುಡಮೇಲು ಕೃತ್ಯ ಮುಂದುವರೆಯುವುದನ್ನು ತಡೆಯಲು ಅಷ್ಟೇ ಮುಖ್ಯ. ಎರಡನೇ ಮುಖ್ಯ ಘೋಷಣೆ ಮೂರನೇಯ ರಂಗ ರಚಿಸುವುದು ಮತ್ತು ಬಲಗೊಳಿವುದು. ಇದರರ್ಥ ಯಾವ ರಾಜ್ಯಗಳಲ್ಲಿ ಸಾಧ್ಯ ಇದೆಯೊ ಅಲ್ಲೆಲ್ಲಾ ಬಿಜೆಪಿ, ಕಾಂಗ್ರೆಸ್ಸೇತರ ಪಕ್ಷಗಳನ್ನು ಒಂದೆಡೆ ತಂದು ರಂಗ ಕಟ್ಟುವುದು. ಇದು ಸಾಧ್ಯವಿಲ್ಲದ ರಾಜ್ಯಗಳಲ್ಲಿ (ಉದಾ: ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ) ಬಿಜೆಪಿ ಕಾಂಗ್ರೆಸ್ ನೇರಸ್ಪರ್ಧೆ ಇರುವಲ್ಲಿ ಮಾತ್ರ ಬಿಜೆಪಿ ಸೋಲಿಸಲು ಕಾಂಗ್ರೆಸ್‌ಗೆ ಬೆಂಬಲ ಕೊಡುವುದು. ಇದು ನಮ್ಮ ಚುನಾವಣಾ ತಂತ್ರ.

'ವಿದೇಶಿ ಹುಟ್ಟು' ಚರ್ಚೆ ಬಗ್ಗೆ ಏನು ಹೇಳುತ್ತೀರಿ? ಪವಾರ್‌ರ ಹೊಸ ಪಕ್ಷ ಅಥವಾ ರಂಗದ ಬಗ್ಗೆ ನಿಮ್ಮ ಧೋರಣೆ ಏನಿರುತ್ತದೆ?

ಭಾರತೀಯ ನಾಗರೀಕರೆಲ್ಲರಿಗೂ ಭಾರತದಲ್ಲಿ ಹುಟ್ಟಿರಲಿ, ವಿದೇಶದಲ್ಲಿ ಹುಟ್ಟಿರಲಿ ರಾಜಕೀಯ ಚುನಾವಣೆಯಲ್ಲಿ ಭಾಗವಹಿಸುವ, ಪ್ರಧಾನ ಮಂತ್ರಿಯಾಗುವ ಹಕ್ಕು ಇದೆ. ನಮ್ಮ ಧೋರಣೆ ಯಾವುದೇ ಪಕ್ಷದ ಬಗ್ಗೆ ನಿರ್ಧಾರಿತವಾಗುವುದು ಅದು ವಿದೇಶಿ-ಪರ ನೀತಿ ಅನುಸರಿಸುತ್ತದೋ, ಸ್ವದೇಶಿ-ಜನಪರ ನೀತಿ ಅನುಸರಿಸುತ್ತದೋ ಎಂಬ ಬಗ್ಗೆ. ಈ ಬಗ್ಗೆ ನೂರಕ್ಕೆ ನೂರು ಶುದ್ಧ ಸ್ವದೇಶಿ ಎನ್ನುವ ವಾಜಪೇಯಿ ಮತ್ತು ಅದರ ಸರ್ಕಾರದ ರೆಕಾರ್ಡ್ ಏನು? ಇಷ್ಟು ವಿದೇಶಿ-ಪರ ಸರ್ಕಾರ ಸ್ವತಂತ್ರ ಭಾರತದಲ್ಲಿ ಎಂದೂ ಇರಲಿಲ್ಲ. ನಮ್ಮ ಮೇಲೆ ಅಂತರ್‍ರಾಷ್ಟ್ರೀಯ ದಿಗ್ಬಂಧನ ಆದಾಗ, ಈ ಸರ್ಕಾರ 8 ತಿಂಗಳ ಕಾಲ ಸಾಮ್ರಾಜ್ಯಶಾಹಿಗೆ ಶರಣಾಗಿ ಸಿಟಿಬಿಟಿಗೆ ಸಹಿ ಹಾಕುವ ಬಗ್ಗೆ ಗುಪ್ತ ಮಾತುಕತೆ ನಡೆಸಿತು. ಈಗ ಕುಪ್ರಸಿದ್ಧ ತಾಲ್‌ಬೋಟ್-ಜಸ್ವಂತ್ ಸಿಂಗ್ ಮಾತುಕತೆ. ಹಿಂದೆ ಯಾವ ಕಾಂಗ್ರೆಸ್ ಸರ್ಕಾರ ಎಷ್ಟೇ ಸಾಮ್ರಾಜ್ಯಶಾಹಿ ಪರ ಇರಲಿ ಈ ಮಟ್ಟಕ್ಕೆ ಇಳಿದಿರಲಿಲ್ಲ. ಅಂತಹ ಧೈರ್ಯ ತೋರಿರಲಿಲ್ಲ. ಈ ಬಗ್ಗೆ ಅತ್ಯಂತ ಕೆಟ್ಟ ರೆಕಾರ್ಡ್ ಇರುವ ನರಸಿಂಹ ರಾವ್ ಸರ್ಕಾರ ಸಹ - ಇನ್ನೂ ಆರ್ಥಿಕ ನೀತಿಗಳಲ್ಲಂತೂ ಕೇಳುವುದೇ ಬೇಡ. ನಮ್ಮ ಸ್ವದೇಶಿ, ಸ್ವಾವಲಂಬನೆಗೆ ಬೆನ್ನೆಲುಬಾಗಿರುವ ಸಾರ್ವಜನಿಕ ಕ್ಷೇತ್ರಗಳನ್ನು ತಾನು 50ರ ದಶಕದಲ್ಲೇ ವಿರೋಧಿಸಿತ್ತು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ ಬಿಜೆಪಿ. ನರಸಿಂಹರಾವ್- ಮನಮೋಹನ ಸಿಂಗ್ ಕಾಂಗ್ರೆಸ್ ತನ್ನ ನೀತಿ ಕಾಪಿ ಹೊಡೆಯುತ್ತಿದೆ ಎನ್ನುತ್ತಾರೆ ಅವರು. ಸಾರ್ವಜನಿಕ ಕ್ಷೇತ್ರವನ್ನು ನಿರ್ನಾಮ ಮಾಡಲು ಅತ್ಯಂತ ಹೆಚ್ಚಿನ ಕುಕೃತ್ಯಗಳನ್ನು ಮಾಡಿದೆ ಈ ಸರ್ಕಾರ. ತಾತ್ಕಾಲಿಕ ಸರ್ಕಾರವಾದರೂ ಇಂಡಿಯನ್ ಏರ್‌ಲೈನ್ಸ್‌ನ್ನು ಖಾಸಗೀಕರಿಸಲು ಹೊರಟಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಬಾಗಿಲನ್ನು ಪೂರ್ಣವಾಗಿ ತೆರೆದಿದೆ. ಇನ್ನು ಪವಾರ್ ಬಗ್ಗೆ, ಪವಾರ್ ಯಾವ ನೀತಿ ಹೊಂದಿರುತ್ತಾರೆ ಅದರ ಮೇಲೆ ನಾವು ನಮ್ಮ ಧೋರಣೆ ನಿರ್ಧರಿಸುತ್ತೇವೆ. ಈವರೆಗಂತೂ ವಿದೇಶಿ-ಪರ ಆರ್ಥಿಕ ನೀತಿ ವಿರುದ್ಧ ಪವಾರ್ ಚಕಾರವೆತ್ತಿದ್ದು ನಾವು ಕೇಳಿಲ್ಲ. ಪ್ರತ್ಯೇಕ ಪಕ್ಷ ಮಾಡಿದ ಮೇಲೆ ಎನನ್ನುತ್ತಾರೆ ಎನ್ನುವುದರ ಮೇಲೆ ನಾವು ನಮ್ಮ ಧೋರಣೆ ನಿರ್ಧರಿಸುತ್ತೇವೆ.

ಕಾಂಗ್ರೆಸ್‌ಗೆ ಏಕೆ ಬೆಂಬಲ?


ಮೊದಲನೆಯದಾಗಿ ಕಾಂಗ್ರೆಸ್‌ಗೆ ನಾವು ಕಣ್ಣುಮುಚ್ಚಿ ಸಾರಾಸಗಟು ಬೆಂಬಲ ಕೊಡುತ್ತಿಲ್ಲ. 12ನೇ ಲೋಕಸಭೆಯಲ್ಲಿ ಪಕ್ಷಗಳ ಬಲಾಬಲದ ಹಿನ್ನೆಲೆಯಲ್ಲಿ ಬಿಜೆಪಿಗೆ ಬದಲಿ ತರಬೇಕಾದರೆ ಕಾಂಗ್ರೆಸ್ ಪ್ರಮುಖ ಶಕ್ತಿಯಾಗಿದ್ದರಿಂದ ಅವರು ಬದಲಿ ಸರ್ಕಾರ ರಚಿಸುವುದಾದರೆ ನಿರ್ಧಿಷ್ಟ ವಿಷಯಗಳ ಮೇಲೆ ಆಧಾರಿತ ಬೆಂಬಲ ಇದೆ ಎಂದು ಮಾತ್ರ ನಾವು ಹೇಳಿದ್ದು. ಇದರ ಅರ್ಥ ಮೈತ್ರಿಯೂ ಅಲ್ಲ, ಕೂಟವೂ ಅಲ್ಲ ಅಂತಹ ಕಾಂಗ್ರೆಸ್ ನಾಯಕತ್ವದ ಸರ್ಕಾರ ಬಂದಿದ್ದರೆ ಉದಾಹರಣೆಗೆ ಅದು ಇನ್ಸುರೆನ್ಸ್ ಬಿಲ್ ತರಲು ಪ್ರಯತ್ನಿಸಿದ್ದರೆ ನಾವು ಅದಕ್ಕೆ ಬೆಂಬಲ ಕೊಡುತ್ತಿರಲಿಲ್ಲ. ಆಗತ್ಯ ಬಿದ್ದರೆ ಆ ವಿಷಯ ಮೇಲೆ ಬೆಂಬಲ ವಾಪಸು ತೆಗೆದುಕೊಳ್ಳುತ್ತಿದ್ದೆವು. ಈ ಚುನಾವಣೆಯಲ್ಲಿ ಎಲ್ಲೂ ಕಾಂಗ್ರೆಸ್ ಜತೆ ನಾವು ಮೈತ್ರಿಯಾಗಲೀ, ಕೂಟವಾಗಲಿ ರಚಿಸುವುದಿಲ್ಲ. ಮೂರನೇ ರಂಗ ಇಲ್ಲದ ಕಡೆ ಬಿಜೆಪಿ ಸೋಲಿಸಲು ಕಾಂಗ್ರೆಸ್‌ಗೆ ಬೆಂಬಲ ಕೊಡುತ್ತೇವೆ ಅಷ್ಟೇ. ಉಳಿದೆಲ್ಲಾ ಕಡೆ ಬಿಜೆಪಿ, ಕಾಂಗ್ರೆಸ್ ಎರಡನ್ನೂ ಸೋಲಿಸುವುದು ನಮ್ಮ ಗುರಿ. ಏಕೆಂದರೆ ಇವೆರಡೂ ಆರ್ಥಿಕ ನೀತಿಗಳಲ್ಲಿ ಜನ-ವಿರೋಧಿಯಾದವು.

ಇದು ಸಿಪಿಐ(ಎಂ) ಮೂಲ ಭೂತ ನೀತಿಯ ಬದಲಾವಣೆ ಅಲ್ಲವೆ?

ಸಿಪಿಐ(ಎಂ)ನ ಮೂಲಭೂತ ನೀತಿ ಇದ್ದದ್ದು ಬೂರ್ಜ್ವಾ-ಭೂಮಾಲಕ ಆಳುವ ವರ್ಗದ ಪ್ರಧಾನ ಪಕ್ಷ ನಮ್ಮ ಮೊದಲ ವೈರಿ. ಅದರ ಜತೆ ಯಾವುದೇ ಮೈತ್ರಿ ಕೂಟ ವರ್ಗ ಶಾಮೀಲಾಗುತ್ತದೆ. ಇದೇ ನೀತಿಯ ಆಧಾರದ ಮೇಲೆ ಅವಿಭಜಿತ ಕಮ್ಯುನಿಸ್ಟ್ ಪಕ್ಷದಿಂದ ನಾವು ಹೊರ ಬಂದಿದ್ದು. ಸಿಪಿಐ(ಎಂ) ಆದದ್ದು. ಈಗಲೂ ಅದೇ ನೀತಿ. ಆದರೆ ಬದಲಾವಣೆ ಆಗಿದ್ದು ನಮ್ಮ ನೀತಿಯಲ್ಲಲ್ಲ. ಆಳುವ ವರ್ಗದ ರಾಜಕೀಯದಲ್ಲಿ ಬದಲಾವಣೆ ಆಗಿದೆ. ಇವತ್ತು ಬೂರ್ಜ್ವಾ - ಭೂಮಾಲಕ ಆಳುವವರ್ಗದ ಪ್ರಧಾನ ಪಕ್ಷವಾಗಿ ಬಿಜೆಪಿ ಹೊಮ್ಮಿದೆ. ಇತ್ತೀಚೆಗೆ ಬಿಜೆಪಿ ಸರ್ಕಾರ ಬೀಳದಂತೆ ತಡೆಯುವಲ್ಲಿ ದೇಶದ ಎಲ್ಲಾ ಗುತ್ತೇದಾರಿ ಕಂಪನಿಗಳು, ಸಾಮ್ರಾಜ್ಯಶಾಹಿಗಳು ನೀರಿನಂತೆ ಹಣಹರಿಸಿದ್ದು, ಟೊಂಕ ಕಟ್ಟಿ ನಿಂತದ್ದು ಇದನ್ನು ನಗ್ನವಾಗಿ ತೋರಿಸಿದೆ. ಬಿಜೆಪಿ ಆಳುವ ವರ್ಗಗಳ ಪ್ರಧಾನ ಪಕ್ಷ ಮಾತ್ರ ಅಲ್ಲ. ಎಲ್ಲಾ ಬಲಪಂಥೀಯ ಪ್ರತಿಗಾಮಿ ಶಕ್ತಿಗಳು ಅದರಲ್ಲಿ ಸಮ್ಮಿಳಿತವಾಗಿದೆ. ಕಾಂಗ್ರೆಸ್ ಈಗ ಆಳುವ ವರ್ಗಗಳ ಪ್ರಧಾನ ಪಕ್ಷ ಅಲ್ಲ. ಆದ್ದರಿಂದ ನಮ್ಮ ಮುಖ್ಯ ವೈರಿಯಲ್ಲ. ಆದರೆ ಇನ್ನೂ ಆಳುವವರ್ಗಗಳ ಪಕ್ಷವೇ ಆದ್ದರಿಂದ ನಮ್ಮ ವೈರಿಯೇ. ಪ್ರಧಾನ ವೈರಿಯನ್ನು ದುರ್ಬಲಗೊಳಿಸುವುದು, ಸೋಲಿಸುವ ನಮ್ಮ ಮುಖ್ಯ ಗುರಿ.

ಬಿಜೆಪಿ ತನ್ನ ಮ್ಯಾನಿಫೆಸ್ಟೋ ಬಿಡುಗಡೆ ಮಾಡುತ್ತಿಲ್ಲ. ಮಿತ್ರಪಕ್ಷಗಳ ಜತೆ ಹೊಸ ಕೂಟ NDA ಗೆ ಒಂದೇ ಮ್ಯಾನಿಫೆಸ್ಟೋ ಇರುತ್ತದಲ್ಲ. ಇದು ಅವರ ನೀತಿ ಬದಲಾವಣೆಯಲ್ಲವೇ?

ಅಲ್ಲ, 1998 ರಲ್ಲೂ ಬಿಜೆಪಿ ಮ್ಯಾನಿಫೆಸ್ಟೋ ಇದ್ದರೂ, ಅವರು ಹೇಳಿದ್ದು ಮಿತ್ರಪಕ್ಷಗಳ ಜತೆ ರಚಿಸಿದ ನಾಗ್(NAG -National Agenda for Goverarnce ಆಡಳಿತಕ್ಕೆ ರಾಷ್ಟ್ರೀಯ ಅಜೆಂಡಾ) ಸರ್ಕಾರದ ಮ್ಯಾನಿಫೆಸ್ಟೋ ಅಂತ. ಆದರೆ ಹಾಗಾಯಿತೆ? ಕ್ರಿಶ್ಚಿಯನ್ನರ ಮೇಲೆ ಧಾಳಿ ಬಿಜೆಪಿ ಮತ್ತು ಸಂಘ ಪರಿವಾರದ ನೀತಿಯಾಗಿತ್ತು. ಆ ಪ್ರಕಾರ ಅದು ಜಾರಿಯಾಯಿತು. ಸರ್ಕಾರ ಅದಕ್ಕೆ ಕುಮ್ಮಕ್ಕು ಕೊಟ್ಟಿತು. ಅದೇ ರೀತಿ ಅಯೋಧ್ಯಾ-ದೇವಸ್ಥಾನದ ಕೆಲಸ ದೂರದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದು ಸಂವಿಧಾನ ಬುಡಮೇಲು ಮಾಡುವ ಹಲವಾರು ಕೆಲಸಗಳನ್ನು ಮಾಡಿದರು. ಇವೆಲ್ಲ ನಾಗ್‌ನಲ್ಲಿ ಇತ್ತೆ? ಇಲ್ಲ, ಇರಲು ಸಾಧ್ಯವೂ ಇಲ್ಲ. ಆದ್ದರಿಂದ ಬಿಜೆಪಿ ಮೈತ್ರೀಕೂಟದ ಘೋಷಿತ ಮ್ಯಾನಿಫೆಸ್ಟೋ ಏನೇ ಇರಲಿ, ಅವರ ನಿಜವಾದ ಮ್ಯಾನಿಫೆಸ್ಟೋ ಸಂಘ ಪರಿವಾರದ್ದೆ. ಆರೆಸ್ಸೆಸ್ ಹಿಂದುತ್ವ ವೇ ಅದರ ಮುಖ್ಯ ಅಜೆಂಡಾ. ಈಗಲೂ ಆಗುತ್ತಿರುವುದು ಅದೇ. NDA ಮ್ಯಾನಿಫೆಸ್ಟೋ ಹಿಂದೂತ್ವ ಅಜೆಂಡಾ ಇರಲು ಸಾಧ್ಯವಿಲ್ಲ. ಅಯೋಧ್ಯ ದೇವಸ್ಥಾನ ಕಟ್ಟುವುದು, ಬಲವಂತ ಮತಾಂತರ ಪ್ರಶ್ನೆಯಾಗಲೀ, ಕಾಶ್ಮೀರ ಸ್ಥಾನಮಾನ-, ಅಲ್ಪಸಂಖ್ಯಾತರ ಸ್ಥಾನಮಾನಗಳಿಗೆ ಹಿಂದುತ್ವ ಅಜೆಂಡಾ ಸೇರಿಸಿದರೆ ಅಂತಹ ಮ್ಯಾನಿಫೆಸ್ಟೋಗೆ ಡಿಎಂಕೆ, ಜಾರ್ಜ್ ಫರ್ನಾಂಡೀಸ್, ರಾಮಕೃಷ್ಣ ಹೆಗಡೆ, ಮಮತಾ ಒಪ್ಪುವುದಿಲ್ಲ. ಆದ್ದರಿಂದ ಈ ನಾಟಕ. ಬಿಜೆಪಿ ತನ್ನ ಪ್ರತ್ಯೇಕ ಮ್ಯಾನಿಫೆಸ್ಟೋ ಘೋಷಿಸುತ್ತದೋ ಇಲ್ಲವೋ ಎನ್ನುವುದು ಅಪ್ರಸ್ತುತ. ಬಿಜೆಪಿ ಸರ್ಕಾರ ಜಾರಿ ಮಾಡುವುದು ಆರೆಸ್ಸೆಸ್‌ನ ಹಿಂದುತ್ವ ಅಜೆಂಡಾವನ್ನೇ. ಈ ಬಗ್ಗೆ ನಮಗಂತೂ ಏನೂ ಸಂಶಯವಿಲ್ಲ.



ಮೂರನೆಯ ರಂಗ ಎಲ್ಲಿದೆ?

ನಿಜ, ಈಗ ಮೂರನೆಯ ರಂಗ ಅಸ್ತವ್ಯಸ್ತವಾಗಿದೆ. 1996 ರಲ್ಲಿ ಸಂಯುಕ್ತ ರಂಗವಾಗಿ ಸಾಧಿಸಿದ್ದ ಐಕ್ಯತೆ ದುರ್ಬಲವಾಗಿದೆ. 1998 ರ ಹೊತ್ತಿಗೆ ಆದರೆ 1998 ರ ಚುನಾವಣೆಯಲ್ಲಿ ಬಿಜೆಪಿ, ಕಾಂಗ್ರೆಸ್ಸೇತರ ಪಕ್ಷಗಳಿಗೆ ಬಿದ್ದ ಮತ ಅರ್ಧಕ್ಕಿಂತ ಹೆಚ್ಚು. ಬಹುಸಂಖ್ಯಾತ ಎಂದು ಇಲ್ಲಿ ನೆನಪಿನಲ್ಲಿಡಬೇಕು. ಮೂರನೇಯ ರಂಗದ ಕೆಲವು ಪಕ್ಷಗಳು ಬಿಜೆಪಿ, ಕಾಂಗ್ರೆಸ್ ಜತೆ ಹೋಗಿದ್ದಾರೆ ನಿಜ. ಆದರೆ ಅದರಿಂದ ಅವುಗಳ ಜಾತ್ಯಾತಿತ ಸ್ವರೂಪ ಬದಲಾಗಿಲ್ಲ. ಫೆಡರಲ್ ಸ್ವರೂಪ ಬದಲಾಗಿಲ್ಲ. ಕೆಲವು ಕೆಟ್ಟ ಅನುಭವದ ನಂತರ ಅವು ವಾಪಸ್ಸು ಬರುತ್ತವೆ. ಈ ಪಕ್ಷಗಳು ಹೋಗುವುದು, ಬರುವುದು ಮುಂದುವರೆಯುತ್ತದೆ. ಮೂರನೇಯ ರಂಗಕ್ಕೆ ಗ್ಯಾರಂಟಿ ಪ್ರಬಲ ಎಡಶಕ್ತಿ ಮಾತ್ರ, ಅಲ್ಲಿಯವರೆಗೆ ಈ ಅಸ್ತವ್ಯಸ್ತ ಮುಂದುವರೆಯಬಹುದು. ಬಿಜೆಪಿ, ಕಾಂಗ್ರೆಸ್ ಎರಡನ್ನೂ ವಿರೋಧಿಸುವ ಜನ ಬಹುಸಂಖ್ಯಾತರಿದ್ದಾರೆ. ಆದ್ದರಿಂದ ಈ ಜನರ ಆಶೋತ್ತರಗಳನ್ನು ಈಡೇರಿಸಲು ಮೂರನೇ ರಂಗ ಒಂದೇ ದಾರಿ. ಹೀಗೆ ಮೂರನೇ ರಂಗಕ್ಕೆ ವಿಶಾಲ ಜನ ಬೆಂಬಲ ನೆಲೆ ಇದೆ. ಆದ್ದರಿಂದ ಮತ್ತೆ ಅದು ಚಿಗುರುತ್ತದೆ, ಪ್ರಬಲವಾಗುತ್ತದೆ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಶಾಸಿ ಪ್ರಿಂಟರ್ಸ್, ಕ್ರೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ